ಸಂಪುಟ : ೨೭

ಸಂಚಿಕೆ : ೩

ಕರ್ನಾಟಕ ಭಾರತಿ

ಸಂಕ್ರಮಣ ಸಂಚಿಕೆ

ಜನೆವರಿ-ಮಾರ್ಚ್, ೧೯೯೫

ಕರ್ನಾಟಕ ವಿಶ್ವವಿದ್ಯಾಲಯ, ಧಾರವಾಡ

ಲೇಖಕರಿಗೆ ಸೂಚನೆಗಳು

"ಕರ್ನಾಟಕ ಭಾರತಿ"ಯು ಸೃಜನ, ವಿಮರ್ಶನ, ಸಂಶೋಧನ, ಸಾಹಿತ್ಯ, ವಿಜ್ಞಾನ ಮತ್ತು ಮಾನವಿಕ ವಿಷಯಗಳ ಅಭಿವೃದ್ಧಿಗಾಗಿ ಮೀಸಲಾಗಿದ್ದು, ಅದರಲ್ಲಿ ಪ್ರಕಟನೆಗಾಗಿ ಈ ಬಗೆಯ ಎಲ್ಲ ಲೇಖನಗಳಿಗೂ ಸ್ವಾಗತವಿದೆ. ಅನುವಾದ ಲೇಖನಗಳಿದ್ದರೆ ಮೂಲ ಲೇಖಕರ ಅಥವಾ ಪ್ರಕಾಶಕರ ಅನುಮತಿಯನ್ನು ಕಳುಹಿಸಬೇಕು.

ಲೇಖನಗಳನ್ನು ಕಾಗದದ ಒಂದೇ ಮಗ್ಗುಲಲ್ಲಿ ಸಾಕಷ್ಟು ಮಾರ್ಜಿನ್ ಬಿಟ್ಟು, ಸ್ಪಷ್ಟವಾಗಿ ಬರೆದಿರಬೇಕು, ಇಲ್ಲವೆ ಟೈಪು ಮಾಡಿರಬೇಕು. ಹಸ್ತಪ್ರತಿಗಳು ಯಾವ ರೀತಿಯಿಂದಲೂ ಅಸ್ಪಷ್ಟವಾಗಿಯಾಗಲೀ ಅಪೂರ್ಣವಾಗಿಯಾಗಲೀ ಇರಬಾರದು.

ಲೇಖನ ಸ್ವೀಕೃತವಾದ ಕೂಡಲೇ ಲೇಖಕರಿಗೆ ತಿಳಿಸಲಾಗುತ್ತದೆ. ಅಸ್ವೀಕೃತ ಲೇಖನಗಳನ್ನು ಮರಳಿ ಪಡೆಯಲಿಚ್ಛಿಸುವವರು ಸಾಕಷ್ಟು ಅಂಚೆ ಚೀಟಿಗಳನ್ನು ಕಳುಹಿಸಬೇಕು.

ಲೇಖಕರಿಗೆ ಅವರ ಲೇಖನಗಳ ೨೫ ಪ್ರತಿಗಳನ್ನು ಲೇಖನವು ಪ್ರಕಟವಾದ ಸಂಚಿಕೆಯ ಪ್ರತಿಯೊಂದಿಗೆ ಕಳುಹಿಸಲಾಗುತ್ತದೆ. ಹೆಚ್ಚಿಗೆ ಪ್ರತಿಗಳು ಬೇಕಾದವರು ಅದರ ಮುದ್ರಣಾದಿ ವೆಚ್ಚವನ್ನು ವಹಿಸಬೇಕಾಗುತ್ತದೆ. ಲೇಖನ ಅಚ್ಚಾಗುವ ಪೂರ್ವದಲ್ಲಿ ಈ ವಿಷಯಕ್ಕೆ ತಿಳಿಸಬೇಕು.

ಲೇಖನಗಳನ್ನು ವಿಮರ್ಶೆಗಾಗಿ ಪುಸ್ತಕಗಳನ್ನು ಸಂಪಾದಕರು. "ಕರ್ನಾಟಕ ಭಾರತಿ" ಕನ್ನಡ ಅಧ್ಯಯನಪೀಠ, ಕರ್ನಾಟಕ ವಿಶ್ವವಿದ್ಯಾಲಯ, ಧಾರವಾಡ ಇವರಿಗೆ ಕಳುಹಿಸಬೇಕು. ವಿಮರ್ಶೆಗಾಗಿ ಪುಸ್ತಕಗಳನ್ನು ಕಳುಹಿಸುವವರು ಎರಡು ಪ್ರತಿಗಳನ್ನು ಕಳುಹಿಸಬೇಕು. ಇನ್ನಿತರ ಯಾವದೇ ವಿಷಯಕ್ಕೆ ನಿರ್ದೇಶಕರು ಪ್ರಸಾರಾಂಗ, ಕರ್ನಾಟಕ ವಿಶ್ವವಿದ್ಯಾಲಯ, ಧಾರವಾಡ–೫೮೦ ೦೦೩ ಇವರಿಗೆ ಬರೆಯಬೇಕು.

ಕರ್ನಾಟಕ ಭಾರತಿ

೧. ಸ್ವಾತಂತ್ರ್ಯೋತ್ಸವ ಸಂಚಿಕೆ
೨. ರಾಜ್ಯೋತ್ಸವ ಸಂಚಿಕೆ
೩. ಸಂಕ್ರಮಣ ಸಂಚಿಕೆ
೪. ಅಕ್ಷಯಾ ತೃತೀಯಾ ಸಂಚಿಕೆ

ಬಿಡಿ ಸಂಚಿಕೆಯ ಬೆಲೆ : ರೂ. ೨೦–೦೦

ಈ ಹಣವನ್ನು ವಿತ್ತಾಧಿಕಾರಿಗಳು, ಕರ್ನಾಟಕ ವಿಶ್ವವಿದ್ಯಾಲಯ, ಧಾರವಾಡ ಇವರ ಹೆಸರಿನಲ್ಲಿ ಡಿಮಾಂಡ ಡ್ರಾಫ್ಟ್ ತೆಗೆಯಿಸಿ, ನಿರ್ದೇಶಕರು, ಪ್ರಸಾರಾಂಗ, ಕರ್ನಾಟಕ ವಿಶ್ವವಿದ್ಯಾಲಯ, ಧಾರವಾಡ ಇವರ ವಿಳಾಸಕ್ಕೆ ಕಳುಹಿಸಬೇಕು.

ಕರ್ನಾಟಕ ಭಾರತಿ

ತ್ರೈಮಾಸಿಕ ಪತ್ರಿಕೆ

ಸಂಪುಟ:೧೭ ಸಂಚಿಕೆ :೩

ಗೌರವ ಸಂಪಾದಕರು
ಡಾ. ಎಸ್. ರಾಮೇಗೌಡ
ಕುಲಪತಿಗಳು

ಸಂಪಾದಕರು
ಡಾ. ವೀರಣ್ಣ ರಾಜೂರ
ಡಾ. ಬಿ.ಆರ್. ಹಿರೇಮಠ



ಪ್ರಸಾರಾಂಗ
ಕರ್ನಾಟಕ ವಿಶ್ವವಿದ್ಯಾಲಯ, ಧಾರವಾಡ

ಕರ್ನಾಟಕ ಭಾರತಿ

ಕರ್ನಾಟಕ ವಿಶ್ವವಿದ್ಯಾಲಯದ ತ್ರೈಮಾಸಿಕ ಪತ್ರಿಕೆ

ಸಂಚಿಕೆ: ೩

ಸಂಪುಟ: ೨೭

ಜನವರಿ-ಮಾರ್ಚ್-೧೯೯೫

ಸಂಕ್ರಮಣ ಸಂಚಿಕೆ

ಪ್ರಕಾಶಕರು:
ಪ್ರೊ. ಎಚ್. ವ್ಹಿ. ನಾಗೇಶ್
ನಿರ್ದೇಶಕರು
ಪ್ರಸಾರಾಂಗ, ಕರ್ನಾಟಕ ವಿಶ್ವವಿದ್ಯಾಲಯ, ಧಾರವಾಡ

ಮುದ್ರಕರು:
ಎಸ್. ಎಸ್. ಮಾಲಿಪಾಟೀಲ, ಎಂ.ಕಾಮ್.
ನಿರ್ದೇಶಕರು
ಕರ್ನಾಟಕ ವಿಶ್ವವಿದ್ಯಾಲಯ ಮುದ್ರಣಾಲಯ, ಧಾರವಾಡ

ಪರಿವಿಡಿ

ಕೆಳದಿ ನಿರ್ವಾಣ ಮಂತ್ರಿ ವಿರಚಿತ ಶಿವಪೂಜಾವಿಧಿ

● ಕೆಳದಿ ಗುಂಡಾಜೋಯಿಸ್

ಕ್ರಿ.ಶ. ೧೪೯೯ ರಿಂದ ೧೭೬೩ ರವರೆಗೆ ವೈಭವದಿಂದ ರಾಜ್ಯವಾಳಿದ ಕೆಳದಿ ಅರಸುಮನೆತನದ ಚರಿತ್ರೆ ಭಾರತದಲ್ಲಿಯೇ ದೇಶೀಯ ಸಂಸ್ಥಾನವನ್ನು ಕುರಿತು ವೈವಿಧ್ಯತೆಯಿಂದ ಕೂಡಿದ ಇತಿಹಾಸ. ಧಾರ್ಮಿಕ ನೀತಿ ಹಾಗೂ ಆದರ್ಶಪಾಲನೆಗೆ ಕೆಳದಿ ಇತಿಹಾಸವು ಪ್ರಮುಖ ಸಂಗತಿಗಳನ್ನು ನೀಡುತ್ತದೆ. ರಾಷ್ಟ್ರಪ್ರೇಮ ಮತ್ತು ಪ್ರಜೆಗಳ ನೆಮ್ಮದಿಗೆ ಸ್ಪಂದಿಸಿದ ಕೆಳದಿ ದೊರೆಗಳು ತಮಗೆ ಒದಗಿದ ಉಪಟಳಗಳ ಮಧ್ಯೆ ಹೇಗೆ ಶ್ರಮಿಸಿದ್ದರೆಂಬುದನ್ನು ವಿದೇಶೀ ಸಮಕಾಲೀನ ಚಾರಿತ್ರಿಕ ದಾಖಲೆಗಳು ಬಿತ್ತರಿಸಿವೆ. ಹಲವನ್ನು ಈ ಕೆಳಕಂಡಂತೆ ವಿಶ್ಲೇಷಿಸಬಹುದು.

ಧಾರ್ಮಿಕ ನೀತಿ ಆದರ್ಶಪಾಲನೆ:

೧. ಈ ದೊರೆಗಳು ಸಾಮರ್ಥ್ಯಶೀಲರಾಗಿದ್ದರೂ ವಿಜಯನಗರ ಚಕ್ರವರ್ತಿಗೆ ದೊಡ್ಡಸಂಕಣ್ಣನಾಯಕನು ಗೋವೆಯನ್ನು ಜಯಿಸಿಕೊಟ್ಟುದು.*

೨. ಉಪ್ಪುಂಡ ಮನೆಗೆ ಎರಡು ಬಗೆಯದಂತೆ ವಿಜಯನಗರ ಚಕ್ರವರ್ತಿ ಶ್ರೀರಂಗರಾಯನು ಶತ್ರುಗಳ ಉಪಟಳದಿಂದ ರಕ್ಷಣೆಗಾಗಿ ಓಡಿಬಂದಾಗ ಕೆಳದಿ ಶಿವಪ್ಪನಾಯಕನು ತಾನು ಸಾಮ್ರಾಜ್ಯದ ಅಧಿಪತಿಯಾಗಿದ್ದರೂ ಅದನ್ನು ಗಣನೆಗೆ ತಾರದೆ ವಿನೀತನಾಗಿ ಆತನನ್ನು ಸನ್ಮಾನಿಸಿ ಸಕ್ಕರೇಪಟ್ಟಣದ ಆಧಿಪತ್ಯ ನೀಡಿದುದು.

೩. ಮರ್ರಾಠೆಯ ಸರದಾರ ಶಿವಾಜಿಯು ಕೆಳದಿ ರಾಜ್ಯಕ್ಕೆ ಸೇರಿದ್ದ ಬಸರೂರನ್ನು ಮುತ್ತಿ ದಾಳಿಯಿಂದ ಹಾವಳಿಯನ್ನೆಸಗಿದ್ದರೂ ಕೆಳದಿ ರಾಣಿ ಚೆನ್ನಮ್ಮಾಜಿಯು ಇದನ್ನು ಮನಸ್ಸಿಗೆ ತಂದುಕೊಳ್ಳದೆ ಔರಂಗಜೇಬನ ಉಪಟಳದಿಂದ ಶರಣಾಗತನಾಗಿ ಓಡಿಬಂದು ಮರೆಹೊಕ್ಕು ಆಶ್ರಯ ಬೇಡಿದ ಶಿವಾಜಿಯ ಮಗ ರಾಜಾರಾಮನನ್ನು ರಕ್ಷಿಸಿ, ಕಾಪಾಡಿ ಮಹಾರಾಷ್ಟ್ರವನ್ನು ಉಳಿಸಿದುದು.

---

* ಕೆ. ನೃ. ವಿ. III.ಅ.

೪. ದೆಹಲಿಯ ಬಾದಷಹರುಗಳಿಂದ ಆಗಾಗ್ಯೆ ಅಪಾರ ಹಾನಿಯುಂಟಾಗಿದ್ದರೂ ಮೊಗಲರ ಅಂತ್ಯಕಾಲದಲ್ಲಿ ಬಾದಷಹನು ಕೆಳದಿ ಅರಸನನ್ನು ಪ್ರಾರ್ಥಿಸಿಕೊಂಡ ಮೇರೆಗೆ ಇಮ್ಮಡಿ ಸೋಮಶೇಖರನಾಯಕನು ಮೊಗಲರಿಗೆ ಸೇರಿದ್ದ ತುಮಕೂರಿನ ಸೀಯರ್ಣವನ್ನು ಪುನರುದ್ಧರಿಸಿದುದು.

೫. ಪೋರ್ಚುಗೀಸ್ ಹಾಗು ಕ್ರಿಶ್ಚಿಯನ್ನರು ವಿಪರೀತ ಕಿರುಕುಳವನ್ನುಂಟು ಮಾಡಿದ್ದರೂ ರೋಮನ್ ಪಾದ್ರಿಗಳ ಪ್ರಾರ್ಥನೆಯನ್ನು ಮನ್ನಿಸಿ ಚರ್ಚು ನಿರ್ಮಿಸಲು ಅನುಮತಿ ನೀಡಿದುದು.

೬. ತಾವು ವೀರಶೈವ ಮತಾವಲಂಬಿಯಾದರೂ ಅನ್ಯ ಧರ್ಮವನ್ನು ಸಮಾನ ಆದರಗಳಿಂದ ರಕ್ಷಿಸಿ ಕಾಪಾಡಿಕೊಂಡು ಬಂದುದು, ಇತ್ಯಾದಿ -

ಪ್ರಜೆಗಳ ನೆಮ್ಮದಿ ಹಾಗೂ ರಾಷ್ಟ್ರಪ್ರೇಮ:

ಕೆಳದಿ ರಾಜ್ಯದ ಪ್ರಜೆಗಳ ಸುಸಂಸ್ಕೃತ ನಡೆವಳಿಕೆ, ನೆಮ್ಮದಿ ಹಾಗೂ ರಾಷ್ಟ್ರಪ್ರೇಮವನ್ನು ಸಮಕಾಲೀನ ವಿದೇಶೀಯ ಪ್ರವಾಸಿಗಳು ಹೀಗೆ ವರ್ಣಿಸಿದ್ದಾರೆ.

" The Keladi (Bednore) prince is much more magnificent and powerful than those of Malabar, His Kingdom produces many peculiar commodities, such as Sandalwood which is found there in great abundance as well as rice". He calls Bednore* (Keladi) the granary of all Southern India. He also writes; The city where the Raja holds his court lies some leagnes in land and is connected with the sea port by a fine road, planted with trees, which the inhabitants are obliged to keep in excellent order. This road is so secure that any stranger might go and sleep there with bags full of money and nobody would molest or rob him for if such a thing occured, the people in the neighbourhood would not only be severely punished, but would be forced to make good the money.

ಕೆಳದಿ ಸಂಸ್ಥಾನದ ಪ್ರಜೆಗಳ ಕಾನೂನು ಮತ್ತು ರಾಷ್ಟ್ರಪ್ರೇಮವನ್ನು ಕುರಿತು ಅಲೆಗ್ಜಾಂಡರ್ ಹ್ಯಾಮಿಲ್ಟನ್ನನು -

" The subjects of this country observe the laws so well, that robbery or murder are hardly heard of amoung them. And a stranger

* ಕೆಳದಿ ಸಂಸ್ಥಾನದ ಮೂರನೆಯ ರಾಜಧಾನಿ ಬಿದನೂರು (ಈ ಕೆಳಗಿನ ಹಳೆಯ ನಗರ)

may pass through the country without being ask where he is going or what business he has [೧] About the law abiding habits of the people of Mangalore, John Fryer says; they have well constituted laws and observe them obediently [೨] Mr. Stoakes in his survey of Nagar division remarks about the nature of the people of Bednure (Keladi) thus :

I have no where in India seen so much honesty and veracity as among the country people of Nagar(the capital of Keladi state). The Ryots of Nagara have always Prided themselves on their nationality.[೩]

ಈ ರೀತಿ ಅಲೆಗ್ಝಾಂಡರ್ ಹ್ಯಾಮಿಲ್‌ಟನ್, ಜಾನ್ ಫ್ರಾಯರ್, ಸ್ಟೋಕ್ಸ್ ಮುಂತಾದ ಸಮಕಾಲೀನ ವಿದೇಶೀ ಪ್ರವಾಸಿಗಳು ಕೆಳದಿ ರಾಜ್ಯದ ಸುಖ ಸಂಪತ್ತನ್ನು ಹಾಗೂ ಸಾಮಾನ್ಯ ಪ್ರಜೆಗಳ ರಾಷ್ಟ್ರೀಯ ಹಾಗೂ ಸಾಂಸ್ಕೃತಿಕ ಸ್ವರೂಪವನ್ನು ಕಣ್ಣಾರೆ ಕಂಡು ಶ್ಲಾಘಿಸಿದ್ದಾರೆ. ಇದು ಕಟ್ಟು ಕಥೆಯಲ್ಲವೆಂಬುದೂ ಅಷ್ಟೇ ದಿಟವಾಗಿದೆ.

ಕೆಳದಿ ಅರಸರ ಕಲೆ ಹಾಗೂ ಸಾಹಿತ್ಯಪೋಷಣೆ:

ಈ ರೀತಿಯ ಸುಖ ಸಂಪತ್ತಿನ ರಾಜ್ಯದಲ್ಲಿ ಮಧ್ಯೆ ತೊಡಕುಗಳಿದ್ದಾಗ್ಯೂ ಎದೆಗುಂದದೆ ಈ ನಾಯಕರು ಕಲೆ ಮತ್ತು ಸಾಹಿತ್ಯಗಳಿಗೆ ಅಪಾರ ಪ್ರೋತ್ಸಾಹ ನೀಡಿದ್ದಾರೆ. ವಿಶೇಷವಾಗಿ ಧರ್ಮಾತ್ಮರಾದ ಈ ಅರಸರ ಪೀಳಿಗೆಯಲ್ಲಿ ಕೆಳದಿಯು ಸ್ವತಃ ವಿದ್ವತ್ ಸಂಪತ್ತನ್ನು ಹೊಂದಿರುವ ದೊರೆಗಳನ್ನು ಹಾಗೂ ಮಂತ್ರಿಗಳನ್ನು ಕಂಡಿದೆ. ಹಿರಿಯ ವೆಂಕಟಪ್ಪನಾಯಕ ಮತ್ತು ಹಿರಿಯ ಬಸಪ್ಪನಾಯಕ ಇವರುಗಳು ಸ್ವತಃ ವಿದ್ವಾಂಸ ಕವಿಗಳು. ಅಂತೆಯೇ ಇಮ್ಮಡಿ ಸೋಮಶೇಖರನಾಯಕನ ಮುಖ್ಯಮಂತ್ರಿ ನಿರ್ವಾಣಯ್ಯನು ಸ್ವತಃ ಧಾರ್ಮಿಕ ತತ್ವಜ್ಞಾನಿ. ಈ ನಿರ್ವಾಣಾರ್ಯ ಅಥವಾ ನಿರ್ವಾಣ ಶೆಟ್ಟಿ ಅಥವಾ ನಿರ್ವಾಣಮಂತ್ರಿಯು ಮಂಗಳೂರು, ಬಾರ್ಕೂರು, ತೋನ್ಸೆ, ಕಟೀಲು, ಗುರುಪುರ, ಉಡುಪಿ [೪] ಮುಂತಾದೆಡೆಗಳಲ್ಲಿ ಸುಮಾರು ೬೪ ಮಠಗಳ ನಿರ್ಮಾಣಕ್ಕೆ ಕಾರಣನಾಗಿದ್ದು ಈತನ ವಂಶೀಕರು ಇಂದಿಗೂ ಮಂಗಳೂರು ಸಮೀಪ ಕಾಡುಮಠ ಎಂಬಲ್ಲಿದ್ದಾರೆ ಎಂಬುದಾಗಿ ಡಾ.ಸಾ.ಶಿ. ಮರುಳಯ್ಯನವರು ಹೇಳಿದ್ದಾರೆ.

---

೧. Alexander Hamilton New Account I. P. 158.
೨. John Fryer : New Account P. I. 180.
೩. Stoakes : Survey of Nagar Division,
೪. ಉಡುಪಿಯಲ್ಲಿ ಕೆಳದಿ ಅರಸರ ಕಾಲದ ಮಠವೊಂದಿದ್ದುದನ್ನು ಪ್ರಸಿದ್ಧ ನ್ಯಾಯಮೂರ್ತಿ ದಿ|| ಚೋಳಯ್ಯನವರು ನನಗೆ ತಿಳಿಸಿದ್ದರು.

ಪ್ರಸಿದ್ಧ ವಿಶ್ವಕೋಶವೆನಿಸಿದ ಶಿವತತ್ವ ರತ್ನಾಕರ ಕೃತಿ ಕವಿ ಲಿಂಗಣ್ಣನು ನಿರೂಪಿಸಿದಂತೆ -

ಕಂ॥ ಮರೆವ ಶಿವತತ್ವ ರತ್ನಾ
ಕರ ಮೆಂದೆನಿಪಾ ಸುಭಾಷಿತ ಸುರದ್ರುಮಮೆಂ
ಬುರುತರ ಕಾವ್ಯದ್ವಯಮಂ
ವಿರಚಿಸಿ ಸದ್ಯಶವನಾಂತನಾ ಬಸವನೃಪಂ ॥

ಸಂಸ್ಕೃತ ಭಾಷೆಯಲ್ಲಿ ಬಸಪ್ಪನಾಯಕನಿಂದ ವಿರಚಿಸಲ್ಪಟ್ಟಿದೆ. ಕೆಳದಿ ಸಂಶೋಧನಾಲಯ ಈ ಕೃತಿಯ ತೌಲನಿಕ ಅಧ್ಯಯನದೊಂದಿಗೆ ವಿಮರ್ಶಾತ್ಮಕ ಗ್ರಂಥವನ್ನು ಇಂಗ್ಲೀಷಿನಲ್ಲಿ ಹೊರತಂದಿದೆ. ಚಿತ್ರದುರ್ಗದ ಶ್ರೀ ಮುರುಘರಾಜೇಂದ್ರ ಮಹಾಸ್ವಾಮಿಗಳು ಈ ಬೃಹತ್ ಕೃತಿಯನ್ನು ಕನ್ನಡದಲ್ಲಿ ಭಾಷಾಂತರಿಸಿ ನಾಲ್ಕು ಕಲ್ಲೋಲಗಳವರೆಗೆ ಪ್ರಕಟಿಸಿದ್ದಾರೆ. ಮೈಸೂರಿನ ಶ್ರೀ ಸುತ್ತೂರು ಶ್ರೀಗಳವರು ಈ ಕೃತಿಯ ಸಂಪೂರ್ಣ ಕನ್ನಡ ಭಾಷಾಂತರವನ್ನು ಕೈಗೊಂಡಿರುವುದಾಗಿ ತಿಳಿದುಬಂದಿದೆ.[೧] ಸರಿ ಸುಮಾರಾಗಿ ಕೆಳದಿ ಅರಸರ ಕಾಲದಲ್ಲಿ ೫೨ ಕೃತಿಗಳು ರಚನೆಯಾಗಿರುವುದು ಕಂಡು ಬರುತ್ತದೆ.

ಕೆಳದಿಯ ನಿರ್ವಾಣಮಂತ್ರಿ:

ಲಿಂಗಣ್ಣಕವಿಯ ಕೆಳದಿ ನೃಪವಿಜಯದಲ್ಲಿ ನಿರ್ವಾಣ ಮಂತ್ರಿಯ ಹೆಸರು ಅನೇಕ ಬಾರಿ ಬಂದಿದೆ -

(ಅ) ----- ಅದೆಂತೆಂದೊಡಾ ಬಸವಪ್ಪನಾಯಕಂ ತಮ್ಮ ತಂದೆ ಮರಿಯಪ್ಪ ಸೆಟ್ಟರ್, ಮೋನಪ್ಪ ಸೆಟ್ಟರ್ ಪುತ್ರ ನಿರ್ವಾಣಯ್ಯನವರ್ ತದನುಜ ಗುರುವಪ್ಪನವರ್ (ಆಶ್ವಾಸX)

(ಬ) ----- ಮುಂದೆ ಈ ಸೋಮಶೇಖರನಾಯಕರ್ ತಾವು ಸ್ವಾತಂತ್ರ್ಯದಲ್ಲಿ ರಾಜ್ಯವಾಳುತ್ತಿರ್ದ ಪ್ಲವ ಸಂವತ್ಸರದ ಫಾಲ್ಗುಣ ಶುದ್ಧ ೨ ಯಲ್ಲಿ ಮೋನಪ್ಪ ಸೆಟ್ಟರ ಮಗ ನಿರ್ವಾಣಯ್ಯನವರ ಪತ್ನಿ ಭದ್ರಮ್ಮನವರ ಕುಮಾರಿ ನೀಲಮ್ಮಾಜಿಯವರಂ ವಿವಾಹಮಾದರ್, (ಅದೇ)

(ಕ) ----- ಚೆನ್ನಮ್ಮಾಜಿಯವರ್ ಪುತ್ರಿಯ ಭಾವದಿಂದ ಸಾಕಿದ ಆ ಚೆನ್ನಮ್ಮಾಜಿಯವರ ತಂಗಿ ಮರಿಯಮ್ಮಾಜಿಯೆಂಬ ಕುಮಾರಿಯಂ ಮೋನಪ್ಪ ಸೆಟ್ಟರ ಮಗ ನಿರ್ವಾಣಯ್ಯಂ ಗಿತ್ತತ್ಯಂತ ಸಂಭ್ರಮದಿಂ ವಿವಾಹಮಂ ರಚಿಸಿ ಸುಖಮಿರುತ್ತಮಿರ್ದು, (ಅದೇ)

---

೧. ಇದರ ಸಂಗೀತ ಹಾಗೂ ನೃತ್ಯ ಭಾಗವನ್ನು ನಾನು ಹಾಗೂ ಡಾ. ವಿ. ಎಸ್. ಎಸ್. ಆಚಾರ್ ಸೇರಿ ಕೈಗೊಂಡಿದ್ದ ಕನ್ನಡ ಭಾಷಾಂತರವು ಚಿತ್ರದುರ್ಗದ ಸತ್ಯ ಶುದ್ಧ ಕಾಯಕ ಸಂಪುಟಗಳಲ್ಲಿ ಪ್ರಕಟವಾಗಿವೆ.

(ಡ) ----- ಅದೆಂತೆಂದೊಡೆ ವೋಸಪ್ಪಸೆಟ್ಟರ ಮಗ ನಿರ್ವಾಣಯ್ಯನವರ್, ಗುರುವಪ್ಪ -----(ಅದೇ)

(ಇ) ----- ಮಾವ ನಿರ್ವಾಣಯ್ಯನವರ್ಗೆ ಸರ್ವಾಧಿಕಾರವನಿತ್ತು ಸದ್ಧರ್ಮದಿಂ ರಾಜ್ಯ ಪ್ರತಿಪಾಲನಂಗೆಯ್ಯುತ್ತುಮಿರಲಾ ಕಾಲದೊಳಿತ್ತಂ -----


(ಫ) ----- ಮತ್ತಮಾ ಸಂವತ್ಸರದ ಫಾಲ್ಗುಣ ಬಹುಳ ತದಿಗೆಯೊಳ್ ನಿರ್ವಾಣಯ್ಯನವರ ಕುಮಾರಿ ನೀಲಮ್ಮಾಜಿಯವರನತ್ಯಂತೋತ್ಸವದಿಂ ವಿವಾಹವಾಗಿ ಸುಖಮಿರುತಿರ್ದು (ಅದೇ)

ಕೆಳದಿ ಅರಸರ ಶಾಸನ ಸಂಪುಟದ ಈ ಕೆಳಕಂಡ ಶಾಸನಗಳಲ್ಲಿಯೂ ನಿರ್ವಾಣಯ್ಯನವರು ಕಾಣಿಸಿಕೊಳ್ಳುತ್ತಾರೆ.[1]

ನಂ.	ಶಾಸನ ಸಂಖ್ಯೆ.	ಪ್ರದೇಶ.	
೧	೧೬೫	ಬಿಗ್ಗುಂಜೆ, ಕೊಪ್ಪತಾ, ಚಿಕ್ಕಮಗಳೂರು ಜಿಲ್ಲೆ	
೨	೧೬೭	ಕೌತೀದುರ್ಗ, ತೀರ್ಥಹಳ್ಳಿ ತಾ.	
೩	೨೪೫	ಕೌತೀದುರ್ಗ, ತೀರ್ಥಹಳ್ಳಿ ತಾ.	ಇದರಲ್ಲಿ ಸೋಮಶೇಖರನ ಮಾವ ನಿರ್ವಾಣಯ್ಯ ಎಂದಿದೆ.
೪	೨೪೬	- " -	- ಅದೇ -
೫	೨೪೪	- " -	- ಅದೇ -
೬	೨೪೮	- " -	
೭	೧೬೮	ಕುಂಶಿ, ಶಿವಮೊಗ್ಗ ತಾ.	
೮	೨೪೨	ಹಿರೇಬಿಳಗುಂಜಿ ಶಿವಮೊಗ್ಗ ಜಿಲ್ಲೆ	ಉಲ್ಲೇಖವಿದೆ. ಹೊಂಸಪ್ಪ ಸೆಟ್ಟಿ ಮಗ ನಿರ್ವಾಣಯ್ಯ ಎಂಬ ಉಲ್ಲೇಖವಿದೆ.
೯	೨೪೯	ಶೃಂಗೇರಿ, ಚಿಕ್ಕಮಗಳೂರು ಜಿಲ್ಲೆ -	
೧೦	೨೫೩	ಹರಕೇರಿ, ಶಿವಮೊಗ್ಗ ಜಿಲ್ಲೆ -	
೧೧	೨೫೯	ತೀರ್ಥಹಳ್ಳಿ, ಶಿವಮೊಗ್ಗ ಜಿಲ್ಲೆ	
೧೨	೧೬೭	ಕೌತೀದುರ್ಗ, ತೀರ್ಥಹಳ್ಳಿ ತಾ.	ಅಳವಂಡಿ ಕೆಂಚ ಸಿದ್ದೇದೇವರ ಶಿಷ್ಯರು ನಿರ್ವಾಣದೇವರು

೧. ಕೆಳದಿ ಅರಸರ ಶಾಸನ ಸಂಪುಟ ಡಾ. ವೆಂಕಟೇಶ ಜೋಯಿಸ್ ಪ್ರ : ಶ್ರೀ ತೋಂಟದಾರ್ಯ ಮಠ, ಗದಗ

ಕಾಲಂ (ಅ) ಮತ್ತು (ಡ) ನಲ್ಲಿ ಕಂಡಂತೆ ನಿರ್ವಾಣಯ್ಯನು ಮೌನಪ್ಪ ಸೆಟ್ಟಿಯ ಪುತ್ರ, ಶಾಸನ ಸಂಖ್ಯೆ ೨೪೨ ರಲ್ಲಿ ಹೊಂನಪ್ಪ ಸೆಟ್ಟಿ ಎಂದಿದೆ, ಹೊಂನಪ್ಪ > ಮೋನಪ್ಪ ಎಂಬುದಾಗಿಯೂ ಕೇಶಿರಾಜನ ಶಬ್ದಮಣಿ ದರ್ಪಣದಲ್ಲಿ ಕಂಡಂತೆ ಭಾಷಾಜ್ಞಾನ ರೀತಿಯಲ್ಲಿಯೂ ಹೋಲಿಕೆ ಕಂಡುಬರುತ್ತದೆ. ಇವರ ತಮ್ಮನೇ ಗುರುವಪ್ಪ, ನಿರ್ವಾಣಯ್ಯನವರ ಮಗಳು ನೀಲಮ್ಮಾಜಿಯನ್ನು ಇಮ್ಮಡಿ ಸೋಮಶೇಖರನಾಯಕನಿಗೆ ಕೊಟ್ಟು ವಿವಾಹವಾಯಿತು. ವಂಶಾವಳಿಯ ರೀತ್ಯಾ ಈ ಕೆಳಕಂಡಂತೆ ನಿರ್ವಾಣಯ್ಯನವರನ್ನು ಗುರ್ತಿಸಬಹುದು.



ಕಾಲಂ(ಖ) ನಲ್ಲಿ ಫಾಲ್ಗುಣ ಶುದ್ಧ ಹಾಗೂ ಕಾಲಂ (ಫ) ನಲ್ಲಿ ಫಾಲ್ಗುಣ ಬಹುಳ ವೆಂದಿರುವುದು ಭಿನ್ನಾಭಿಪ್ರಾಯಕ್ಕೆಡೆಯೀಯುತ್ತದೆ. ಮೂಲಕೃತಿಗಳ ಪಾಠಾಂತರ ಭೇದಕ್ಕನುಗುಣವಾಗಿ ಡಾ. ಕಣ್ಣುಪಿಳ್ಳೆರವರ ಪಂಚಾಂಗವನ್ನು ಆಧರಿಸಿ ನಿರ್ಧರಿಸುವುದು ಸೂಕ್ತ. ಈ ಹಿಂದೆಯೇ ತಿಳಿಸಿದಂತೆ ನಿರ್ವಾಣಯ್ಯನ ವಂಶೀಕರು ಮಂಗಳೂರು ಸಮೀಪ ಕಾಡುಮಠದಲ್ಲಿದ್ದಾರೆಂದು ಹೇಳಲಾಗಿದೆ.

ಮೋನಪ್ಪ ಪಂಡಿತ:

ಈತನು (ಕ್ರಿ. ಶ. ೧೭೦೦) ಸಂಸ್ಕೃತದಲ್ಲಿ ವೀರಶೈವಾಚಾರ ಕೌಸ್ತುಭ ಗ್ರಂಥವನ್ನು ರಚಿಸಿದ್ದಾನೆ. ಕರ್ನಾಟಕ ಕವಿಚರಿತ್ರೆಕಾರರು ನಿರೂಪಿಸಿದಂತೆ ಕ್ರಿ.ಶ. ೧೭೨೫ ರಲ್ಲಿದ್ದ ನಿರ್ವಾಣಯ್ಯನು ಕನ್ನಡದಲ್ಲಿ ಶಿವಪೂಜಾ ವಿಧಾನವನ್ನೂ ಸಂಸ್ಕೃತದಲ್ಲಿ ಕ್ರಿಯಾಸಾರದ ಹಲವು ಭಾಗಗಳಿಗೆ ವ್ಯಾಖ್ಯಾನವನ್ನೂ, ನಿಜಗುಣ ಶಿವಯೋಗಿಗಳ ಕನ್ನಡ ವಿವೇಕ ಚಿಂತಾಮಣಿಯ ಸ್ವಲ್ಪ ಭಾಗವನ್ನು ಸಂಸ್ಕೃತಕ್ಕೆ ಪರಿವರ್ತಿಸಿರುವುದಾಗಿಯೂ ತಿಳಿದು ಬರುತ್ತದೆ.[3]

---

೧. ಮೆಕೆಂಜಿ ಸಂಪುಟ ೧೬೦ ಗುರುವಪ್ಪನು ನಿರ್ವಾಣಯ್ಯನ ಅಣ್ಣ ಎಂದು ಉಲ್ಲೇಖಿಸಿದೆ. ಕರ್ನಾಟಕದ ಕೈಫಿಯತ್‌ಗಳು ಸಂ. ಡಾ. ಎಂ. ಎಂ. ಕಲ್ಬುರ್ಗಿ, ಕನ್ನಡ ವಿಶ್ವವಿದ್ಯಾಲಯ, ಹಂಪಿ ಪುಟ. ೪೨೮ ನೋಡಿರಿ.

೨. ಈ ನೀಲಮ್ಮಾಜಿಯೇ ಇಮ್ಮಡಿ ಸೋಮಶೇಖರನಾಯಕನ ಪತ್ನಿ

೩. ಕ.ಚ.ಚ. III ಪುಟ ೨೮ ; MAR 1961 P 68 : Ibid; 1943 P 144; EC VII TL6: 87;183 ; 184 Ibid; 1933; ಕ.ಕ.ಚ - ಪುಟ 327.

ಶಿವಪುಜಾವಿಧಿ:

ಈವರೆಗಿನ ಸಮೀಕ್ಷಾ ಸಂಶೋಧನೆಗಳಿಂದ ಈ ಕೆಳಕಂಡಂತೆ 'ಶಿವಪೂಜಾವಿಧಿ'ಯ ಮೂಲ ಕೃತಿಗಳು ಕಂಡು ಬಂದಿವೆ.

I (a) ಕರ್ನಾಟಕ ಕವಿ ಚರಿತೆ - III ಪುಟ 28 ಮತ್ತು 327

(b) M.A.R. 1961, P 368;

M.A.R. 1943, P 144;

M.A.R. 1933, P 199

(c) E.C. Vol VIII TL, 6,87, 183, 184.

"ಕಕಚ"ಪ್ರಕಾರ"ಶಿವಪೂಜಾ ವಿಧಾನ ಗದ್ಯರೂಪವಾಗಿದೆ. ಅಲ್ಲಲ್ಲಿ ಸಂಸ್ಕೃತ ಶ್ಲೋಕಗಳು ಉದಾಹೃತವಾಗಿವೆ . ಇದರಲ್ಲಿ ವೀರಶೈವ ಮತಾನುಸಾರವಾಗಿ ಶಿವಪೂಜಾಕ್ರಮವು ವಿವರಿಸಿದೆ"ಎಂದು ನಮೂದಿಸಿ ಅಡಿ ಟಿಪ್ಪಣಿಯಲ್ಲಿ -

ವೀರಶೈವ ಕ್ರಮಾಚಾರ ಪೂಜಾ ಪದ್ಧತಿ ರುಚ್ಯತೇ I

ನಿರ್ವಾಣಮಂತ್ರಿವರ್ಯೇಣ ವೇದಶಾಸ್ತ್ರಾನುಸಾರಿಣೇ II

ಎಂದಿದೆ, ಡಾ. ಸಾ. ಶಿ. ಮರುಳಯ್ಯನವರು ಕಕಚದವರು ಹೇಳಿದ ಕೃತಿ ತಮಗೆ ಲಭಿಸಿಲ್ಲವೆಂದೂ, ಉಪಲಬ್ಧವಿರುವ ಕನ್ನಡ ಅಧ್ಯಯನ ಸಂಸ್ಥೆ ಮೈಸೂರು ನಂ ೧೭೫ ನೇ ಓಲೆಪ್ರತಿಯಲ್ಲಿ ನಾಮಮಾತ್ರಕ್ಕೆ ಶಿವಪುಜಾವಿಧಾನವೆಂದಿದ್ದು, ಆ ಕಟ್ಟಿನಲ್ಲಿ ಶಿವಪೂಜಾ ವಿಧಾನವನ್ನು ಸಂಸ್ಕೃತದಲ್ಲಿ ಉಲ್ಲೇಖಿಸಿರುವ ಪತ್ರಗಳು ೬+೨ ಆಗಿದ್ದು ಉಳಿದಂತೆ ಈ ಕೆಳಕಂಡ ಕೃತಿಗಳಿವೆಯೆಂದು ಹೇಳಿದ್ದಾರೆ.

೧. ರಸ ಸಿಂಧೂರ ಮಾಡುವ ಕ್ರಮ	೧	ಪತ್ರ
೨. ಪರಮಾರ್ಥಗೀತೆ	೧೬	ಪತ್ರ
೩. ಗುರು ಬಸವನ ಮನೋವಿಜಯ	೨೧	ಪತ್ರ
೪. ಪರಮರಹಸ್ಯ	೨೩	ಪತ್ರ
೫. ಅನುಭವ ಸೂತ್ರ	೧೦೧	ಪತ್ರ

ಇದು ' ಕಹವಸೂ ` IV ನೇ ಸಂಪುಟದಲ್ಲಿದ್ದಂತಿದ್ದು ಸಂ. ಕೆ ೧೭೫/೭.

II ಮೈಸೂರು ಪ್ರಾಚ್ಯವಿದ್ಯಾ ಸಂಶೋಧನಾಲಯದ ಕನ್ನಡ ಹಸ್ತಪ್ರತಿಗಳ ವರ್ಣನಾತ್ಮಕ ಸೂಚೀ ಮೇರೆಗೆ ಶಿವಪೂಜಾವಿಧಿ ಹಸ್ತಪ್ರತಿಗಳು.

ಸಂ IV

ಸಂಖ್ಯೆ1731.

ಕೆ. ೩೫/೯	ಶಿವಪೂಜಾ ವಿಧಾನ	ಶ್ಲೋಕ, ಟೀಕು
೧೨" x ೧-೪"	?	?
ಅಂ -ಅಅ ಪತ್ರ	೭ಪಂಕ್ತಿ,	೫೬ ಅಕ್ಷರ.

ಆದಿ :

ಚತುರಶ್ರಂ ಪಂಚಪಾದಂ ವಿಸ್ತೀರ್ಣಂಚ ತಥೈವಚ I

ಖಾತಂ ನವಪದಂ ಪ್ರೋಕ್ತಂ ತನ್ಮಧ್ಯೇ ಚ ಪ್ರಯತ್ನತ: II

ತ್ರಿಪಾದವೇದಿಕಾಂ ಕೃತ್ವಾ ತಸ್ಯ ದಕ್ಷಿಣ ತೋರಿಸಿ I

ತ್ರಿಕೋಣಾಕಾರ ಖಾತಂ ಚ ತ್ರಿಪಾದಂ ದೀರ್ಘಮಾಯತಂ II

xxxx ಟ್ಕೀ II ಪಂಚಪಾದಂ I ಐದು ಹೆಜ್ಜೆ ನೀಳವಾದಂಥಾ I

ತಥೈವಚ I ಹಾಂಗೆ I ವಿಸ್ತೀರ್ಣ I ಐದು ಹೆಜ್ಜೆಯಷ್ಟು ಅಗಲವುಳ್ಳ I

ಅಂತ್ಯ:

ಪರೇಷಾಂ I ಕೆಲಂಬರುಗಳಿಗೆ I ಅನ್ಯಾಶ್ರಮೇಷು I

ಮಿಕ್ಕಾದಂಥಾ ಆಶ್ರಮಂಗಳಲ್ಲಿ I ವಿಶಿಷ್ಟಮೂರ್ತೇ: I ವುತ್ಕೃಷ್ಟ

ವಹಂಥಾ I ಮೋಕ್ಷವು ನಾಸ್ತಿ II ಯಿಲ್ಲ ......ವೆ I ಷಟ್ತ್ರಿಂಶತತಾತ್ಮ

ದವಾದಂಥಾ I ವೀರಶೈವದಲ್ಲಿ I ಪರಮಾ I ವುತ್ತಮವಹಂಥಾ I ಮುಕ್ತಿ: I

ಮೋಕ್ಷವು ಅಸಿ I ವುಂಟು I

ವಿಷಯ : ಶಿವಪೂಜಾವಿಧಿ.

ವಿಶೇಷ :೮೯ ನೆಯ ಪತ್ರ ಲುಪ್ತವಾಗಿದೆ, ಅಸಮಗ್ರ, ಕೊಂಚ ಮಟ್ಟಿಗೆ ತ್ರುಟಿತ. ಇದೇ ಕಟ್ಟಿನಲ್ಲಿ ಮಲ್ಲೇಶ್ವರ ಶತಕ, ಪಾರ್ವತೀ ವಲ್ಲಭ ಶತಕ, ಉಮಾ ಮಹೇಶ್ವರ ಶತಕ, ಪ್ರಾಣನಾಥ ಶತಕ, ಶ್ರೀಕಂಠ ಸೋಮೇಶ್ವರ ಶತಕ, ಕಂದ ಶತಕ, ಪ್ರಭುದೇವರ ಪುರಾಣದ ನಾಂದ್ಯಗಳು, ಮಹಿಮ್ನ ಸ್ತೋತ್ರದ ಟೀಕು, ಚೇರಮಕಾವ್ಯ - ಎಂಬೀ ಗ್ರಂಥಗಳಿವೆ.

1732

ಕೆ. ೧೭೫/೭	ಶಿವಪೂಜಾವಿಧಾನ	ಮಂತ್ರ, ಗದ್ಯ
೧೦-೫" x ೨-೪"	ಮೃತ್ಯುಂಜಯ ಗುರು (?)	?
೧-೬ ಪತ್ರ	೧೨ ಪಂಕ್ತಿ	೪೫ ಅಕ್ಷರ.

ಆದಿ: ಶ್ರೀ ಗುರುಬಸವಲಿಂಗಾಯನಮ: II ಶಿವಪೂಜಾವಿಧಾನಉ II ಉಪಚಾರ ಪ್ರಿಯಾಶಂಭೂ I ಸರ್ವಜ್ಞಂ ಸತತೋದಿತಂ I ಮಂತ್ರಮೂರ್ತಿಮಹ.......ಮುಕ್ತಿದಂ II ಯಿದು ನಮಸ್ಕಾರ ಮಂತ್ರ II ೧ II

ಅಗ್ನಿಹೋತ್ರಾಶ್ಚ ವೇದಾಶ್ಚ ಯಜ್ಞಾಶ್ಚ ಬಹುದಕ್ಷಿಣಾ I ಶಿವಲಿಂಗಾ ರ್ಚನಾಸ್ಯೋವೇ I ಕೋಶ್ಯಾಂ ಸೇನಾಪಿ ನೋ.......ಶಿವರ್ಚನೆಯ ಮಾಡಬೇಕೂ II ೨ II

ಓಂ ಹಃ ಅನಂತ ಶಕ್ತಿದಾಮ್ನೇ I ಜ್ಯೋತಿರೂಪಾಯ I ಶಿವಾಸ್ತ್ರಾಯ ಪಟ್ I ಯೆಂದುದಾಗಿ I ಯೀ ಮಂತ್ರಮಂ........ಮಾಡಿಕೊಂಡು II ಯಿಪ್ಪತ್ತೇಳು ಬಾರಿ ಪಂಚಾಕ್ಷರಿಯಿಂದಭಿಮಂತ್ರಿಸಿ ಉದಕದಿಂದ ಲಿಂಗೋದಕವ ಮಾಡಿಕೊಂಡು

ಅಂತ್ಯ:

೪೬ II ಮೂಲಮಂತ್ರದಿಂದ ಶಿವಪ್ರಸಾದವ ಸೇವಿಸುವದು I
ಮಂತ್ರಮೂಲಪದಾನಾಖ್ಯಂ ಮಂತ್ರಾರ್ತ್ಥ ಪ್ರತಿಪಾದಕಂ I
ಮಂತ್ರೋದ್ಧಾರ ಪ್ರವೀಣ್ಯಾಸ್ಯ ಮಂತ್ರಾರ್ತ್ಥ ಪ್ರತಿಪಾದಕಂ II

ವೇದಶಾಸ್ತ್ರಾಗಮಾದೀನಾಂ ಸಾರಸಂಧೃತ್ಯ ಧೀಮತಾ I
ಮೃತ್ಯುಂಜಯಾಖ್ಯ ಗುರುಣಾಂ ಕೃತಂ ಪೂಜಾ ವಿಧಾನಕಂ II
ಗ್ರಂಥಭಾರ ಭಯದ್ವಾಕ್ಯಂ ರೂಪತಃ ಕ್ರಿಯತೇ ಮಯಾ I
ಮಂತ್ರಮಾಂತ್ರಂ ಸಾಧಕಾನಾಂ ಸಂಕ್ಷೇಪಾದ್ವಕ್ಷ್ಯತೇಽಧುನಾ II
ಶಿವಪೂಜಾವಿಧಾನ ಸಮಾಪ್ತ ಮಂಗಳ ಮಹಾಶ್ರೀ.

ವಿಷಯ: ಶಿವಪೂಜೆ ಮಾಡುವ ರೀತಿ.

ವಿಶೇಷ: ಮಂತ್ರಗಳು ಕನ್ನಡ ಗದ್ಯದೊಂದಿಗೆ ಇವೆ. ಪತ್ರಗಳ ಒಂದು ಮೂಲೆಯಲ್ಲಿ ಓರೆಯಾಗಿ ಸ್ವಲ್ಪ ಮಾತ್ರ ಮುರಿದು ಲುಪ್ತವಾಗಿದೆ. ಇದರೊಂದಿಗೆ ಜಯಸ್ತೋತ್ರ (ಬಿರದಾವಳಿ ವಿವರ)ಅನುಭವ ಸೂತ್ರ, ವಿಶೇಷಾರ್ಥಪ್ರಕಾಶಿಕಾ, ಪರಮ ರಹಸ್ಯಂ, ಪರಮಾರ್ಥಗೀತೆ, ರಸ ಸಿಂಧೂರ ಕ್ರಮ, ಮನೋವಿಜಯ, ಮೂರೇಳು ದೀಕ್ಷಾಪ್ರಶಸ್ತಿ ವಾರ್ಧಕಗಳಿವೆ.

ಕನ್ನಡ ಹಸ್ತಪ್ರತಿಗಳಲ್ಲಿ ಸೇರಿರುವ ಸಂಸ್ಕೃತ ಗ್ರಂಥಗಳು.

ಸಂ IX ಪುಟ ೩೭೭ (1)ಕೆ ೧೨೨೧/೨ ಶಿವಪೂಜಾ ವಿಧಾನ, ಪತ್ರಸಂಖ್ಯೆ ೨-೪;ಸಮಗ್ರ; ಕೆ ೧೬೬೦/೧ ಶಿವಪೂಜಾವಿಧಿ; ಪತ್ರಸಂಖ್ಯೆ ೧-೨೯; ಸಮಗ್ರ.

IV (a) ಶ್ರೀ ಜಗದ್ಗುರು ಮೂರುಸಾವಿರಮಠ ಹುಬ್ಬಳ್ಳಿಯಲ್ಲಿರುವ ತಾಳೆಯೋಲೆ ಹಸ್ತಪ್ರತಿಗಳು.

ಮಾದರಿ ಓಲೆಪುಟ ೧.

ಹ.ಪ್ರ.ಸಂ. ೧೧೬ ; ಸಾಮಗ್ರಿ : ತಾಳೆಯೋಲೆ ;

ಸಾಲು : ೭ ; ಅಕ್ಷರ ಸಂಖ್ಯೆ : ೫೨ ; ಓ. ಪು : ೫೮ ;

ಪ್ರಮಾಣ : ಉ : 34.3 ಅ : 5 ಸೆ.ಮೀ,

ಲಿಪಿ : ಕನ್ನಡ ; ಭಾಷೆ : ಸಂಸ್ಕೃತ.

ಸಾಲು ೧ : ಶ್ರೀ ಗುರು ಬಸವಲಿಂಗಾಯನಮ: II ಶಿವ
ಪೂಜಾವಿಧಿಃ ಬರವುದಕ್ಕೆ ಶುಭಮಸ್ತು ಶೋಭನಮಸ್ತು
ನಿರ್ವಿಘ್ನಮಸ್ತು II ಯಸ್ಯೋಪಾಸಂಗದೆನಾದ್ಯುಷಿಕ ಶರವರಾ
ದುತಿಕಃ ಸೃಷ್ಟಿಕರ್ತಾ..........(ತ್ರುಟಿತ I)

೨ ಕರ್ತಾಕಳೆಂಬಂ : ಸಮಭವದಖಿಲಂ ಯಸ್ಯತಿ
ಶಸ್ಥಹಾರ್ಷಾತ್ I ಸರ್ವೆಷ್ಯಾ ಮಂತರಾತ್ಮ ಹೃದಯ ಸರಜೆ
ಸಂವಿಧತ್ತಾಂ ಸದಾಮೆ ಪ್ರುಷ್ಪಿಗಂಧೊ ಯಥಾವಾಮಿಳತಿಹಿ
ರಮಣಿ ಮಿಶ್ರ ಮೂತ್ತಿ........(ತ್ರುಟಿತ I)

೩ ಕಪರ್ದ್ದಿ ಉಪ : ಪ್ರೂಷೊನ್ಮೆ ಷಸ್ವರಸವಿಕಸ
ತ್ಸಾರಸಗಳಗಳನ್ಮರಂ (ದ?) ಸ್ತಂದ ಶ್ರಮದುರಿ ಮದುರಾ
ದೊಷ ವಿದುರ ! ಗಿರಾಂಕತಿಸ್ವೆಯಂ ಜಯತಿ ಜಗತಿ ಭ್ಯಾಗ್ಯ
ವಿಭವದ್ರಭಾವಾವಿಭ

೪ ವಪ್ರಗುಣಗುಣ ನಿರ್ವಾಣಾಯ ವಿಭೊ II ೨ II ವಿರ
ಶೈವಕ್ರಮಾಚಾರ ಪೂಜಾ ಪದ್ಧತಿರುಚ್ಯತೆ I ನಿರ್ವಾಣ
ಮಂತ್ರಿವದ್ಯೆಣ ವೆದಶಾಸ್ತ್ರಾನುಸಾರಿಣೆ II ೩ II

ಓಲೆ ಪುಟ ೫೪

ಲಿಂಗ ಸಾವಧಾನ ಪ್ರಣಮ ಸಂಬಂಧ ಸಮಾಧಿ ಕ್ರಿಯದ
ವುದ್ಧರಣೆಯ ಬರವುದಕ್ಕೆ ಶುಭಮಸ್ತು ಎಂದಿದೆ.

ವಿಶೇಷ : ಶಿವಪೂಜೆಗೆ ಯೋಗ್ಯವಾದ ಮಂತ್ರ ಸ್ತೋತ್ರಗಳು ೫೩ ನೆಯ ಪತ್ರದವರೆಗೆ ಇದೆ. ಮಸಿವ್ಯಾಪನೆಯಿಲ್ಲದ ಪತ್ರವೊಂದರಲ್ಲಿ ಹಾಡುಗಳಿವೆ cf : Mss No. 23, 40, 77, 78 / ಅ, 129 ಮತ್ತು 206.

(b) ಹ. ಪ್ರ. ಸಂ. ; ೪೦ ; ಸಾಮಗ್ರಿ ತಾಳೆಯೋಲೆ ;
ಸಾಲು ; ೧೦ ; ಅಕ್ಷರ ಸಂಖ್ಯೆ ; ೬೮ ; ಓ.ಪು. ; ೧೦೫ ;
ಪ್ರಮಾಣ ; ಉ ; ೩೪-೨ ; ಅ ; ೪-೯ ಸೆ.ಮಿ ;
ಲಿಪಿ ; ಕನ್ನಡ ; ಭಾಷೆ ; ಕನ್ನಡ.

ಆದಿ ; ಮುಂಭಾಗ:

ಸಾಲು ೧. ಶ್ರೀ ಗುರು ಬಸವ ಲಿಂಗಾಯನಮಃ I ಶ್ರೀ ಮುರಿಗಾ
ಶಾಂತ ವೀರೇಶ್ವರಾಯನಮಃ II ಶಿವಪೂಜಾವಿಧಿ ಬರ
ವುದಕ್ಕೆ ಶುಭಮಸ್ತು II ನಿರ್ವಿಘ್ನಮಸ್ತು II ಯಸ್ಯೋ
ಪಾಶ್ರಿಸಂಗದೆಶಾದ್ಬುಷಿತ ಶರಾವರಾದುಸ್ಥಿತಃ
ಸೃಷ್ಟಿಕರ್ತಾ.

೨. ಅರ್ಘ್ಯದ ಜಿನಸು II ಪಾದ್ಯದ ಜಿನಸುಸ್ತಿಮ್ಮಃತ್
ರ್ತಾ ಕಳಂಬ : ಸಮಭವದಖಿಲಂ ಯಸ್ಯತಿಶಸ್ತೂ
ಷಾರ್ಷತ್ ಸರ್ವೆಷಾಮಂತರಾತ್ಮಾ ಹೃದಯ ಸರಸಿಜೆ I
ಸಂನಿಧತ್ತಾ I ಸದಾಮೆ ಪುಷ್ಟೆ ಗಂದೊ ಯಥಾವಾಮಿಳ
ತಿಹಿರ ಮಣೀಮಿಾಶಮೂ

೩. ಜಾಪುರ II ಬಿಳಿಯಳು II ಜವಿಗೊದಿ II ತ್ರಿ:
ಕಪರ್ಧಿ II ೧ II ವುಷಃ ಪೂಷೊಸ್ಮೆಷಸ್ವರಸವಿಕಸ
ತ್ಸಾರ ಸನಗಳಂನ್ಮರಂದ ಸ್ಯಂದ ಶ್ರೀಮಧುರೆ
ಮಧುರಾದೊಷ ವಿಧುರಾಗಿ ರಾಂತಿರೀ ಸ್ತೂಯಂಜ
ಯತಿ ಜಗತಿ ಭಾಗ್ಯ ವಿಭವ

೪ ಬಾಳದ ಬೆರು II ಬಿಳಿ ಸಾಸಿವಿ II ಜಂವಿಭತ್ತ II
ಪ್ರಭಾವಾವಿರ್ಭಾವೆ ಪ್ರಗುಣಗುಣ ನಿರ್ವಾಣಯ
ವಿಭೋಃ II ೨ II ವೀರಶೈವ ಕ್ರಮಾಚಾರ ಪೂಜಾ
ಪದ್ಧತಿರುಚ್ಯತೆ I ನಿರ್ವಾಣ ಮಂತ್ರಿವರ್ಂಣ ವೆದ
ಶಾಸ್ತ್ರಾನುಸಾರಿಣೆ II ೩ II

ಅಂತ್ಯ :

೭ ಲೊನ ಚ್ಯಂಡಾಲಃ ಪಾಲ್ಕ ಸೊನ ಪಾಲ್ಕ ಸ್ಯಃ ಶ್ರಮ ಣೊನ ಶ್ರಮಣಸ್ತಾಪ ನೊನ ತಾಪಸಃ I ಏಕಮೇವ ತತ್ಪರಂ ಬ್ರಹ್ಮ ವಿಭೂತಿ ನಿರ್ವಾಣಂ ನ ತತ್ರ ದೇವಾ ಯುಷಯಃ ಪಿತರ ಈಶನೆತೆ ಪ್ರತಿಬುದ್ಧಃ ಸರ್ವ ವಿದ್ಯೆತೆ II ಹೃದಿಸ್ಥಾನೆ

೮ ಏತಾಸ್ಸರ್ವಾಹೃ ದಿ ಪ್ರಾಣಾಃ ಪ್ರತಿಷ್ಠಿತಾಃ I ಹೃದಿ ಪ್ರಾಣಶ್ಚ ಜೊತಿಶ್ಚತ್ರಿವೃತಸ್ತೂತ್ರಂಚ ತದ್ವಿದುಃ I ಹೃದಿ ಚೈತನ್ಯೆ ತಿಷ್ಠತಿ I ಯಜ್ಞೋಪವಿತಂ ಪರಮಂ ಪವಿತ್ರಂ ಪ್ರಜಾಪತೆರ್ಯತ್ಸಹಜಂ ಪುರಸ್ತಾತ್ I ಆ

ವಿಶೇಷ : ಕೃತಿಯ ರಕ್ಷಾಫಲಕ ವರ್ಣ ಚಿತ್ರಗಳಿಂದ ಕೂಡಿದ್ದು ಪ್ರದರ್ಶನ ಯೋಗ್ಯವಾಗಿದೆ. ಓಲೆ ಪುಟ೨೨ ವೀರಶೈವಾಚಾರ ಕೌಸ್ತುಭ, ರುದ್ರೋಪನಿಷತ್, ಬ್ರಹ್ಮೋಪನಿಷತ್, ಗಣಸಹಸ್ರನಾಮ, ರುದ್ರಸೂಕ್ತ, ಮಂತ್ರಗಳಿಗೆ ಕನ್ನಡ ವೃತ್ತಗಳಲ್ಲಿ ಟೀಕೆ, ಮಲ್ಹಣ ಸ್ತೋತ್ರ, ಮಹಿಮ್ನ ಸ್ತೋತ್ರ, ಅನಾಮಾಯ ಸ್ತೋತ್ರ, ಹಲಾಯುಧ ಸ್ತೋತ್ರ, ವೃಷಭಾಷ್ಟಕ, ಶಿವಾನಂದಲಹರಿ ಟೀಕಾ ಕೃತಿಗಳಿವೆ. cf : Mss No 23,77,78/ಅ,129 ಮತ್ತು 206.

ಉಪಸಂಹಾರ:

ಉಪಲಬ್ಧವಿರುವ ಕೆಳದಿ ರಾಜ್ಯದ ಮಂತ್ರಿ ನಿರ್ವಾಣಯ್ಯನ ಶಿವಪೂಜಾವಿಧಿ ಹಸ್ತಪ್ರತಿಗಳ ತುಲನಾತ್ಮಕ ಅಧ್ಯಯನ ಪಾಠಾಂತರ ಭೇದಗಳು ಮತ್ತು ಪರಿಷ್ಕರಣ ಕೈಗೊಳ್ಳುವುದು ಅತ್ಯಗತ್ಯ. ಕಾಮಟಾಪುರದ ಗ್ರಾಮದಲ್ಲೂ ಏಕ ಭೋಗ್ಯವಾಗಿ ೧೬೪೪ ನೆ ಪರಾಭವ ಸಂ॥ದಲ್ಲು ಸರ್ವಾಧಿಕಾರಿ ನಿರ್ವಾಣಯ್ಯನವರ ಹೆಸರಿನಲ್ಲಿ ಬರೆಸಿಕೊಟ್ಟ ಓಲೆಯೊಂದೂ ಗಮನಾರ್ಹವಾದುದು. (ಮಳಿಸ್ಟರು ಸಾಸಿವೆಹಳ್ಳಿ ಶೀಮೆ ಕೃಷಿಯುತ್ತು; ಮೆಕಂಜ ಸಂಪುಟ ೩.೫೭೭).

ದಲಿತ ಹಾಗೂ ವೀರಶೈವ - ಒಂದು ಸಾಮಾಜಿಕ ವಿಶ್ಲೇಷಣೆ

● ಮಹೇಶ ತಿಪ್ಪಶೆಟ್ಟಿ

ಧರ್ಮ ಹಾಗೂ ಆರ್ಥಿಕ ಪ್ರಗತಿಗಿರುವ ಸಂಬಂಧ ಹೆಚ್ಚು ಸಂಕೀರ್ಣವಾಗಿದೆ. ವೆಬೇರಿಯನ್ ವೇದಿಕೆ ವಿಶ್ವದ ಹಲವು ಧರ್ಮಗಳು ಆರ್ಥಿಕ ಪ್ರಗತಿಗೆ ಪೂರಕವಾಗಿವೆ, ಕೆಲವು ಧರ್ಮಗಳು ಮಾರಕವಾಗಿವೆ ಎಂದು ವಾದಿಸಿದೆ. ಮಾರ್ಕ್ಸ್‌ವಾದ ಧರ್ಮ ಆರ್ಥಿಕ ಪ್ರಗತಿಗೆ ಯಾವಾಗಲೂ ಅಡ್ಡಗಾಲು ಹಾಕುತ್ತದೆ ಎಂದು ವಾದಿಸುತ್ತದೆ. ಗುನ್ನರ್ ಮಿರ್ಡಾಲರು ಭಾರತೀಯರನ್ನು ಬಡವನ್ನಾಗಿರಿಸುವಲ್ಲಿ ಹಿಂದೂ ಧರ್ಮ ತನ್ನ ಪಾಲಿನ ಕಾಣಿಕೆ ಸಲ್ಲಿಸಿದೆ ಎಂದು ಸುಂದರ, ತರ್ಕಬದ್ಧ ಹಾಗೂ ಚಾಲಾಕಿ ಭಾಷೆಯಲ್ಲಿ ವಾದಿಸಿದ್ದಾರೆ. ದಲಿತ ಮೂಲ ಹೊಂದಿದ ಕರ್ನಾಟಕದ ಒಂದು ಮತ ಆಧುನೀಕರಣಗೊಂಡ ಮೇಲೆ ಅದರ ಸಾಮಾಜಿಕ ಗ್ರಹಿಕೆಯಲ್ಲಿ ಉಂಟಾದ ಬದಲಾವಣೆಗಳನ್ನು ಇಲ್ಲಿ ದಾಖಲಿಸುವ ಪ್ರಯತ್ನ ಮಾಡಲಾಗಿದೆ.

ವೀರಶೈವ ಕರ್ನಾಟಕದ ಒಂದು ಬಂಡಾಯ ಮತ. ಇದು ದಲಿತ ಕಾಯಕ ಜೀವಿಗಳ ಹೋರಾಟವೆಂದು ಹೇಳುವವರಿದ್ದಾರೆ. ಆದರೆ ವೀರಶೈವರು ಇಂದು ದಲಿತ ಶಬ್ದದ ಬಗ್ಗೆ ಮಡಿ ಮನೋಭಾವ ಬೆಳೆಸಿಕೊಂಡಿದ್ದಾರೆ. ಬಂಡಾಯ ಸ್ಥಿರೀಕರಣಗೊಂಡಾಗ ಎಂತಹ ದುರಂತ ಜರುಗುತ್ತದೆ ಎಂಬುದನ್ನು ವೀರಶೈವ ಮಠಗಳ ಕ್ರಿಯಾಚರಣೆಯ ಹಿನ್ನೆಲೆಯಲ್ಲಿ ಅವಲೋಕಿಸಬಹುದು. ಬಸವೋತ್ತರ ಯುಗದ ಈ ಎಂಟು ಶತಮಾನದಲ್ಲಿ ವೀರಶೈವರು ಸಾಕಷ್ಟು ಸಂಸ್ಕೃತಾನುಕರಣಗೊಂಡಿದ್ದಾರೆ. ಬಸವತತ್ವದ ವಿರುದ್ಧವೇ ಈ ಮತ ರೂಪುಗೊಂಡಿದ್ದು ಚರಿತ್ರೆಯ ದುರಂತವಾಗಿದೆ. ಪುರೋಹಿತಶಾಹಿಯ ವಿರುದ್ಧ ಬಂಡಾಯ, ಜಾತೀಯ ನಿರಾಕರಣೆ, ವೃತ್ತಿ ಸಮಾನತೆ, ಅಂತರಜಾತೀಯ ವಿವಾಹ, ಸ್ತ್ರೀಸಮಾನತೆ, ಜನಪರ ಸರಳ ಮತಾಚರಣೆ, ಮಾತೃಭಾಷೆಗೆ ಒತ್ತು ಬಸವ ಧರ್ಮದ ಹೆಗ್ಗಳಿಕೆಗಳಾಗಿವೆ. ಒಟ್ಟಿಗೆ ವೈದಿಕ ಚಿಪ್ಪನ್ನು ಒಡೆದು ಬಂದು ಸ್ವತಂತ್ರ ಗುಂಪಾಗಿ ವೀರಶೈವ ರೂಪಗೊಳ್ಳುವ ಹವಣಿಕೆ ಮಾಡಿದೆ.

ಹಿಂದೂ ಪರಂಪರೆಯಲ್ಲಿ ಮಠಗಳು ಸಾಂಸ್ಥಿಕ ಸ್ವರೂಪ ಪಡೆದದ್ದು ಬೌದ್ಧ ಧರ್ಮದ ಪ್ರಭಾವದಿಂದಾ ಎಂದು ಹೇಳಲಾಗುತ್ತದೆ. ವೀರಶೈವರಲ್ಲಿ ಎರಡು ಪರಂಪರೆಯ ಮಠಗಳಿವೆ. ಒಂದು ವಿರಕ್ತ ಪರಂಪರೆ, ಇನ್ನೊಂದು ಪಂಚಪೀಠದ ಪರಂಪರೆಗೆ ಸೇರಿದೆ. ವಿರಕ್ತ ಪರಂಪರೆಯ ಮಠಗಳು ಬಸವತತ್ವಕ್ಕೆ ತಮ್ಮನ್ನು ಅರ್ಪಿಸಿಕೊಂಡಿವೆ. ಸಾಮಾಜಿಕ, ಶೈಕ್ಷಣಿಕ, ಸಾಂಸ್ಕೃತಿಕ

ಹಾಗೂ ರಾಜಕೀಯ ಕ್ಷೇತ್ರಗಳಲ್ಲಿ ಇವುಗಳ ಪ್ರಭಾವ ಹೆಚ್ಚು. ಪಂಚಪೀಠಗಳು ವೈದಿಕದ ಪ್ರತಿರೂಪಗಳಾಗಿವೆ.

ವೀರಶೈವರು ಹಲವು ಶತಮಾನದುದ್ದಕ್ಕೂ ಬ್ರಾಹ್ಮಣ್ಯದ ವಿರುದ್ಧ ಹೋರಾಡಿ ಬ್ರಾಹ್ಮಣ ಸಮಾನ ಅಂತಸ್ತು ಗಳಿಸುವಲ್ಲಿ ಸ್ವಲ್ಪ ಮಟ್ಟಿಗೆ ಸಫಲರಾಗಿದ್ದಾರೆ. ಆಧುನಿಕ ಶಿಕ್ಷಣ, ಪ್ರಜಾಪ್ರಭುತ್ವ ಈ ಪ್ರಕ್ರಿಯೆಗೆ ನೆರವಾಗಿರಬಹುದು. ವೀರಶೈವರನ್ನು ಆಧುನೀಕರಣಗೊಳಿಸುವಲ್ಲಿ ವಿರಕ್ತಮಠಗಳ ಸಿಂಹಪಾಲು ಇದೆ. ಇಲ್ಲಿ ಹಲವು ಉಪಜಾತಿಗಳಿದ್ದವು ಈ ಎಲ್ಲ ಉಪಜಾತಿಗಳನ್ನು ವಿರಕ್ತಮಠಗಳು ಸಮಾನವೆಂದೇ ಪರಿಗಣಿಸುತ್ತವೆ. ವೀರಶೈವರು ಬ್ರಾಹ್ಮಣೀಕರಣ ಗೊಂಡಿದ್ದರು, ಶೂದ್ರ ಸ್ತರದಿಂದಲೇ ಇವರು ಮೇಲೆದ್ದವರಾಗಿದ್ದರಿಂದ ಇತರ ಕೆಳ ಜಾತಿಗಳೊಂದಿಗೆ ಇವರು ಮುಕ್ತ ಹಾಗೂ ಸರಳ ಸಾಮಾಜಿಕ ಸಂಪರ್ಕ ಹೊಂದಿದ್ದಾರೆ. ಇವರು ಅನುಸರಿಸುವ ಕೃಷಿ ವೃತ್ತಿಯು ಇದಕ್ಕೆ ಕಾರಣವಾಗಿರಬಹುದು.

ವೀರಶೈವ ಮಠಗಳಿಗೆ ಪೀಠಾಧಿಪತಿಗಳಾಗುವವರು ಬಹುಶಃ ಜಂಗಮರು. ಆದರೆ ಹಲವು ವಿರಕ್ತ ಮಠಗಳಿಗೆ ಜಂಗಮೇತರರು ಮಠಾಧಿಪತಿಗಳಾದ ನಿದರ್ಶನವಿದೆ. ವಿಜಾಪೂರ ಜಿಲ್ಲೆಯ ವಿರಕ್ತ ಪರಂಪರೆಯ ಮಠಾಧೀಶರೊಬ್ಬರು ದಲಿತರನ್ನು ತಮ್ಮ ಉತ್ತರಾಧಿಕಾರಿಯನ್ನಾಗಿ ಮಾಡುವ ವಿಚಾರ ಘೋಷಿಸಿದಾಗ ದಲಿತ ಶಬ್ದ ಹಲವು ಗೊಂದಲ ಸೃಷ್ಟಿಸಿತು. ಸಾಹಿತ್ಯ ಕ್ಷೇತ್ರದಲ್ಲಿ ದಲಿತ ಬಂಡಾಯ ಎಂಬ ಶಬ್ದಗಳು 1970ರಿಂದ ಚಲಾವಣೆಗೆ ಬಂದು ಈಗ ಪರಿಕಲ್ಪನೆಯ ಸ್ವರೂಪ ಪಡೆದುಕೊಂಡಿವೆ. ದಲಿತ ಶಬ್ದ ಧಾರ್ಮಿಕ ಕ್ಷೇತ್ರದಲ್ಲಿ ಬಳಕೆಯಾಗಿ ಹೊಸ ಅರ್ಥಪಡೆದುಕೊಳ್ಳಬೇಕಾಗಿದೆ.

ಬೀದರ ನಗರದಲ್ಲಿ ಜರುಗಿದ ಒಂದು ಸಮ್ಮೇಳನದಲ್ಲಿ ಪಾಸ್ವಾನ್, ಸ್ವಾಮಿ ಅಗ್ನಿವೇಶ, ಸಿದ್ಧಲಿಂಗಯ್ಯ ಮುಂತಾದವರು ಭಾಗವಹಿಸಿದ್ದರು. ಆ ಸಮಾರಂಭದಲ್ಲಿ ವಿಜಾಪೂರ ಜಿಲ್ಲೆಯ ಸ್ವಾಮಿಗಳು ಸೂಕ್ತ ದಲಿತ ವ್ಯಕ್ತಿಯನ್ನು ನನ್ನ ಉತ್ತರಾಧಿಕಾರಿಯನ್ನಾಗಿ ಆಯ್ಕೆಮಾಡಿಕೊಳ್ಳುವ ವಿಚಾರವಿದೆ ಎಂದು ಘೋಷಿಸಿದರು. ಜಾತಿಯನ್ನೇ ನಂಬದ ವೀರಶೈವ ಜಾತಿಯಾಗಿ ಗಟ್ಟಿಗೊಂಡಿದೆ. ದಲಿತ ಜಾತಿಗಳ ಬಗ್ಗೆ ಇದು ಹೊಂದಿದ ಮಡಿ ಮನೋಭಾವ ಮೇಲಿನ ಸಂದರ್ಭದಲ್ಲಿ ಅಭಿವ್ಯಕ್ತಗೊಂಡಿತು. ವೀರಶೈವರಲ್ಲಿ ಶ್ರೇಣಿಕೃತ ಉಪಜಾತಿಗಳನ್ನು ಕಾಣಬಹುದು. ಹನ್ನೆರಡನೇ ಶತಮಾನದಲ್ಲಿ ಸಾಮಾಜಿಕವಾಗಿ ವಿವಿಧ ಹಿನ್ನೆಲೆ ಹೊಂದಿದ ಸ್ತರಗಳಿಂದ ವೀರಶೈವಕ್ಕೆ ಜನರು ಮತಾಂತರ ಹೊಂದಿರಬಹುದು. ಈ ಮತಾಂತರಿಗಳು ತಮ್ಮ ಮೊದಲಿನ ಆಚರಣೆಗಳನ್ನು ಹೊಸ ಬಸವಧರ್ಮ ಸ್ವೀಕರಿಸಿದ್ದರಿಂದ ಶ್ರೇಣಿಕೃತ ಉಪಜಾತಿಗಳು ಇಲ್ಲಿ ಬೆಳೆದಿರಬಹುದು.

ಘಟನೆಯ ವಿವರ:- ದಲಿತರನ್ನು ಉತ್ತರಾಧಿಕಾರಿಯನ್ನಾಗಿ ಮಾಡಿಕೊಳ್ಳುವ ಘೋಷಣೆಯ ಪೂರ್ವವಿವರ ಅಗತ್ಯ. ಎಲ್ಲ ಸ್ವಾಮಿಗಳಂತೆ ಇವರೂ ರುದ್ರಾಭಿಷೇಕ ಹಾಗೂ ಆಡಂಬರದ ಕ್ರಿಯಾವಿಧಿಗಳನ್ನು ಒಪ್ಪಿದ್ದರು. ಬಡ ವಿದ್ಯಾರ್ಥಿಗಳಿಗಾಗಿರುವ ಮಠದ ಉಚಿತ ಪ್ರಸಾದ ನಿಲಯ ಮುಚ್ಚಿದ್ದರು. ಕ್ರಮೇಣ ಬಸವ ತತ್ವಗಳತ್ತ ವಾಲಿದರು. ವೈದಿಕ ಕ್ರಿಯಾವಿಧಿಗಳಾದ ಕುಂಭ ಪೂಜೆ, ದೇವರ ಅಭಿಷೇಕ, ಲಕ್ಷ್ಮೀಪೂಜೆ, ಗಣೇಶ ಪೂಜೆ, ಸಂಸ್ಕೃತ ಮಂತ್ರಗಳ ಪಠಣ ಮುಂತಾದವುಗಳನ್ನು ಕೈಬಿಡಲು ಭಕ್ತರನ್ನು ಆಗ್ರಹಿಸುತ್ತಲೇ ಬಂದರು. ಜೊತೆಗೆ ಸಾಮಾಜಿಕ ಸನ್ನಿವೇಶಗಳಿಗೆ ಸ್ಪಂದಿಸಿದರು. ೧೯೮೫ರ ಬರಗಾಲದಲ್ಲಿ ನಿರಾಶ್ರಿತ ಜನ-ದನಗಳಿಗೆ ಆಶ್ರಯವನ್ನೊದಗಿಸಿದರು. ೧೯೯೩ರಲ್ಲಿ ಭೂಕಂಪ ಪೀಡಿತರಿಗಾಗಿ ಪಾದಯಾತ್ರೆ ಮಾಡಿ ಹಣ ಸಂಗ್ರಹಿಸಿ ನೆರವಾದರು. ಮುಳವಾಡ ಏತ ನೀರಾವರಿಗಾಗಿ ಮಠಾಧೀಶರ ಹೋರಾಟದಲ್ಲಿ ಪಾಲ್ಗೊಂಡರು. ಅಯೋಧ್ಯೆ ಘಟನೆಯಿಂದ ಕೋಮು ಗಲಭೆ ಹರಡುವ ಸುಳಿವು ಸಿಕ್ಕಾಗ ಇಟ್ಟಂಗಿಗಳಿಗಿಂತ ಮನುಷ್ಯ ದೊಡ್ಡವನೆಂದು ಸಾರಿದರು. ವರದಕ್ಷಿಣೆ ನಿಷೇಧ, ದುಶ್ಚಟಗಳ ವರ್ಜ್ಯ, ದೇವದಾಸಿಯರ ಪುನರ್‌ವಸತಿಗಾಗಿ ಸಾರ್ವಜನಿಕ ಅಭಿಪ್ರಾಯ ರೂಪಿಸಿದರು. ಸಾಹಿತ್ಯ, ಸಾಂಸ್ಕೃತಿಕ ಕಾರ್ಯಕ್ರಮ ಘೋಷಿಸಿದರು. ಇವರ ಜನಪ್ರಿಯತೆ ಕೆಲವರಿಗೆ ಬಿಸಿ ತುಪ್ಪವಾಯಿತು. ಮಠದಲ್ಲಿ ಆಸ್ಥಾನ ಪಂಡಿತರ ಪಡೆ ಇತ್ತು. ಭಕ್ತರೂ ಕೂಡ ಬಹಿರಂಗದಲ್ಲಿ ಸ್ವಾಮಿಗಳ ಬಸವತತ್ವದ ವಿಚಾರ ಒಪ್ಪಿದರು. ಆದರೆ ಅಂತರಂಗದಲ್ಲಿ ವೈದಿಕ ಕ್ರಿಯಾ ವಿಧಿಗಳನ್ನು ಆಚರಿಸುತ್ತಿದ್ದರು. ಜನಪ್ರಿಯತೆಯ ಉತ್ತುಂಗ ಶಿಖರದಲ್ಲಿದ್ದಾಗ ಇವರ ಬಗ್ಗೆ ಖೊಟ್ಟಿ ನೋಟಿನ ಪ್ರಕರಣದಲ್ಲಿ ಸಿಲುಕಿದ್ದಾರೆ, ಆತ್ಮಹತ್ಯೆಗೆ ಯತ್ನಿಸಿದ್ದಾರೆ ಎಂಬ ವದಂತಿಗಳು ಹುಟ್ಟಿಕೊಂಡವು. ಇದೆಲ್ಲ ಪಂಚಪೀಠಗಳ ಚಿತಾವಣೆಯೆಂಬ ಸುದ್ದಿಯೂ ಹರಡಿತು. ಕಾಕತಾಳೀಯ ಎಂಬಂತೆ ಪಂಚಪೀಠಾಧೀಶರ ಮೆರವಣಿಗೆ ಆಗ ಈ ಭಾಗದಲ್ಲಿ ಅದ್ದೂರಿಯಿಂದ ಜರುಗಿದವು. ಇದಕ್ಕೆ ಮೂಲಭೂತವಾದಿ ವೀರಶೈವರ ಬೆಂಬಲವಿತ್ತು.

ವೀರಶೈವ ಉಪಜಾತಿಗಳ ಏಣಿಶ್ರೇಣಿಯಲ್ಲಿ ಜಂಗಮರು ಮೇಲಿನ ಸ್ಥಾನ ಹೊಂದಿದ್ದಾರೆ. ದಲಿತ ಉತ್ತರಾಧಿಕಾರಿಯ ಘೋಷಣೆ ವೀರಶೈವರಿಂದ ಹಾಗೂ ಸಮಾಜದ ವಿವಿಧ ವಲಯಗಳಲ್ಲಿ ಭಿನ್ನ ಪ್ರತಿಕ್ರಿಯೆ ಪಡೆಯಿತು. ನಾಡಿನ ಹೆಸರಾಂತ ಸಾಹಿತಿಗಳು ಸ್ವಾಮಿಗಳ ಹೇಳಿಕೆಯನ್ನು ಸೈದ್ಧಾಂತಿಕವಾಗಿ ಬೆಂಬಲಿಸಿದರು. ಎಡ ಪಂಥೀಯ ಸಂಘಟನೆಗಳ ಸಂಪೂರ್ಣ ಬೆಂಬಲ ವ್ಯಕ್ತಪಡಿಸಿದವು. ರಾಜ್ಯ ಬಂಡಾಯ ಸಾಹಿತ್ಯ ಸಂಘಟನೆ ಅಸ್ಪೃಶ್ಯ ಗೋಡೆಯ ಮೇಲೆ ದೀಪ ಇಟ್ಟಂತೆ ಹೇಳಿಕೆ ನೀಡಿತು. ಭಕ್ತರಲ್ಲಿ ಗುಸುಗುಸು ಪ್ರಾರಂಭವಾಯಿತು.

ಮೂಲಭೂತವಾದಿ ವೀರಶೈವರು ಸ್ವಾಮಿಗಳ ಈ ವಿಚಾರವನ್ನು ನೇರವಾಗಿ ಖಂಡಿಸುವ ಧೈರ್ಯ ತೋರಲಿಲ್ಲ. ಆದರೆ ಒಳಗೊಳಗೆ ಅಸಮಾಧಾನ ವ್ಯಕ್ತಪಡಿಸಿದರು. ವಿರಕ್ತ ಪರಂಪರೆಯ

ಉತ್ತರ ಕರ್ನಾಟಕದ ಇನ್ನೊಬ್ಬ ಜಗದ್ಗುರುಗಳು ಈ ಅತೃಪ್ತ ಮೂಲಭೂತವಾದಿಗಳಿಗೆ ಮುಖವಾಣಿಯಾದರು. ಅವರು ಇಲ್ಲಿ ನೇತೃತ್ವವಹಿಸಲು ಹಿನ್ನೆಲೆಯೂ ಇದೆ. ಅವರ ಪೂರ್ವಾಶ್ರಮ ವಿಜಾಪೂರ ಜಿಲ್ಲೆಯ ಅದೇ ಮಠವಾಗಿದೆ. ತಮ್ಮ ಸಮೀಪದ ಬಂಧುಗಳನ್ನು ಅಲ್ಲಿಗೆ ಉತ್ತರಾಧಿಕಾರಿಯನ್ನಾಗಿ ನೇಮಿಸುವ ಹವಣಿಕೆಯಲ್ಲಿದ್ದರು. ಜೊತೆಗೆ ಉತ್ತರ ಕರ್ನಾಟಕದ ವಿರಕ್ತಮಠಗಳನ್ನು ತಮ್ಮ ವಸಾಹತು ಮಾಡಿಕೊಳ್ಳುವ ಮಹಾತ್ವಾಕಾಂಕ್ಷೆ ಅವರಿಗಿದೆ. ಹೀಗಾಗಿ ದಲಿತ ಪರವಾಗಿದ್ದ ಸ್ವಾಮಿಗಳ ವಿರುದ್ಧ ಜನರನ್ನು ಸಂಘಟಿಸುವದು ಜಗದ್ಗುರುಗಳಿಗೆ ಕಷ್ಟವೆನಿಸಲಿಲ್ಲ. ನಿರ್ದಿಷ್ಟ ದಿನದಂದು ಸಾರ್ವಜನಿಕರಿಂದಲೇ ದಲಿತ ಪರವಿದ್ದ ಸ್ವಾಮಿಗಳು ಪೀಠ ತ್ಯಜಿಸಿ ಮಠ ಬಿಡಬೇಕೆಂಬ ವಾದ ಮುಂದಿಟ್ಟರು.

ವೀರಶೈವ ಮಠಗಳು ಒಬ್ಬ ಸ್ವಾಮಿಯ ಸ್ವತ್ತು ಅಲ್ಲ. ಅವು ಸಾರ್ವಜನಿಕರ ಅಂದರೆ ವೀರಶೈವ ಸಮಾಜದ ಸ್ವತ್ತು. ದಲಿತ ಪರವಾಗಿದ್ದ ಸ್ವಾಮಿಗಳು ನನ್ನನ್ನು ಈ ಮಠಕ್ಕೆ ಪೀಠಾಧೀಶರನ್ನಾಗಿ ಮಾಡಿದ ಊರಿನ ಕೆಲವು ಗಣ್ಯರಿದ್ದಾರೆ ಅವರು ಬಿಡು ಎಂದರೆ ಈಗಲೇ ಬಿಡುವೆನೆಂದು ಹೇಳಿದರೆನ್ನಲಾಗಿದೆ. ಆದರೆ ಆ ಗಣ್ಯರು ಈ ಪಂಚಾಯತಿಯಲ್ಲಿ ಭಾಗವಹಿಸಲು ಬರಲೇ ಇಲ್ಲ. ಏಕೆಂದರೆ ಅವರಿಗೆ ತಮ್ಮದೇ ಆದ ಹಿತಾಸಕ್ತಿಗಳಿದ್ದವು. ಇದಕ್ಕೂ ಕೂಡ ಚಾರಿತ್ರಿಕ ಹಿನ್ನೆಲೆ ಇದೆ. ದಲಿತ ಪರವಾಗಿದ್ದ ಸ್ವಾಮಿಗಳು ಸ್ಥಳೀಯ ವಿದ್ಯಾವರ್ಧಕ ಸಂಘದ ಅಧ್ಯಕ್ಷರು. ಈ ಶಿಕ್ಷಣ ಸಂಸ್ಥೆ ಗ್ರೈನೆಟ್ ಕಲ್ಲಿನಿಂದ ದಿಢೀರ್ ಶ್ರೀಮಂತಿಕೆ ಅನುಭವಿಸಿತು. ಮೊದಲು ಎಲ್ಲದಕ್ಕೂ ಸ್ವಾಮಿಗಳನ್ನೇ ಆಶ್ರಯಿಸಿದ ಸಂಸ್ಥೆ ಕ್ರಮೇಣ ಸ್ವಾಮಿಗಳನ್ನು ಆಳಲು ಪ್ರಾರಂಭಿಸಿತು. ಆರ್ಥಿಕ ಅವಕಾಶ ಪಡೆದ ಗಣ್ಯರು, ಸಂಸ್ಥೆಯ ಪದಾಧಿಕಾರಿಗಳು ದಲಿತಪರ ಸ್ವಾಮಿಗಳ ನೆರವಿಗೆ ಬರಲು ಹಿಂದೇಟು ಹಾಕಿದರು. ಒಟ್ಟಿಗೆ ಆರ್ಥಿಕ ಅವಕಾಶ ಧಾರ್ಮಿಕ ಕ್ರಿಯಾಚರಣೆಗಳ ಘರ್ಷಣೆಗಳನ್ನು ಈ ಸಂದರ್ಭದಲ್ಲಿ ಕಾಣಬಹುದು.

ವಿಶ್ಲೇಷಣೆ:-

೧. ವೀರಶೈವರು ತಮ್ಮ ಅವೈದಿಕ ಪರಂಪರ ಹಾಗೂ ದಲಿತ ಮೂಲ ಮರೆತಿದ್ದಾರೆ.

೨. ವೀರಶೈವರ ಉಪಜಾತಿಗಳ ಶ್ರೇಣಿಯಲ್ಲಿ ಮೇಲಿನ ಸ್ಥರದಲ್ಲಿದ್ದವರು ದಲಿತ ವಿರೋಧಿಗಳಾಗಿದ್ದಾರೆ.

೩. ವೀರಶೈವ ಉಪಜಾತಿಗಳು ಸ್ವತಂತ್ರ ಅಸ್ತಿತ್ವ ಪಡೆಯಲು ಹಾತೊರೆಯುತ್ತಿವೆ.

೪. ಬಂಡಾಯದ ಮೂಲಕವೇ ರೂಪಗೊಂಡ ವೀರಶೈವರಲ್ಲಿ ಬಂಡಾಯ ಸ್ಥಗಿತಗೊಂಡಿದೆ.

೫. ವೀರಶೈವರು ಬ್ರಾಹ್ಮಣೀಕರಣಗೊಂಡು ಆರ್ಥಿಕ, ಸಾಮಾಜಿಕ ಅವಕಾಶ ಪಡೆದುಕೊಂಡದ್ದು ಬಂಡಾಯ ಸ್ಥಗಿತಗೊಳ್ಳಲು ಕಾರಣವಾಗಿರಬಹುದು.

೬. ಆರ್ಥಿಕ ಪ್ರಗತಿ ಸಂಸ್ಕೃತಾನುಕರಣ ಪ್ರಕ್ರಿಯೆಯನ್ನು ವೀರಶೈವರಲ್ಲಿ ತೀವ್ರಗೊಳಿಸಿದೆ.

ಶ್ರೀಮತಿ - ವಜ್ರಜಂಘರ ಕಥಾಪ್ರಸಂಗ : ಶೀಲಾಂಕ - ಪಂಪ

● ಸರಸ್ವತಿ

ಕ್ರಿ.ಶ. ಒಂಬತ್ತನೆಯ ಶತಮಾನದಲ್ಲಿದ್ದ ಶೀಲಾಂಕನ ಪ್ರಾಕೃತದ ' ಚಉಪ್ಪನ್ನ ಮಹಾಪುರಿಸ ಚರಿಯಂ ' ಶ್ವೇತಾಂಬರ ಪರಂಪರೆಯ ಪ್ರಾತಿನಿಧಿಕ ಕಾವ್ಯವಾಗಿದೆ. ಈ ಮಹಾಪುರಾಣಾಂತರ್ಗತವಾಗಿ ಬರುವ' ರಿಸಹಸಾಮಿ ಭರಹಚಕ್ಕವಟ್ಟಿಚರಿಯಂ' ಎಂಬ ಕಥಾ ಭಾಗದಲ್ಲಿ ವೃಷಭನಾಥನ ಚರಿತ್ರೆಯು ಸಾಕಷ್ಟು ವಿಸ್ತೃತವಾಗಿ ವರ್ಣಿತವಾಗಿದೆ.ಕ್ರಿ. ಶ. ಹತ್ತನೆಯ ಶತಮಾನದಲ್ಲಿದ್ದ ಪಂಪನ `ಆದಿಪುರಾಣ'ವೃಷಭನಾಥನ ಕತೆಯನ್ನು ಜಿನಸೇನಾಚಾರ್ಯರ `ಪೂರ್ವಪುರಾಣ'ವನ್ನು ಅನುಸರಿಸಿ ನಿರೂಪಿಸಿರುವ ಸ್ವತಂತ್ರವಾದ ಕನ್ನಡ ಕಾವ್ಯವಾಗಿದೆ.

ಪ್ರಸ್ತುತ ಲೇಖನದಲ್ಲಿ ಈ ವಿಭಿನ್ನ ಪರಂಪರೆಯ (ಶ್ವೇತಾಂಬರ-ದಿಗಂಬರ)ಕವಿಗಳಲ್ಲಿ ಶ್ರೀಮತಿ ವಜ್ರಜಂಘರ ಪ್ರಸಂಗವು ಮೂಡಿ ಬಂದಿರುವ ವಿಧಾನವನ್ನು ಪರಿಶೀಲಿಸುವ ಪ್ರಯತ್ನವನ್ನು ಮಾಡಲಾಗಿದೆ.

ಆದಿತೀರ್ಥಂಕರನ ಭವಾವಳಿಗಳಲ್ಲಿ ನಾಲ್ಕನೆಯ ಭವವಾದ ವಜ್ರಜಂಘ ಭವದ ನಿರೂಪಣೆ ಶ್ವೇತಾಂಬರ ದಿಗಂಬರ ಕಥಾ ಪರಂಪರೆಗಳಲ್ಲಿ ಮೂಡಿ ಬಂದಿರುವ ವಿಧಾನ ರೋಚಕವಾದುದು. ಪೂರ್ವಭವದ ಸ್ನೇಹಾನ್ವಿತವಾಗಿ ಬಂದ ಭಾವದಿಂದ ಶ್ರೀಮತಿ/ಶ್ರೀಕಾಂತೆ ವಜ್ರಜಂಘರು ವಿವಾಹವಾದುದು, ತಮ್ಮ ವೈವಾಹಿಕ ಜೀವನದ ಜೊತೆಗೆ ಅವರು ಅಳವಡಿಸಿಕೊಂಡಿದ್ದ ಧಾರ್ಮಿಕ ಪ್ರಜ್ಞೆ ಅವರಲ್ಲಿದ್ದ ಉತ್ಕಟ ಪ್ರೀತಿ, ಸಹಮರಣ - ಈ ಕಥಾಂಶಗಳ ಚೌಕಟ್ಟಿನಲ್ಲಿಯೇ ಎರಡೂ ಕಥಾ ಪರಂಪರೆಗಳು ಬರುತ್ತವೆಯಾದರೂ, ಅಲ್ಲಲ್ಲಿಯೇ ಕೆಲವು ಕುತೂಹಲಕಾರಿಯಾದ ವ್ಯತ್ಯಾಸಗಳು ಕಂಡು ಬರುತ್ತವೆ. ಶೀಲಾಂಕನಲ್ಲಿ ಬರುವ ಕಥಾ ಭಾಗದ ಸಂಕ್ಷಿಪ್ತ ವಿವರ ಹೀಗಿದೆ:

ಜಂಬೂದ್ವೀಪದ ಪುಷ್ಕಲಾವತಿ ಎಂಬ ವಿಷಯದಲ್ಲಿರುವ ಲೋಹಾರ್ಗಲ ಎಂಬ ನಗರದ ರಾಜ ಸುವರ್ಣಜಂಘ. ಆತನ ಹೆಂಡತಿ ಲಕ್ಷ್ಮಿ ಎಂಬುವಳು. ಸ್ವರ್ಗದಿಂದ ಚ್ಯುತನಾದ ಲಲಿತಾಂಗದೇವನು ಇವರಿಗೆ ಪುತ್ರನಾಗಿ ಜನಿಸಿದನು. ಈತನಿಗೆ ವಜ್ರಜಂಘನೆಂದು ಹೆಸರಾಯಿತು. ಆತನ ಬಳಿಕ ಚ್ಯುತಳಾದ ಸ್ವಯಂಪ್ರಭೆಯು ವಜ್ರದತ್ತರಾದ ಹಾಗೂ ಧಾರಿಣಿಯರಿಗೆ ಮಗಳಾಗಿ ಹುಟ್ಟಿದಳು. ಅವಳಿಗೆ ಶ್ರೀಕಾಂತೆ (ಸಿರಿಕಾಂತೆ) ಎಂದು ಹೆಸರಿಡಲಾಯಿತು. ಈಕೆಗೆ ಯೌವನ ಪ್ರಾಪ್ತಿಯಾಗಲು ತಂದೆ ಸ್ವಯಂವರವನ್ನು ವ್ಯವಸ್ಥೆ ಮಾಡಿದನು. ಪೂರ್ವಭವದ ಭಾಸದಿಂದಾಗಿ ಸ್ನೇಹಮೂಡಿ ಈಕೆ ವಜ್ರಜಂಘನನ್ನು ವರಿಸಿದಳು. ವಿವಾಹಿತರಾದ ಇವರು ಸಕಲ ಭೋಗ

ಭಾಗ್ಯಗಳನ್ನನುಭವಿಸಿದರು. ಪೂರ್ವ ಭವಾಭ್ಯಾಸದಿಂದ ಧರ್ಮ ಜಾಗೃತರಾಗಿದ್ದರು. ಹೀಗಿರುವಲ್ಲಿ ವಜ್ರಜಂಘನ ತಂದೆ ವಜ್ರಜಂಘನಿಗೆ ರಾಜ್ಯಾಭಿಷೇಕ ಮಾಡಿ ಪ್ರವ್ರಜ್ಯೆಯನ್ನು ಹೊಂದಿದನು.

ವಜ್ರಜಂಘನಿಗೆ ಶ್ರೀಕಾಂತೆಯಲ್ಲಿ ಮಗನೊಬ್ಬನಾದನು, ಬೆಳೆದು ಯೌವನ ಸಂಪನ್ನನಾದನು. ಒಮ್ಮೆ ಧವಲಗೃಹದ ಏಳನೆಯ ನೆಲೆಯಲ್ಲಿ ವಜ್ರಜಂಘನಿದ್ದನು. ಆತನ ಕೂದಲನ್ನು ಶ್ರೀಕಾಂತೆ ನೇವರಿಸುತ್ತಿದ್ದಳು. ಆತನ ಕಿವಿಯಬಳಿ ಒಂದು ನೆರೆಗೂದಲನ್ನು ಕಂಡು ಅವಳು ಉದ್ವಿಗ್ನಗೊಂಡಳು. ಆಗ ವೈರಾಗ್ಯಪರನಾದ ವಜ್ರಜಂಘನು ಪತ್ನಿಯನ್ನು ಕುರಿತು ವೈರಾಗ್ಯದ ಉಪದೇಶವನ್ನು ಮಾಡಿದನು.

ಅವರಲ್ಲಿ ವೈರಾಗ್ಯ ಭಾವವು ಮನೆಮಾಡಿಕೊಂಡಿದ್ದ ದಿನಗಳಲ್ಲಿ ರಾಜ್ಯಾಕಾಂಕ್ಷಿಯಾದ ಮಗನು, ಅವರನ್ನು ಧೂಮಪ್ರಯೋಗದಿಂದ ರತಿಗ್ರಹದಲ್ಲಿ ಕೊಂದನು.

'ಆದಿಪುರಾಣ' ದಲ್ಲಿ ಈ ಕಥೆಯ ವಿನ್ಯಾಸ ಬೇರೆಯಾಗಿರುವುದು ಕಂಡು ಬರುತ್ತದೆ. ನಾಮ ವ್ಯತ್ಯಾಸಗಳೂ ಇವೆ. ಆದಿ ಪುರಾಣದಲ್ಲಿ ಈ ಭವಾವಳಿಯ ನಿರೂಪಣೆಯಲ್ಲಿ ಕಂಡು ಬರುವ ಕಥಾ ಘಟ್ಟಗಳು ಹಲವಾರು.

ಲಲಿತಾಙ್ಗದೇವನು ಸ್ವರ್ಗದಿಂದ ಚ್ಯುತನಾಗಿ ಪುಷ್ಕಳಾವತಿ ದೇಶದ ರಾಜ ವಜ್ರಬಾಹುವಿಗೂ ರಾಣಿ ಸೌಂದರಿಗೂ ವಜ್ರಜಂಘನೆಂಬ ಮಗನಾಗಿ ಹುಟ್ಟಿದುದು - ಸ್ವಯಂ ಪ್ರಭೆಯು ವಜ್ರದಂತ ನೃಪತಿಗೂ ಲಕ್ಷ್ಮೀಮತಿಗೂ ಶ್ರೀಮತಿಯೆಂಬ ಮಗಳಾಗಿ ಹುಟ್ಟಿದುದು -ಪಂಡಿತೆಯಿಂದ ಆಕೆ ಕಲಾಪ್ರವೀಣೆಯಾದುದು - ದೇವಸಂಕುಲವನ್ನು ನೋಡಿ ಶ್ರೀಮತಿ ಜಾತಿಸ್ಮರೆಯಾಗಿ ಮೂರ್ಛೆ ಹೋದುದು-ತಂದೆ ತಾಯಿಗಳು ವಿಚಾರಿಸಲು ಬಂದುದು-ವಜ್ರದಂತ ಚಕ್ರವರ್ತಿಯ ಆಯುಧಾಗಾರದಲ್ಲಿ ಚಕ್ರರತ್ನ ಉತ್ಪನ್ನ- ಯಶೋಧರ ಮುನಿಗಳ ಕೇವಲ ಜ್ಞಾನೋದಯ- ಕೇವಲಿಗಳನ್ನು ಪೂಜಿಸಿ ಅವಧಿ ಜ್ಞಾನ ಸಂಪನ್ನನಾಗಿ ವಜ್ರದಂತನು ದಿಗ್ವಿಜಯಕ್ಕೆ ತೆರಳಿದುದು - ಪಂಡಿತೆ ಶ್ರೀಮತಿಯ ಮನದ ಅಳಲನ್ನು ಅರಿಯುವುದು- ಶ್ರೀಮತಿಯ ಹಿಂದಿನ ಭಾವದ ವೃತ್ತಾಂತ - ಶ್ರೀಮತಿ ಬರೆದುಕೊಟ್ಟ ಚಿತ್ರಪಟದಿಂದ ಪಂಡಿತೆಯು ವಜ್ರಜಂಘನನ್ನು ಸಂದರ್ಶಿಸುವುದು - ದಿಗ್ವಿಜಯದಿಂದ ಹಿಂದಿರುಗಿದ ವಜ್ರದಂತನು ಮಗಳಿಗೆ ಸಮಾಧಾನ ಹೇಳುವುದು - ವಜ್ರದಂತ ಮೊದಲಾದವರ ಭವಾಂತರ ಕಥೆ-ವಜ್ರಜಂಘ ಶ್ರೀಮತಿಯರ ವಿವಾಹ - ಪುತ್ರರ ಜನನ - ವಜ್ರದಂತ ವಜ್ರಬಾಹುಗಳ ವೈರಾಗ್ಯ-ವಜ್ರಜಂಘನು ಪುಂಡರೀಕಿಣಿಯಲ್ಲಾದ ಅರಾಜಕತೆಯನ್ನು ಹೋಗಲಾಡಿಸಲು ಶ್ರೀಮತಿಯೊಂದಿಗೆ ಪ್ರಯಾಣ ಬೆಳೆಸಿದುದು- ಚಾರಣ ಮುನಿಗಳಿಗೆ ಆಹಾರದಾನ ನೀಡಿದುದು ತನ್ನ ಮಂತ್ರಿ ಮೊದಲಾದವರ ಭವವೃತ್ತಾಂತವನ್ನರಿತುದು ಪುಂಡರೀಕಿಣಿಯನ್ನು ನಿಷ್ಕಂಟಗೊಳಿಸಿ ಹಿಂದಿರುಗಿದುದು- ಕಾಲಾನಂತರ ಸೆಜ್ಜೆಮನೆಯಲ್ಲಿ ಶ್ರೀಮತಿ ವಜ್ರಜಂಘರು ಗವಾಕ್ಷದ

ಬಾಗಿಲನ್ನು ತೆಗೆಯುವುದನ್ನು ಮರೆತು ಮಲಗಿರುವಾಗ ಹೊಗೆ ಸುತ್ತಿಕೊಂಡು ಸಾಯುವುದು- ಈ ವಿಶಾಲವಾದ ಹರವಿನಲ್ಲಿ ಶ್ರೀಮತಿ ವಜ್ರಜಂಘರ ಭವವು ಆದಿಪುರಾಣದಲ್ಲಿ ಚಿತ್ರಿತವಾಗಿದೆ.

ಜಿನಸೇನಾಚಾರ್ಯರ ಪೂರ್ವಪುರಾಣವನ್ನನುಸರಿಸಿದಂತೆ ಪಂಪನು ನಿರೂಪಿಸಿರುವ ಈ ಭವದ ಕಥೆಯಲ್ಲಿ ಕಥಾಘಟ್ಟದ ಹರವಿನ ಜೊತೆಗೆ ಜಟಿಲತೆಯೂ ಕಂಡು ಬರುತ್ತದೆ. ಹಲವಾರು ಭವ ಸಂಬಂಧಗಳು ರೂಪಗೊಳ್ಳುವ ಭವಾವಳಿಯ ನಿಗೂಢತೆ ಚಿತ್ರಿತವಾಗಿದೆ. ಶೀಲಾಂಕಿನ ಸಂಕ್ಷಿಪ್ತ ಸರಳ ಕಥಾ ವಿನ್ಯಾಸದಲ್ಲಿ ಈ ಒಂದು ಚಿತ್ರಣ ಕಂಡು ಬರುವುದಿಲ್ಲ.

ಶ್ರೀಮತಿ ವಜ್ರಜಂಘರ ವಿವಾಹದ ಹಿನ್ನೆಲೆಯಲ್ಲಿರುವ ವಿವರಗಳು ಎರಡೂ ಕಾವ್ಯಗಳಲ್ಲಿ ವಿಭಿನ್ನ ರೀತಿಯಲ್ಲಿ ಅಳವಟ್ಟಿವೆ. ಒಂದು ಕಡೆ ಸ್ವಯಂವರದ ಹಿನ್ನಲೆ ಮೂಡಿ ಬಂದಿದ್ದರೆ, ಮತ್ತೊಂದೆಡೆ ಚಿತ್ರಪಟದ ವೃತ್ತಾಂತ ಮೂಡಿ ಬಂದಿದೆ. ಪಂಪನು ನೀಡುವ ವಿವರಗಳಲ್ಲಿ ಜಾನಪದೀಯ ರೋಚಕತೆ ಕಂಡುಬರುತ್ತದೆ. ಪಂಡಿತೆಯು ಶ್ರೀಮತಿ ಬರೆದುಕೊಟ್ಟ ಚಿತ್ರಪಟವನ್ನು ಹಿಡಿದು ವಜ್ರಜಂಘನನ್ನು ಪತ್ತೆಹಚ್ಚುವ ಸಂದರ್ಭದಲ್ಲಿ ಇದನ್ನು ಗುರುತಿಸಬಹುದಾಗಿದೆ. ಎರಡೂ ಕಾವ್ಯಗಳಲ್ಲಿ ಪೂರ್ವ ಜನ್ಮ ಸ್ಮರಣೆಯ ವಿಚಾರವಿದ್ದರೂ ಪಂಪನ ಕಾವ್ಯದಲ್ಲಿ ಅದು ಎದ್ದು ಕಾಣುತ್ತದೆ.

ಈ ದಂಪತಿಗಳು ಭೋಗ ಭಾಗ್ಯಗಳನ್ನನುಭವಿಸುತ್ತಿದ್ದಂತೆ ಧರ್ಮನಿರತರೂ ಆಗಿದ್ದರು ಎಂಬುದು ಎರಡೂ ಕಾವ್ಯಗಳಲ್ಲಿ ಬರುವ ವಿಷಯವಾದರೂ, ಶೀಲಾಂಕನು ಕೊಡುವ ಒಂದು ಸುಂದರ ಚಿತ್ರಣ ಪಂಪನಲ್ಲಿಲ್ಲ. ವಜ್ರಜಂಘನ ಚೇತನ ವೈರಾಗ್ಯದತ್ತ ಒಲಿಯುತ್ತದೆಂಬುದಕ್ಕೆ ಕಲ್ಪಿಸಿರುವ ಸನ್ನಿವೇಶ ಮೋಹಕವಾದುದು. ಆತ್ಮೀಯ ಸನ್ನಿವೇಶವೊಂದರಲ್ಲಿ ನೆರೆಗೂದಲನ್ನು ಕಾಣುವ ರೀತಿ ಅದರೊಂದಿಗೆ ತಂದಿರುವ ವೈರಾಗ್ಯ ಭಾವನೆ ಮನಸಳೆಯುವಂತಿದೆ.

ಗಂಡನ ತಲೆಯನ್ನು ಸೇವಿಸುತ್ತಿದ್ದ ಶ್ರೀಕಾಂತೆ ಗಂಡನ ನೆರೆಗೂದಲನ್ನು ಕಂಡು ಉದ್ವಿಗ್ನಗೊಂಡಳು. ಆಗ ವೈರಾಗ್ಯಪರನಾದ ವಜ್ರಜಂಘನು ಹೇಳಿದ ಮಾತುಗಳಿವು :

ಸುಂದರೀ ಏಕೆ ಉದ್ವಿಗ್ನಳಾಗಿರುವೆ ? ಧರ್ಮವೃಕ್ಷದ ಬೀಜವಾಗಿರುವ ಇದು ನೆರೆ ಗೂದಲಿನ ನೆಪದಲ್ಲಿ ಬಂದಿದೆಯಷ್ಟೆ, ಏಕೆಂದರೆ ಕೂದಲು ಸಹಿತವಾದ ಹೃದಯದ ಕಲುಷ ಭಾವವನ್ನು , ಸುಂದರಿಯೇ ಹೊರಹಾಕುತ್ತದೆ. ಧರ್ಮದಲ್ಲಿ ಬುದ್ಧಿಯನ್ನು ಪ್ರೇರೇಪಿಸುತ್ತದೆ. ಮುಪ್ಪಿಗೆ ಸಮಾನವಾದ ಸುಖವುಳ್ಳದನಿಲ್ಲ, (ಪದ್ಯ ೯೪. ಪು. ೩೦) ವಿಷಯ ಸಂಗವನ್ನು ಪರಿಹಾರ ಮಾಡು. ಅಸಮಂಜಸವಾದುದನ್ನು ತ್ಯಜಿಸು. ತಪಸ್ಸನ್ನು ಆಚರಿಸು ಹೀಗೆಂದು ಕಿವಿಯ ಮೂಲಕ್ಕೆ ಬಂದಂತಹ ನೆರೆಗೂದಲು ಗುಟ್ಟಾಗಿ ಹೇಳುತ್ತದೆಂಬೋ ಎನ್ನುವಂತಿದೆ. (೯೫ - ೩೦)

ಮದ್ಯ ಮುಂತಾದುದರಲ್ಲಿ ಆಸಕ್ತವಾದ ಮನ (?) ಯೌವನದ ವಧುವಿನಿಂದ ಬೋಧಿತವಾದ ರಾಗೋತ್ಪನ್ನ ಮಾಡಿದ ಮದವು ಸುಂದರಿಯೇ ಬೇಗನೆ ನಿದ್ರೆಯಲ್ಲಿಯೇ ಎನ್ನುವಂತೆ ಮುಪ್ಪಿನಿಂದ ಬೇಗನೆ ಹೊರಟು ಹೋಗುತ್ತದೆ. (೯೬ -೩೦)

ದೂರೀಕೃತವಾದ ಯೌವನದ ಭಾರದಿಂದ ಮರೆಯಾದ ಶುಭ್ರ ಹೃದಯಗಳು ಮುಪ್ಪಿನಿಂದ ಶರತ್ಕಾಲದಲ್ಲಿ ಸರೋವರದ ನೀರಿನಂತೆ (ಶುಭ್ರವಾಗಿ) ಆಗುವುವು. (೯೭-೨೦)

ಈ ರೀತಿಯಾಗಿ ಉಂಟಾದ ಹಿರಿದಾದ ಸಂವೇಗದಿಂದ ಮಾಡಿದ ಪ್ರವ್ರಜ್ಯೆಯ ವ್ಯವಸಾಯವುಳ್ಳವನಾಗಿ ರಾಜನು ಬಂಧನ ಕಳಚಿದವನಾಗಿ ಸಹಚರಿ ಸಮೇತನಾಗಿ ಇರುವಷ್ಟರಲ್ಲಿ.....(೯೮-೨೦)

ಸಂಸಾರಿಕ ಆತ್ಮೀಯ ವಾತಾವರಣದಲ್ಲಿ ಧುತ್ ಎಂದು ತಲೆದೋರುವ ವೈರಾಗ್ಯ ಭಾವ, ಮುಪ್ಪನ್ನು ಉತ್ಸವದಂತೆ ಎದುರುಗೊಳ್ಳುವ ವಜ್ರಜಂಘನ ಮಾನಸಿಕ ಪರಿಪಕ್ವತೆ ಇವುಗಳನ್ನು ಕವಿ ಐದು ಪದ್ಯಗಳಲ್ಲಿ ಮೂಡಿಸಿದ್ದಾನೆ.

ಶ್ರೀಮತಿ ವಜ್ರಜಂಘನು ಧೂಮಕ್ಕೆ ಸಿಲುಕಿ ಸತ್ತ ವಿಚಾರವು ಎರಡೂ ಕಾವ್ಯಗಳಲ್ಲಿ ಬರುತ್ತವೆಯಾದರೂ, ಇದಕ್ಕೆ ಕಾರಣೀಭೂತವಾದ ಅಂಶದ ಬಗೆಗೆ ವಿವರಗಳು ಬೇರೆಯಾಗುತ್ತವೆ. ಶೀಲಾಂಕನು ವಜ್ರಜಂಘ ಶ್ರೀಮತಿಯರ ಮಗನೇ ಇದಕ್ಕೆ ಕಾರಣನಾದನೆಂದು ತಿಳಿಸಿದ್ದಾನೆ. ಮಗನು ಹೀಗೆ ಮಾಡಲು ಕಾರಣವಾದ ಅಂಶಗಳನ್ನು ಪಟ್ಟಿ ಮಾಡಿ ತಿಳಿಸುವವನಂತೆ, ಆತನ ದೂಷಿತವಾದ ಗುಣ ಸ್ವಭಾವಗಳನ್ನೂ ಕವಿ ನಮ್ಮ ಮುಂದೆ ಇಡುತ್ತಾನೆ. ಆ ಘಾತುಕನಾದ ಪುತ್ರನು ತಂದೆಗೆ ಜನಿಸಿದ ವೈರಾಗ್ಯ ಭಾವವನ್ನು ಅರಿತವನಾಗಿರಲಿಲ್ಲ. (ಒಂದು ವೇಳೆ ತಿಳಿದಿದ್ದರೆ ಈ ಅಕೃತ್ಯವನ್ನು ಎಸಗದಂತಹ ತಾಳ್ಮೆಯನ್ನು ವಹಿಸುತ್ತಿದ್ದನೇ ?) ಸಂಸಾರವನ್ನು ಹಗುರವಾಗಿ ತೆಗೆದುಕೊಂಡವನು; ಕೆಟ್ಟ ನಡತೆಯವನು; ಮೇಲಾಗಿ ರಾಜ್ಯಾಕಾಂಕ್ಷಿಯಾಗಿದ್ದವನು; ಭೋಗಾಭಿಲಾಶಿಯಾದವನು ಎಂಬ ಅಂಶಗಳನ್ನು ಕವಿ ಮಗನ ಅಕೃತ್ಯದ ಭೂಮಿಕೆಯನ್ನಾಗಿ ನೀಡಿದ್ದಾನೆ. (ಪಂಪನ ಪ್ರಕಾರ ಶ್ರೀಮತಿ ವಜ್ರಜಂಘರ ಮಕ್ಕಳು ಉತ್ತಮ ಸಂಸ್ಕಾರವಂತರು, ಈಗಾಗಲೇ ದೀಕ್ಷೆಯನ್ನು ಪಡೆದುಕೊಂಡ ಧರ್ಮನಿಷ್ಠರು.)

ಜಿನಸೇನಾಚಾರ್ಯರನ್ನನುಸರಿಸಿರುವ ಪಂಪನಾದರೋ ವಜ್ರಜಂಘ ಶ್ರೀಮತಿಯರ ಸಹಮರಣದ ವಿಚಾರವನ್ನು ಭಾವದೀಪ್ತಿಗೊಳಿಸಿ ವರ್ಣಿಸಿರುವನು. ಇಲ್ಲಿ ಅವರ ಮರಣಕ್ಕೆ ಕಾರಣವಾಗಿ ಬರುವ ವಿಷಯ ಅವರ ಮರವೆ. ಕಾಲಾಗರು ಧೂಪದ ಪರಿಮಳದ ಸುಗಂಧದ ಆಹ್ಲಾದವು ಬೀರುತ್ತಿದ್ದ, ಮಣಿದೀಪದ ಪ್ರಕಾಶವುಳ್ಳ ಶಯ್ಯಾಗೃಹದಲ್ಲಿ ಸಮುದ್ರ ನೊರೆಯಂತೆ ಬೆಳ್ಳಗಿರುವ ರೇಷ್ಮೆ ದುಪ್ಪಟಗಳನ್ನು ಹಾಸಿದ್ದ ಶಯ್ಯೊತಲ್ಪದಲ್ಲಿ ಈ ದಂಪತಿಗಳು

ಸುಖವನ್ನನುಭವಿಸುತ್ತಾ ನಿದ್ರಾ ಪರವಶರಾದರು. ಆದರೆ ಆ ಸುಖದ ನಿವಾಸವೇ ಮರಣದ ಆವಾಸವಾಯಿತು. ಮುಚ್ಚಿದ ಗವಾಕ್ಷವನ್ನು ತೆರೆಯಲು ಮರೆತರು. ಧೂಪವು ನೀಳ್ದು ಕ್ರಮವಾಗಿ ಮಂದವಾಗಿ ಹರಡಿ " ಆ ದಂಪತಿಯಂ ಪುದುಂಗೊಳಿಸಿ ಲೋಕಾಶ್ಚರ್ಯಮಂ ಮಾಡಿ ಕೊಂದುದು ಕೃಷ್ಣಾಗರು ಧೂಪಧೂಮನಿವಹಂ ಕೃಷ್ಣೋರಗಂ ಕೊಲ್ವವೊಲ್." ಬಿಡದೆ ಹೊಗೆ ಸುತ್ತಲು " ತೋಳಂ ಸಡಿಲಿಸದಾ ಪ್ರಾಣವಲ್ಲಭರ ಪ್ರಾಣಮನಂದೊಡೆಗಳಿದರ್, 'ಒಪರೋಪರು ಜೊತೆ ಜೊತೆಯಾಗಿ ಸಾಯುವ ಸ್ಥೆಪನ್ನು ಪಡೆದರು. ಮುಂದುವರಿದು ಪಂಪನು ಉನ್ನತವಾದ ದರ್ಶನವನ್ನು ಸಾರಿದ್ದಾನೆ." ಸಂಸ್ಕೃತಿ ಭೋಗಂಗಳ್ ಭೋಗಿ ಭೋಗದಿಂ ವಿಷಮಂಗಳ್."

ಈ ದರ್ಶನವನ್ನು ಸಾರಲು ಶ್ರೀಮತಿ ವಜ್ರಜಂಘರ ಭೋಗ ಜೀವನದ ಒಂದು ಮಗ್ಗುಲನ್ನು ತೋರಿಸುವವನಂತೆ ಅವರ ಶಯನ ಮಂದಿರ ಹಾಗೂ ಧೂಪದ ವಿಚಾರಗಳನ್ನು ನೀಡಿದ್ದಾನೆ. ಭೋಗದ ತುತ್ತ ತುದಿಯಲ್ಲಿದ್ದ ಅವರು ಭೋಗವೇ ಕಾರಣವಾಗಿ ಅಸುನೀಗಿದರು. ಶ್ರೀಮತಿ ವಜ್ರಜಂಘರ ಸಹ ಮರಣವನ್ನು ಕವಿ ಹಂತ ಹಂತವಾಗಿ ನಮ್ಮ ಮುಂದೆ ಚಿತ್ರಬಿಡಿಸುವಂತೆ ಸುಂದರ ಪ್ರತಿಮಾ ವಿಧಾನದಿಂದ ಮೂಡಿಸಿದ್ದಾನೆ.

ಶೀಲಾಂಕನಾಗಲಿ, ಪಂಪನಾಗಲಿ ಈ ಪ್ರಸಂಗದಲ್ಲಿ ಸಾರುವ ಅಂಶವೇನೆಂದರೆ ನಂಬಿದ ಪುತ್ರನಾಗಲಿ, ನೆಚ್ಚಿದ ಭೋಗವಾಗಲಿ ಜೀವಿಗೆ ಶಾಶ್ವತವಲ್ಲ, ಲೌಕಿಕ ಜೀವನದಿಂದ ಮಿಗಿಲಾದ ಆತ್ಮಸಾಕ್ಷಾತ್ಕಾರವೇ ಜೀವಿಯ ಹೆಗ್ಗುರಿ, ಉಳಿದುದೆಲ್ಲಾ ನಶ್ವರ ಎಂಬುದನ್ನು ಪರಂಪರಾನುಗತವಾಗಿ ಬಂದ ಕಥಾಶ್ರಯಗಳಿಂದ ಹೊರಹೊಮ್ಮಿಸಿದ್ದಾರೆ. ಅದನ್ನು ತಮ್ಮ ಪ್ರತಿಭಾ ಸಾಮರ್ಥ್ಯಕ್ಕೆ ತಕ್ಕಂತೆ ಕಾವ್ಯ ಭೂಮಿಕೆಯಲ್ಲಿ ಅಳವಡಿಸಿದ್ದಾರೆ. ಪಂಪನ ರೀತಿ ವಿಸ್ತೃತ, ಭಾವ ಗಂಭೀರ ; ಶೀಲಾಂಕನ ರೀತಿ ಸಂಕ್ಷಿಪ್ತ ಸರಳ ನೇರ.

ಟಿಪ್ಪಣಿ : ಸುಂದರಿ : ಕಿಮುಬ್ವಿಗ್ಗಸಿ ಧಮ್ಮ ತರುಚೀಯಮೇಯಂ ಪಲಿಯಚ್ಚಲೇಣಾಂ ಸಮಾಗಯಂ ತಿ ಜಓ -

ಅವಣೇಇ ಕಲುಸಭಾವಂ ಸುಂದರಿ ಸನಿರೋರುಹಸ್ಸ ಹಿಯಯಸ್ಸ

ಕರೋಇ ಮಣಂ ಧಮ್ಮೇ ಜರಾವ ಸರಿಸೋ ಸುಹೀ ಣತ್ಥಿ ॥೯೪॥

ಪರಿಹರಸು ಏಸಯಸಂಗಂ, ಉಜ್ಝಸು ಅಸಮಂಜಸಂ ತವಂಚರಸು

ಇಯ ಭಣಇ ವ ಣೆಹುಯಂ ಸುಯಣುಕಣ್ಣಮೂಲಾಗಯಂ ಪಲಿಯಂ ॥೯೫॥

ಮಜ್ಝಾಇಕ್ಕಮಣರ ಓ ಜೊವ್ವಣಮಹುಭೋಹಿ ಓ ಜಣಿಯರು ಓ

ಸಣಿಯಂ ಓಸರಇ ಮಓ ಸುಂದರಿ ನಿದ್ದಾ ಏವಿ (ವ) ಜರಾಏ ॥೯೬॥

ಪವಗಯ ಜೊವ್ವಣಗರು ಯತ್ತಣೇಣ ಣೆಹುಯಾಇಂ ಪಯಇಧವಲಾ ಇಂ

ಸರಸಅಲಾಇಂ ವ ಸರಏ ಜರಾಏ ಜಾಯಂತಿ ಹಿಮಯಾ ಇಂ ॥೯೭॥

ಇಯ ಜಾತಗರುಯ ಸಂವೇಗ ಜಣಿಯ ಪವ್ವಜ್ಜ ಸಜ್ಜವವಸಾಓ

ಅಚ್ಚಇ ರಾಯಾ ಜಾ ಗಲಿಯ ಬಂಧಣೋ ಸಹಯರಿ ಸಮೇಓ ॥೯೮॥

- CHUṔPANNAMAHAPURĪSACHARIYAM

PRAKRIT TEXT SOCIETY - Varanasi Ahmadabad - 5

ಪುರುಷ ಗ್ರಾಮದೇವತೆ ದಾಂಡೋಲಿಯಪ್ಪ

● ಬಿ. ಪಿ. ಪಾಟೀಲ

ದಾಂಡೇಲಿಯಲ್ಲಿ ಹಿಂದೂಗಳು, ಮುಸ್ಲೀಮರು, ಕ್ರಿಶ್ಚಿಯನ್ನರು, ಮಲಯಾಳಿಗಳು, ತೆಲುಗರು, ಮರಾಠಿಗರು, ಕೊಂಕಣಿಯವರು ಈ ಎಲ್ಲ ಪಂಗಡದವರೂ ವಾಸಿಸುವರು. ಈ ಗ್ರಾಮಕ್ಕೆ ವಲಸೆ ಬಂದಂಥ ಜನರು ತಮ್ಮ ಅಭಿರುಚಿಗೆ ತಕ್ಕಂತೆ ದೇವತೆಗಳನ್ನು ಸ್ಥಾಪಿಸಿಕೊಂಡು ಪೂಜಿಸುವರು. ಆದರೆ ಮೂಲತಃ ದಾಂಡೇಲಿಯಲ್ಲಿ ಸ್ಥಾಪನೆಗೊಂಡ ದಾಂಡೋಲಿಯಪ್ಪನನ್ನು ಮಾತ್ರ ಎಲ್ಲಾ ಕುಲದವರೂ ಆರಾಧಿಸುವರು. ಈತ ಪುರುಷದೇವನಾದರೂ ಗ್ರಾಮದೇವನಾಗಿದ್ದಾನೆ. ದಾಂಡೇಲಿಯಿಂದ ಸುಮಾರು ಎರಡು ಕಿಲೋಮೀಟರ ದೂರದಲ್ಲಿ ದಕ್ಷಿಣಕ್ಕೆ ಅಡವಿಯಲ್ಲಿ ಆಲದ ಗಿಡದ ಬುಡದಲ್ಲಿ ದಾಂಡೋಲಿಯಪ್ಪನನ್ನು ಪ್ರತಿಷ್ಠಾಪಿಸಲಾಗಿದೆ. ದಾಂಡೇಲಿಯ ಈ ಪುರುಷ ಗ್ರಾಮದೇವತೆಯನ್ನು ಕುರಿತು ಇರುವ ಐತಿಹ್ಯಗಳನ್ನು ಈಗ ಪರಿಶೀಲಿಸಬಹುದು.

ಐತಿಹ್ಯ . ೧. ಮೊದಲು ಈ ಗ್ರಾಮವು ಗೋವೆಯ ಕದಂಬ ಅರಸರ ಒಡೆತನದಲ್ಲಿತ್ತು. ಅವರ ಪ್ರತಿನಿಧಿಗಳು ಇಲ್ಲಿ ಆಳುತ್ತಿದ್ದರು. ಒಂದು ಕಾಲಕ್ಕೆ ಬಾಜೀರಾವ ಪೇಶ್ವೆಯ ದಂಡು ಈ ಕಡೆಗೆ ನುಗ್ಗಿ ಬಂದಿತು. ಅಲ್ಲದೆ ಪೇಶ್ವೆಯ ಅರಸರ ದಂಡು ಕದಂಬ ಅರಸರ ಮೇಲೆ ದಾಳಿಯನ್ನು ಮಾಡಿತು.* ಕದಂಬ ಅರಸರನ್ನು ಸೋಲಿಸಿ ದಕ್ಷಿಣಕ್ಕೆ ಓಡಿಸಿದರು. ನಂತರ ಬಾಜೀರಾವ ಪೇಶ್ವೆಯು ಇಲ್ಲಿಯ ಸುತ್ತಮುತ್ತಲಿನ ಊರಿನಲ್ಲಿ ತನ್ನ ಮಾಂಡಲೀಕರನ್ನು ನಿಯಮಿಸಿದನು. ಈ ದಾಂಡೋಲಿ ಗ್ರಾಮಕ್ಕೆ ಮಿರಾಷೆ ಎಂಬ ಮಾಂಡಲೀಕರನ್ನು ನಿಯಮಿಸಿದನು. ದಾಂಡೋಲಿಯಪ್ಪ ಎಂಬ ಹೆಸರಿನವನು ಈ ಮನೆತನಕ್ಕೆ ನಿಷ್ಠಾವಂತನಾಗಿದ್ದನು. ಈ ಮನೆತನದವರು ನವರಾತ್ರಿಯ ಉತ್ಸವವನ್ನು ಅದ್ದೂರಿಯಿಂದ ಆಚರಿಸುವ ಸಂಪ್ರದಾಯವಿತ್ತು. ಒಂದು ವರ್ಷ ಈ ಮನೆತನಕ್ಕೆ ಹೊಸದಾಗಿ ಒಬ್ಬ ಹೆಣ್ಣು ಮಗಳು ಮದುವೆಯಾಗಿ ಬಂದಿದ್ದಳು. ನವರಾತ್ರಿಯ ಸಮಯದಲ್ಲಿ ಹೊಸದಾಗಿ ಬಂದಂತಹ ಮದುವಣಗಿತ್ತಿಯು ತನ್ನ ತವರುಮನೆಗೆ ಹೋಗಿ ಅಲ್ಲಿ ಪೂಜೆಯನ್ನು ಸಲ್ಲಿಸಿ, ಗಂಡನ ಮನೆಯ ಮಹಾಪೂಜೆಯನ್ನು ನೆರವೇರಿಸಬೇಕಾಗಿತ್ತು. ಇದು ಅವರ ಕುಲದ ಸಂಪ್ರದಾಯವಾಗಿತ್ತು. ಹೀಗಿದ್ದಾಗ ಆ ವರ್ಷ ಹೆಣ್ಣು ಮಗಳು ತನ್ನ ತವರು ಮನೆಯಾದ ಗಾಡೋಳಿಗೆ ದಾಂಡೋಲಿಯಪ್ಪನ ಸಂಗಡ ಹೊರಟಳು. ಕೇರವಾಡದ ಹತ್ತಿರ ಹೊಳೆಯನ್ನು

---

* ಇಲ್ಲಿಯ ಗೋವೆಯ ಕದಂಬರಿಗೂ ಪೇಶ್ವೆಯವರಿಗೂ ಕಾಲದ ಸಾಕಷ್ಟು ಅಂತರವಿರುವುದನ್ನು ಗಮನಿಸಬೇಕು.

ದಾಟಬೇಕಾಗಿತ್ತು. ಆದರೆ ದುರ್ದೈವದಿಂದ ವಿಪರೀತ ಮಳೆಯು ಆದ ಪರಿಣಾಮದಿಂದ ಹೊಳೆಯು ತುಂಬಿ ಹರಿಯುತ್ತಿತ್ತು. ಹೀಗಾಗಿ ಅವರಿಬ್ಬರು ಹೊಳೆಯ ದಂಡೆಯ ಮೇಲೆ ಗೋಳಿ ಮರದ ಕೆಳಗೆ ಬಹಳ ಹೊತ್ತು ಕಾಯ್ದು ಕುಳಿತುಕೊಳ್ಳಬೇಕಾಯಿತು. ಆದರೆ ಇಬ್ಬರೂ ಸಮಪ್ರಾಯದವರು. ಆಗ ಮಿರಾಷೆಯವರ ಮನೆಯ ಸೊಸೆಯು ದಾಂಡೋಲಿಯಪ್ಪನೊಡನೆ ಸರಸ ಬೇಡಿದಳು. ಆಗ ದಾಂಡೋಲಿಯಪ್ಪನು " ನೀನು ನನಗೆ ಅನ್ನ ಕೊಟ್ಟ ತಾಯಿ " ಕೆಟ್ಟ ದೃಷ್ಟಿಯಿಂದ ನನ್ನನ್ನು ನೋಡಬೇಡ ಎಂದು ಅಂಗಲಾಚಿದನು. ಆಗ ಲಕ್ಷ್ಮೀ ಮಿರಾಷೆಯು ತನ್ನ ಗುಟ್ಟು ರಟ್ಟಾಗುವದೆಂಬ ಹೆದರಿಕೆಯಿಂದ ಅವನ ಕೈಯಲ್ಲಿದ್ದ ಕುಡಗೋಲನ್ನು ಕಸಿದುಕೊಂಡು ಅವನ ರುಂಡವನ್ನು ಕಡಿದಳು. ಆಗ ಆ ರುಂಡವು ಅಲ್ಲಿಂದ ಉರುಳುತ್ತ ಉರುಳುತ್ತ ಮಿರಾಷೆಯವರ ಮನೆಯ ಬಾಗಿಲಲ್ಲಿ ಬಂದಿತು. ಮನೆಯ ಯಜಮಾನನನ್ನು ಕರೆದು ಹೇಳಿತು. " ಈ ಮನೆತನದ ಮದುವಣಗಿತ್ತಿಯು ಹೊಳೆಯ ದಂಡೆಯ ಮೇಲೆ ಇದ್ದಾಳೆ. ಅವಳ ರಕ್ಷಣೆಗೆ ಯಾರನ್ನಾದರೂ ಕಳುಹಿಸಿಕೊಡಿರಿ ಎಂದು ಹೇಳಿ ಪ್ರಾಣವನ್ನು ಬಿಟ್ಟಿತು." ಅದೇ ಸ್ಥಳವು ದಾಂಡೋಲಿಯಪ್ಪನ ದೇವಸ್ಥಾನವಾಗಿ ರೂಪ ಪಡೆಯಿತು.

ಐತಿಹ್ಯ ೨. ಒಂದು ಕಾಲಕ್ಕೆ ದಾಂಡೇಲಿಯು ಪಾಳೆಯಗಾರರ ಒಡೆತನದಲ್ಲಿತ್ತು. ಅಲ್ಲಿ ಒಂದು ಕೋಟೆಯು ಇತ್ತು ಎಂದು ಹೇಳಲಾಗುತ್ತದೆ. ಆ ಕೋಟೆಯ ಅಧಿಪತಿ ಸಂಗರ ಮಲ್ಲನಾಯಕ. ಪಾಳೆಗಾರಿಕೆ ಅಳಿದು ಹೋದ ಮೇಲೆ ಆ ಮನೆತನದವರು ಅಲ್ಲಿ ಕೃಷಿ ಮಾಡಿಕೊಂಡು ಇದ್ದರು. ಆ ಮನೆತನದವನೇ ದಾಂಡೋಲಿಯಪ್ಪ. ಇವನು ನಿಷ್ಠೆಯಿಂದ ದೇವತ್ವವನ್ನು ಪಡೆದುಕೊಂಡಿದ್ದಾನೆ ಎಂದು ಹೇಳುತ್ತಾರೆ.

ಮೂರ್ತಿಯ ಆಕಾರ : ಬಯಲಿನಲ್ಲಿ ಸುಮಾರು ಒಂದು ಅಡಿ ಎತ್ತರದ ಕಾಡುಕಲ್ಲನ್ನು ಪ್ರತಿಷ್ಠಾಪಿಸಲಾಗಿದೆ. ಸುತ್ತಲೂ ಸಿಮೆಂಟಿನ ನೆಲಗಟ್ಟನ್ನು ಮಾಡಲಾಗಿದೆ. ಇದು ದಾಂಡೋಲಿಯಪ್ಪನ ಮೂರ್ತಿ ಎಂದು ಹೇಳುವರು. ಇದರ ಇನ್ನೊಂದು ಬದಿಯಲ್ಲಿ ಒಂದು ಹೆಣ್ಣು ಮೂರ್ತಿ ಕಲ್ಲಿನಲ್ಲಿದೆ. ಇದು ಸುಮಾರು ಎರಡು ಅಡಿ ಎತ್ತರವಿದೆ. ಇದಕ್ಕೆ ಲಕ್ಷ್ಮೀ ಎಂದು ಹೇಳುವರು.

ದಿನನಿತ್ಯದ ಪೂಜೆ : ದಾಂಡೋಲಿಯಪ್ಪನನ್ನು ಮರಾಠಾ ಪಂಗಡಕ್ಕೆ ಸೇರಿದ ಮಿರಾಷೆ ಮನೆತನದವರು ಪೂಜಿಸುವರು. ಪ್ರತಿದಿನ ಪೂಜೆ ನೆರವೇರುವುದಿಲ್ಲ. ನೈವೇದ್ಯಗಳಿಲ್ಲ. ಅಮವಾಸ್ಯೆ ಮತ್ತು ಹುಣ್ಣಿಮೆಯ ದಿನಗಳಲ್ಲಿಯೂ ಪೂಜೆ ಹಾಗೂ ನೈವೇದ್ಯಗಳು ಸಲ್ಲುವುದಿಲ್ಲ. ಜಾತ್ರೆಯ ದಿವಸ ಮಾತ್ರ ಪೂಜೆ ಹಾಗೂ ನೈವೇದ್ಯಗಳು ಸಲ್ಲುವವು.

ಜಾತ್ರೆ : ಅಶ್ವಿಜ ಶುದ್ಧ ದಶಮಿಯ ದಿವಸ ದಾಂಡೋಲಿಯಪ್ಪನ ಜಾತ್ರೆಯು ಜರುಗುತ್ತದೆ ಅಂದು ಮಿರಾಷೆಯವರ ಮನೆಯ ಮುಂದೆ ಇರುವ ಪಾದುಕೆಗಳಿಗೆ ಪೂಜೆ ಸಲ್ಲಿಸುವರು.

(ಈ ಪಾದುಕೆಗಳು ಇರುವ ಸ್ಥಳವೇ ದಾಂಡೋಲಿಯಪ್ಪನು ಪ್ರಾಣ ಬಿಟ್ಟ ಸ್ಥಳವೆಂದು ಹೇಳಲಾಗುತ್ತದೆ.) ಈ ದಾಂಡೋಲಿಯಪ್ಪನ ಸ್ಥಳಕ್ಕೆ ಪೂಜೆ ಸಲ್ಲಿಸುವರು. ಸಾಯಂಕಾಲದ ಸಮಯದಲ್ಲಿ ಮೂರ್ತಿಯ ಹತ್ತಿರ ಖಡ್ಗವನ್ನು ಇರಿಸಿ ಪೂಜಿಸುವರು. ನಂತರ ಪಲ್ಲಕ್ಕಿಯಲ್ಲಿ ಲಕ್ಷ್ಮೀಮೂರ್ತಿಯನ್ನು ಇರಿಸಿಕೊಂಡು ಮಜಲಿನೊಂದಿಗೆ ಕೇರವಾಡದ ಹತ್ತಿರ ಅವನು ವಧೆಯಾದ ಸ್ಥಳಕ್ಕೆ ಬರುವರು. ಅಲ್ಲಿ ಲಕ್ಷ್ಮೀಮೂರ್ತಿಯನ್ನು ಹಾಗೂ ಖಡ್ಗವನ್ನು ಇರಿಸಿ ಅವುಗಳಿಗೆ ಪೂಜೆ ಸಲ್ಲಿಸುವರು. ಪೂಜೆಯ ನಂತರ ಹುಂಜ, ಟಗರುಗಳ ಬಲಿ ಕೊಡುವರು. ಭಕ್ತರು ಕಾಯಿ ಅರ್ಪಿಸುವರು. ಪುನಃ ರಾತ್ರಿಯ ಸಮಯದಲ್ಲಿ ಪಲ್ಲಕ್ಕಿಯೊಂದಿಗೆ ದಾಂಡೇಲಿಗೆ ಆಗಮಿಸುವರು. ಈ ದಾಂಡೋಲಿಯಪ್ಪನನ್ನು ಕುರಿತ ಅಭಿಪ್ರಾಯಗಳು ಹೀಗಿರುತ್ತವೆ:

೧. ಮಿರಾಷ್ಠೆಯ ಮನೆತನದವರು ದಾಂಡೋಲಿಯಪ್ಪನು ತಮ್ಮ ಮನೆತನದ ಹೆಣ್ಣು ಮಗಳ ಮೇಲೆ ಏರಿಹೋದನೆಂದೂ ತನ್ನ ಪಾತಿವ್ರತ್ಯವನ್ನು ಕಾಪಾಡಿಕೊಳ್ಳಲು ಅವಳು ಅವನ ರುಂಡವನ್ನು ಹಾರಿಸಿದಳೆಂದೂ ಹೀಗೆ ಕಥೆಯನ್ನು ಹೆಣೆದು ಅವಳನ್ನೇ ದೇವತೆನ್ನಾಗಿ ಮಾಡಿ ಜಾತ್ರೆಯನ್ನು ಮಾಡುವರು. ದಾಂಡೋಲಿಯಪ್ಪನು ಬೇಡರ ಕುಲದವನು. ಅದಕ್ಕಾಗಿ ಬೇಡರ ಸಂಕುಲದವರು ಸ್ವಾಮಿನಿಷ್ಠೆಗಾಗಿ ಹೋರಾಡಿ ತನ್ನ ಪ್ರಾಣವನ್ನು ಅರ್ಪಿಸಿದನೆಂದೂ ಅವನೊಬ್ಬ ಮಹಾಪುರುಷನೆಂದೂ ಜಾತ್ರೆ ಮಾಡುವರು.

ನಿಯಮಗಳು : ೧) ಲಕ್ಷ್ಮೀಯ ಪೂಜೆಯನ್ನು ಮಿರಾಷೆಯ ಮನೆತನದ ಯಜಮಾನತಿಯು ನೆರವೇರಿಸಬೇಕು.

೨) ದಾಂಡೋಲಿಯಪ್ಪನ ಪೂಜೆಯನ್ನು ಈ ಮನೆತನದ ಯಜಮಾನ ಮಾಡಬೇಕು.

ನಂಬಿಕೆಗಳು : ೧) ಜಾತ್ರೆಯ ಸಮಯದಲ್ಲಿ ಹುಂಜ ಮತ್ತು ಟಗರನ್ನು ಅರ್ಪಿಸದಿದ್ದರೆ ಲಕ್ಷ್ಮೀ ಕಾಡುವಳು ಎಂಬ ನಂಬಿಕೆಯಿದೆ

೨ ಭಕ್ತರ ಹರಕೆಗಳು ಫಲಿಸುವವು ಎನ್ನುವ ನಂಬಿಕೆ ಇದೆ.

ಹರಕೆಗಳು : ೧) ಹಣ್ಣುಕಾಯಿ, ಕುಂಕುಮ ಅರ್ಪಿಸುವರು.

೨) ಕುಡಗೋಲನ್ನು ಅರ್ಪಿಸುವರು.

೩) ಹುಂಜ, ಟಗರನ್ನು ಅರ್ಪಿಸುವರು.

ಈ ಗ್ರಾಮದೇವತೆಯ ಹಾಡುಗಳು ಕನ್ನಡ, ಕೊಂಕಣಿ, ಮರಾಠಿ ಈ ಮೂರು ಭಾಷೆಯಲ್ಲಿರುತ್ತವೆ. ಇವುಗಳನ್ನು ಸೂಪಾದ ಜನರು ಮಾತ್ರ ಹಾಡುವರು. ಇವುಗಳನ್ನು ಸಂಗ್ರಹಿಸಿ ಪ್ರಕಟಿಸುವುದು ತೀರಾ ಅವಶ್ಯವಿದೆ.

ಹೀಗೆ ಕರ್ನಾಟಕದಲ್ಲಿ ಸ್ಥಳೀಯ ವೀರ ವ್ಯಕ್ತಿಗಳೇ (LocalHeroes) ಗ್ರಾಮದೇವತೆಗಳಾಗಿ ರೂಪ ಪಡೆದಿರುವದು ವ್ಯಕ್ತವಾಗುತ್ತದೆ. ಇಂಥ ಐತಿಹಾಸಿಕ ವ್ಯಕ್ತಿಗಳ ಸುತ್ತ ಹೆಣೆದಿರುವ ಐತಿಹ್ಯಗಳನ್ನು ಪ್ರತ್ಯೇಕವಾಗಿ ಸಂಗ್ರಹಿಸಿ ಅಭ್ಯಸಿಸಬೇಕು. ಪ್ರತಿಯೊಂದು ಗ್ರಾಮದಲ್ಲಿರುವ ಎಲ್ಲ ಗ್ರಾಮದೇವತೆಗಳಿಗೂ ಮೂಲತಃ ಸ್ಥಳೀಯ ವೀರ ವ್ಯಕ್ತಿಗಳೇ ಆಗಿರುತ್ತಾರೆ. ಇಂಥ ಗ್ರಾಮದೇವತೆಗಳ ಅಧ್ಯಯನದಿಂದ ಸ್ಥಳೀಯ (Local) ಅಥವಾ ಪ್ರಾದೇಶಿಕ (Regional) ಚರಿತ್ರ (History) ಯ ಮೇಲೆ ಅನೇಕ ಹೊಸ ಬೆಳಕು ಬೀಳುವ ಸಾಧ್ಯತೆಯಿದೆ. *

---

* ಮಾಹಿತಿ ಹೇಳಿದವರು ಕೆ.ಎನ್. ರಾವ್. (ವಯಸ್ಸು ೮೦) 'ಆನಂದ' ೧೪ ನೇ ಬ್ಲಾಕ್, ದಾಂಡೇಲಿ ಹಾಗೂ ಗಂಗಾ ಗೋಪಾಲ ಮಿರಾಷಿ (ವಯಸ್ಸು ೫೦) ದೇವಸ್ಥಾನದ ಪೂಜಾರಿ.

ಸರಡಗಿಯ ಶಾಸನಗಳು

● ಹನುಮಾಕ್ಷಿ ಗೋಗಿ

. .

ಗುಲ್ಬರ್ಗಜಿಲ್ಲೆಯ ಗುಲ್ಬರ್ಗತಾಲೂಕಿನಲ್ಲಿರುವ ಒಂದು ಚಿಕ್ಕ ಹಳ್ಳಿ ಸರಡಗಿ. ಗುಲ್ಬರ್ಗದಿಂದ ದಕ್ಷಿಣಕ್ಕೆ ಜೇವರ್ಗಿ ರಸ್ತೆಯಲ್ಲಿ ೨೫ ಕಿಲೋಮೀಟರುಗಳ ಅಂತರದಲ್ಲಿ ಈ ಹಳ್ಳಿಯಿದೆ. ಒಂದೊಮ್ಮೆ ಈ ಹಳ್ಳಿಯಲ್ಲಿ ಹಲವಾರು ಧರ್ಮಗಳನ್ನು ಅನುಸರಿಸುವ ಜನರಿದ್ದರು ಎಂಬುದನ್ನು ಸೂಚಿಸುವಂತೆ ಎತ್ತರದ ದಿನ್ನೆಯ ಮೇಲಿರುವ ಹಳ್ಳಿಯಲ್ಲಿ ಈಗಲೂ ಹಾಳು ಬಿದ್ದ ದೇಗುಲಗಳು, ೨ ತೀರ್ಥಂಕರ ವಿಗ್ರಹಗಳು, ಒಡೆದ ಕಂಬಗಳು ಚದುರಿ ಬಿದ್ದಿರುವುದೇ ಸಾಕ್ಷಿ.

ಈ ಊರಿನಲ್ಲಿ ಕಲ್ಯಾಣಚಾಲುಕ್ಯ ಅರಸರ ಕಾಲದ ಎರಡು ಶಾಸನಗಳು ದೊರೆಯುತ್ತಲಿದ್ದು, ಒಂದು ಕ್ರಿ. ಶ ೧೧೧೦ ರ ತ್ರಿಭುವನಮಲ್ಲ ಆರನೆಯ ವಿಕ್ರಮಾದಿತ್ಯನ ಶಾಸನವಾಗಿದ್ದರೆ ಇನ್ನೊಂದು ತ್ರುಟಿತವಿದ್ದು ಕ್ರಿ. ಶ ೧೦೧೧ ನೆಯ ವರ್ಷದ ಶಾಸನವಾಗಿದೆ.

ಎರಡೂ ಶಾಸನಗಳು ದಾನಶಾಸನಗಳಾಗಿದ್ದು ಸರವಡಿಗೆಯ ಪ್ರಭುಗಳು, ಐನೂರ್ವರು, ನಖರರು ಸೇರಿ ಆದಿತ್ಯದೇವರು, ನಾರಾಯಣದೇವರು, ಶಂಕರನಾರಾಯಣ ದೇವರನ್ನು ಹೆಸರಿಸಿ ಧೂಪ - ದೀಪ - ನೈವೇದ್ಯ - ಅರ್ಚನೆ - ಅಷ್ಟಪರ್ವಗಳಿಗೆ ಬಿಟ್ಟ ಭೂದತ್ತಿ ಸುಂಕದತ್ತಿಗಳನ್ನು ಉಲ್ಲೇಖಿಸುತ್ತವೆ. ಇವುಗಳಲ್ಲಿ ಭತ್ತ, ಉಪ್ಪು, ಅಡಕೆ, ಎಲೆ, ಎಣ್ಣೆ , ಮೆಣಸು, ಜೀರಿಗೆ ಇತ್ಯಾದಿಗಳನ್ನು ಮಾರಾಟ ಮಾಡಿದಾಗ ದೇವರಿಗೆ ನೀಡುವ ದತ್ತಿ ಪ್ರಮಾಣವನ್ನು ತಿಳಿಸಲಾಗಿದೆ. ಜೊತೆಗೆ ವಿದ್ಯಾದಾನ. ಪಾತ್ರವರ್ಗ, ಹಾಡುವವರು, ಹಳವಿಗರಿಗೂ ಬಿಟ್ಟ ಭೂದತ್ತಿಯನ್ನು ತಿಳಿಸುತ್ತವೆ.

ಎರಡೂ ಶಾಸನಗಳು ಗದ್ಯದಲ್ಲಿದ್ದು ಕನ್ನಡ ಮತ್ತು ಸಂಸ್ಕೃತ ಫಲಶ್ರುತಿಗಳನ್ನು ಒಳಗೊಂಡಿವೆ. ಸರವಡಿಗೆ, ಸರ್ವಡಿಗೆ ಎಂದು ಈಗಿನ ಸರಡಗಿಯ ಮತ್ತು ಕಲುಂಬುರಗೆ ಎಂದು ಈಗಿನ ಕಲ್ಬುರ್ಗಿ ನಗರದ ಉಲ್ಲೇಖ ಈ ಶಾಸನಗಳಲ್ಲಿವೆ.

ಶಾಸನಗಳ ವಿವರ ಈ ಕೆಳಗಿನಂತಿದೆ :

I

ಹನುಮಾನ್ ದೇವರ ಗುಡಿಯ ಕಟ್ಟೆಯ ಹತ್ತಿರ ಬಿದ್ದಿರುವ 2' x 2½' ಅಳತೆಯ ಕರಿಕಲ್ಲಿನಲ್ಲಿ ದೊಡ್ಡ ಅಕ್ಷರಗಳಲ್ಲಿ ಕಲ್ಲಿನ ಮುಂಭಾಗ ಹಾಗೂ ಎಡಭಾಗಗಳಲ್ಲಿ ಶಾಸನಗಳನ್ನು ಬರೆಯಲಾಗಿದೆ. ಶಾಸನದ ಮೇಲ್ಭಾಗ ಹಾಗೂ ಕೆಳಭಾಗ ಒಡೆದು ಕಳೆದು ಹೋಗಿದೆ.

ಅರಸನ ಹೆಸರನ್ನು ಉಲ್ಲೇಖಿಸುವ ಮೇಲ್ಭಾಗ ಒಡೆದು ಕಳೆದು ಹೋಗಿದ್ದು, ಶಾಸನದ ೭ ರಿಂದ ೯ ನೆಯ ಸಾಲುಗಳಲ್ಲಿ ಬರುವ " ಶಕವರ್ಷ ೯೩೩ ವಿರೋಧಿಕೃಸ್ಸಂವತ್ಸರದ ಮಾರ್ಗಶಿರ ಬಹುಳ ದ್ವಾದಶಿ ಸೋಮವಾರ ವುತ್ತರಾಯಣ ಸಂಕ್ರಾನ್ತಿಯನ್ದು " ಎನ್ನುವ ಮಿತಿಯು ಕ್ರಿ. ಶ ೧೦೧೧ ನೆಯ ನವೆಂಬರ ೨೫ಕ್ಕೆ ಸರಿಹೊಂದುತ್ತಿದ್ದು ವಾರ ಮಾತ್ರ ಸೋಮವಾರವಾಗಿರದೆ ಆದಿತ್ಯವಾರವಾಗಿದೆ. ಶಾಸನದ ಪೂರ್ಣ ಪಾಠ ಕೆಳಗಿನಂತಿದೆ :

ಕಲ್ಲಿನ ಮುಂಭಾಗ

೧ ಉತ್ತರೋತ್ತರ ರಾಜ್ಯಂಗೆಯ್ಯುತ್ತಿರೆ I

೨ .ಪಡಿಚನ್ದಮಾಗೆ ಸಕಳೋರ್ವ್ವರ್ಷ್ವಿೀ ಮಣ್ಡಳ

೩ ಮಾದರದಿ.. ಸರಾಗದಿಂ

೪ . . . .

೫ ಮಾದಿತ್ಯ ವಿಸ್ತರದಿ ಸಾಸನ ಮಾ

೬ ಡಿಸಿದನಾಚನ್ದ್ರಾರ್ಕ್ಕ ತಾರಂಬರಂ II

೭ ಕವರ್ಷ ೯೩೩ ವಿರೋಧಿಕೃಸ್ಸಂವತ್ಸರದ ಮಾ

೮ ರ್ಗಶಿರ ಬಹುಳ ದ್ವಾದಶಿ ಸೋಮವಾರ ವುತ್ತರಾ

೯ ಯಣ ಸಂಕ್ರಾನ್ತಿಯನ್ದು ಶಂಕರನಾರಾಯಣದೇವ

೧೦ ನೈಷ್ಠಿಕಸ್ಥಾನಮಾಗಿ ಬಿಟ್ಟ ಕ್ಷೇತ್ರಮ್ಮತ್ತರು

೧೧ ಇದರೊಳಗೆ ದೇವರಷ್ಟಪರ್ವ್ವಕ್ಕೆ ಮ ೧೦ ವಿದ್ಯಾದಾನ

೧೨ ಕ್ಕೆ ಮ ೩೦ ಹಟವಿಗ ಬಿಕ್ಕೋಜಂಗೆ ಮ ೧ II ಹಾಡುವ

೧೩ ಮ ೩ II ಪಾತ್ರಕ್ಕಂ ಮ ೧ II ಸನಾ..

೧೪ ವಿಮ್ಮತ್ತರ್ಗ್ಗೆ ಅರ .. ಗ .... ದೇವನ

೧೫ ಗಳಂ ಕುರುಕ್ಷೇತ್ರ ಕವಿಲೆಯನಳಿದಂ

ಕಲ್ಲಿನ ಎಡಭಾಗ

೧ ಸೇತುನೃಪಾಣಂ ಕಾ

೨ ಲೇ ಕಾಲೇ ಪಾಳನಿಯೋ

೩ ಭವದ್ಭಿಃ ಸರ್ವ್ವಾನೇತಾ

೪ ನ್ಭಾಗಿನಃ ಪಾರ್ತ್ಥಿವೇಂದ್ರಾ

೫ ನ್ಭೂಯೋ ಭೂಯೋ ಯಾ

೬ ಚತೇ ರಾಮಚಂದ್ರಃ II

೭ ಸ್ವಧರ್ಮ್ಮ ...

೮ ತಪ್ಪದೆ .. ವಾರಣಾಸಿ

೯ ಯಲಿ ಕವಿಲೆಯು

೧೦ ಮಂ ಬ್ರಾಹ್ಮಣರುಮಂ

೧೧ ಕೊಂದ ದೋಶ II ಸ್ವಸ್ತಿ ಗೋ

೧೨ ಬ್ರಾಹ್ಮಣಾಭ್ಯಃ II

II

ರಾಮಲಿಂಗೇಶ್ವರ ದೇವಸ್ಥಾನದ ಒಳಗಡೆ ಗೋಡೆಯಲ್ಲಿರುವ 1 ½′ x 4′ ಅಳತೆಯ ಕರಿಕಲ್ಲಿನಲ್ಲಿ ಅಕ್ಷರಗಳನ್ನು ಆಳವಾಗಿ ಕೆತ್ತಲಾಗಿದ್ದು ಮೇಲ್ಭಾಗ ಸುಣ್ಣದಲ್ಲಿ ಮುಚ್ಚಿಹೋಗಿದೆ.

ಕಲ್ಯಾಣಚಾಲುಕ್ಯಚಕ್ರವರ್ತಿ ತ್ರಿಭುವನಮಲ್ಲ ಆರನೆಯ ವಿಕ್ರಮಾದಿತ್ಯನ ಸಕಲ ಪ್ರಶಸ್ತಿಗಳನ್ನು ಒಳಗೊಂಡ ಈ ಶಾಸನದ ೭ ರಿಂದ ೧೦ ನೆಯ ಸಾಲುಗಳಲ್ಲಿ ಬರುವ "ಶ್ರೀ ಮಚ್ಚಾಳುಕ್ಯ ವಿಕ್ರಮ ವರಿಷದ ೩೧ ನೆಯ ವಿಕ್ರಿತ ಸಂವತ್ಸರದ ವೈಶಾಖ ಸುದ್ಧ ಪುಣ್ಣಮೆ ಬ್ರಿಹಸ್ಪತಿವಾರ ಸೂರ್ಯ್ಯಗ್ರಹಣ " ಎನ್ನುವ ಮಿತಿಯು ಕ್ರಿ. ಶ ೧೧೧೦ ನೆಯ ಮೇ ೫ ನೆಯ ತಾರೀಖಿಗೆ ಸರಿಹೊಂದುತ್ತಿದ್ದು ಅಂದು ಸೂರ್ಯಗ್ರಹಣವಿರಲಿಲ್ಲ ಚಂದ್ರಗ್ರಹಣವಿತ್ತು ಎನ್ನುವುದನ್ನು ಗಮನಿಸಬಹುದು.

ದಾನಶಾಸನದ ಪೂರ್ಣಪಾಠ ಕೆಳಗಿನಂತಿದೆ -

೧ ಸ್ವಸ್ತಿ ಸಮಸ್ತ ಭುವನಾಶ್ರಯಂ ಶ್ರೀ ಪ್ರಿಥ್ವೀವಲ್ಲಭ ಮಹಾ

೨ ರಾಜಾಧಿರಾಜ ಪರಮೇಸ್ವರ ಪರಮಭಟ್ಟಾರಕ ಸತ್ಯಾಶ್ರಯ

೩ ಕುಳತಿಳಕಂ ಚಾಳುಕ್ಯಾಭರಣಂ ಶ್ರೀಮತ್ರಿಭುವನಮಲ್ಲ

೪ ದೇವರ ವಿಜಯರಾಜ್ಯಮುತ್ತರೋತ್ತರಾಭಿವ್ರಿದ್ಧಿ ಪ್ರವರ್ದ್ಧ

೫ ಮಾನಮಾಚಂದ್ರಾರ್ಕ್ಕ ತಾರಂಬರಂ ಸಲುತ್ತಮಿರೆ ಶ್ರೀ ರಾ

೬ ಜಧಾನಿ ಕಲ್ಯಾಣದ ನೆಲೆವೀಡಿನೊಳು ಸುಖಸಂಕಥಾ ವಿ

೭ ನೋದದಿಂ ರಾಜ್ಯಂಗೆಯ್ಯುತ್ತಮಿರೆ ಶ್ರೀಮಚ್ಚಾಳು

೮ ಕ್ಯ ವಿಕ್ರಮ ವರಿಷದ ೩೧ ನೆಯ ವಿಕ್ರಿತ ಸಂವತ್ಸರ

೯ ದ ವೈಶಾಖ ಸುದ್ಧ ಪುಣ್ಣಮೆ ಬ್ರಿಹಸ್ಪತಿವಾರ ಸೂರ್ಯ್ಯಗ್ರ

೧೦ ಹಣದಂದು ವಿಷ್ಣುಭಟ್ಟರ ಸರವಡಿಗೆಯ ಪ್ರಭುಗಳುಂ

೧೧ ಅಯಿನೂರ್ವ್ವರುಂ ನಕರಮುಂ ವಿದ್ದ್ಧ ಆದಿತ್ಯದೇವರ್ಗ್ಗಂ

೧೨ ನಾರಾಯಣದೇವರ್ಗ್ಗಂ ಧೂಪದೀಪ ನಿವೇದ್ಯಾರ್ಚ್ಚನೆಗೆ ಬಿಟ್ಟ ಧರ್ಮ್ಮ

೧೩ ಹೇಱಿಂಗೆ ಮಾನ ಭತ್ತ ಅಂಗಡಿಯಲು ನಖರ

೧೪ . . . . ಗದಿಂ

೧೫ ಹೆಡಗೆಯಲು ಉಪ್ಪು ಸೊಲ್ಲಗೆ ಎರಡು I ಹೊಂಗೆ ಅಡ

೧೬ ಕೆ ಹಂನ್ನೆರಡು II ಹೇಱಿಂಗೆ ಎಲೆ ಅಯಿವತ್ತು ಅಂಗಡಿ

೧೭ ಯಲು ಭತ್ತ ಧಾರೆಯೆಣ್ಣೆ ಅರ್ದ್ಧಸೊಲ್ಲಗೆ I ಮೆಳಸು I

೧೮ ಜೀರಗೆಯ ಹೇಱಿಂಗೆ ಮಾನವೊಂದು ಹೂ ಮಾ

೧೯ ಱಿದೊಡೆ ಹಡಲಿಗೆಗೆರಡು ನಾರಂ ಕುಡುವರು

೨೦ ಇಂತೀ ಧರ್ಮ್ಮಮಂ ತಪ್ಪದೆ ಪ್ರತಿಪಾಳಿಸುವರು

೨೧ ಆವನೊರ್ವ್ವನಿದಂ ಕಿಡಿಸಿದವಂ ವಾರಣಾಸಿಯೊಳು

೨೨ ಕವಿಲೆಯನಳಿದ ದೋಷಂ ಸಾಗ್ಗ್ರಂ II ಸ್ವದತ್ತಾಂ ಪರದ

೨೩ ತ್ತಾಂ ವಾಯೋಹರೇತು ವಸುಂಧರಾಂ

೨೪ ಷಷ್ಟಿರ್ವ್ವರ್ಷ ಸಹಸ್ರಾಣಿ ವಿಷ್ಟಾಯಾಂ ಜಾ

೨೫ ಯತೇ ಕ್ರಿಮಿಃ II ಯಿಂತುಭೆಯ ಸಾ

೨೬ ಮ್ಯದವರಕ್ಕೂರೊಡೆಯರೆನಿಪ್ಪರಕ್ಕೆ ಕೊಣ್ಡೆ

೨೭ ಯರಕ್ಕನ್ತಾರಳಿದೊಡಮೀ ಧರ್ಮ್ಮಮನೋ

೨೮ ರಂತಿರೆ ರೌರವಕ್ಕೆ ಗಳಗಳನೀವರು II

೨೯ ವದೀನೀಸ್ವರದೇವರ್ಗ್ಗೆ ಬಿಟ್ಟ ಕ್ಷೇತ್ರ ಕಲುಂಬರಗೆಯ

೩೦ .ಶಂ ಹಡುವಲು ಕೋಲ ಮತ್ತ ೬ ಸರ್ವ್ವಾದಿಗೆ

೩೧ ಯ ಬಟ್ಟೆಯ ಮೂಡಣ ಮಳಮೆ ೧

ಮಹಾರಾಷ್ಟ್ರದ ದಲಿತ ರಂಗಭೂಮಿ

● ರಾಮಕೃಷ್ಣ ಮರಾಠೆ

ಅಮೇರಿಕೆಯಲ್ಲಿ ನೀಗ್ರೊ ಲೇಖಕರು ತಾವು ಅನುಭವಿಸಿದ್ದ ನೋವು ಅವಮಾನಗಳನ್ನು ಯಾವ ಸಂಕೋಚವಿಲ್ಲದೆ ರಂಗದ ಮೇಲೆ ಪ್ರದರ್ಶಿಸಿದರು. ಅವರಿಂದ ಬ್ಲಾಕ್ ಥೇಟರ್ ಅಸ್ತಿತ್ವಕ್ಕೆ ಬಂದಿತು. ಅದೆ ಪ್ರಕಾರ ಮಹಾರಾಷ್ಟ್ರದ ದಲಿತ ಲೇಖಕರು ತಮ್ಮ ನೋವು ಶೋಷಣೆಯ ವಿರುದ್ಧ ಪ್ರತಿಭಟನೆಯನ್ನು ವ್ಯಕ್ತಪಡಿಸಲಿಕ್ಕೆ ಸಾಹಿತ್ಯದ ಹಾಗೆ ರಂಗಕಲೆಯನ್ನೂ ಆಶ್ರಯಿಸಿದ್ದಾರೆ. ರಂಗ ಪ್ರದರ್ಶನಗಳ ಮೂಲಕ ದಲಿತರ ಬದುಕನ್ನು, ದಲಿತ ಚಳುವಳಿಯ ಧ್ಯೇಯ ಧೋರಣೆಗಳನ್ನು ಜನರಿಗೆ ಸುಲಭವಾಗಿ ಮನಗಾಣಿಸಲಿಕ್ಕೆ ಅವರಿಗೆ ಸಾಧ್ಯವಾಗಿದೆ. ಅವರ ಈ ಹೋರಾಟದ ಫಲವಾಗಿ ಮಹಾರಾಷ್ಟ್ರದಲ್ಲಿ ದಲಿತ ರಂಗಭೂಮಿಯೊಂದು ಪ್ರತ್ಯೇಕ ಅಸ್ತಿತ್ವ ಪಡೆದುಕೊಂಡು ಬೆಳೆಯುತ್ತಿರುವುದು ಗಮನಾರ್ಹ ವಿಷಯ. ದಲಿತ ರಂಗಭೂಮಿಯು 'ಸಮತೆ ಮತ್ತು ಚಲನಶೀಲ ಸಮಾಜದ ಮೌಲ್ಯಗಳನ್ನು ಪ್ರತಿಪಾದಿಸುವ ಪರಿಣಾಮಕಾರಿ ವೇದಿಕೆ' ಎಂಬ ಗೌರವಕ್ಕೆ ಪಾತ್ರವಾಗಿದೆ. ಮಹಾರಾಷ್ಟ್ರದಲ್ಲಿಯ ಉಪೇಕ್ಷಿತರ ಶೋಷಿತರ, ಅನ್ಯಾಯಕ್ಕೊಳಗಾದವರ ನೋವಿನ ಧ್ವನಿ ಈ ರಂಗವೇದಿಕೆಯ ಮುಖಾಂತರವೇ ಕೇಳಿ ಬರುತ್ತಿದೆ ಎಂಬುದು ರಂಗ ವಿಮರ್ಶಕರ ಅಭಿಪ್ರಾಯ. ಕರ್ನಾಟಕದಲ್ಲಿ ಮಾತ್ರ ದಲಿತ ಸಾಹಿತ್ಯದಂತೆ ರಂಗಭೂಮಿ ಬೆಳೆದು ಬರಲಿಲ್ಲ. ಇದಕ್ಕೆ ಚಳುವಳಿಯಲ್ಲಿ ತೊಡಗಿಸಿಕೊಂಡ ಸಾಹಿತಿಗಳ ಮನಸ್ಸು ಮಾಧ್ಯಮ ರಂಗಭೂಮಿ ಆಗಿಲ್ಲದಿರುವುದೇ ಕಾರಣವೆನ್ನಬಹುದು.

ಕೆಲವು ಬೀದಿ ನಾಟಕಗಳನ್ನು ಹೊರತುಪಡಿಸಿದರೆ, ದಲಿತಕವಿ ಸಿದ್ದಲಿಂಗಯ್ಯನವರ ಕಥೆಗಳಿಗೆ, ದೇವನೂರ ಮಹಾದೇವರ ಕಾದಂಬರಿಗಳಿಗೆ ರಂಗರೂಪ ಕೊಟ್ಟ ಪ್ರಯತ್ನವೇ ಮೇಲಿನ ಮಾತಿಗೆ ನಿದರ್ಶನ. ಆದರೆ ಈ ನಿಟ್ಟಿನಲ್ಲಿ ಮಹಾರಾಷ್ಟ್ರದ ಸಾಧನೆ ಗಮನಾರ್ಹ.

ದಲಿತ ರಂಗ ಚಳುವಳಿ

ದಲಿತ ಪ್ರಜ್ಞೆಯ ವಿಕಾಸ ಮತ್ತು ದಲಿತ ಚಳುವಳಿಯ ಅಂಗವಾಗಿ ಮಹಾರಾಷ್ಟ್ರದಲ್ಲಿ ಈ ರಂಗಭೂಮಿ ಅಸ್ತಿತ್ವಕ್ಕೆ ಬಂದಿದ್ದರೂ ರಂಗಭೂಮಿಯ ಪರಿಕಲ್ಪನೆ ಮಾತ್ರ ದಲಿತ ಸಮಾಜಕ್ಕೆ ಹೊಸದಲ್ಲ. ತಮಾಶಾ, ಭಾರುಡ, ಗೊಂದಳ, ಜಾಗರಣ ಮುಂತಾದ ಪಾರಂಪರಿಕ ರಂಗ ಕಲೆಗಳನ್ನು ಉಳಿಸಿ ಬೆಳೆಸಿಕೊಂಡು ಬಂದ ಶ್ರೇಯಸ್ಸು ದಲಿತ ಕಲಾವಿದರಿಗೆ ಸಲ್ಲುತ್ತದೆ.

ಆದರೆ ದಲಿತರ ಅನುಭವದ ಅಭಿವ್ಯಕ್ತಿಗೆ ರಂಗಭೂಮಿ ಬಳಕೆಯಾಗಿರಲಿಲ್ಲ. ಸು ೧೯೧೦ ರಲ್ಲಿ ಕಿಸನ್ ಫಾಗೋಜಿಯವರಂಥ ಲೇಖಕರಿಂದ ಮೊದಲ ಬಾರಿಗೆ ಅಂಥ ಪ್ರಯತ್ನ ನಡೆಯಿತೆಂದು ರಂಗಭೂಮಿ ಇತಿಹಾಸ ಹೇಳುತ್ತದೆ.

ಕಿಸನ್ ಫಾಗು ಅವರ ನಾಟಕಗಳಿಂದ ರಂಗಕಲೆ ವೈನೋದಿಕ ನೆಲೆಯಿಂದ ವೈಚಾರಿಕ ನೆಲೆಗೆ ಸರಿಯಿತು. ಇವರ ಸತ್ಯ ಶೋಧಕ ಜಲಸಾಗಳು ಮನೆ-ಮನೆಯಲ್ಲಿ ಹೊಸ ಜಾಗೃತಿಯನ್ನುಂಟು ಮಾಡಿದವು. ಇವರ ' ಸಂತ ಚೋಕಾ ಮೇಳಾ ' ಮತ್ತು ' ಸನಾತನ ಧರ್ಮದ ಪಂಚರಂಗಿ ತಮಾಶಾ' ಕೃತಿಗಳು ಧಾರ್ಮಿಕ , ಸಾಮಾಜಿಕ ಬದುಕಿನ ವಿಸಂಗತಿಗಳನ್ನು ಪ್ರದರ್ಶಿಸುವ ಮೂಲಕ ರಂಗಭೂಮಿಯ ಸಾಧ್ಯತೆಗಳನ್ನು ವಿಸ್ತರಿಸಿದವು.

ಫಾಗೋಜಿಯವರ ನಂತರ (೧೯೨೦) ಕೆಲಕಾಲ ದಲಿತ ಬದುಕನ್ನು ಆಧರಿಸಿದ ನಾಟಕಗಳು ರಚನೆಯಾಗಲಿಲ್ಲ. ಗಂ.ವಿ.ಗೋಖಲೆ ಅವರ 'ಮಹಾರವಾಡಾ` (ಹೊಲಗೇರಿ)ದಲಿತರ ನೋವಿಗೆ ಧ್ವನಿ ಕೊಟ್ಟಿದ್ದರೂ ಮೇಲ್ಜಾತಿಯವರ ಸಹಾನುಭೂತಿಯಿಂದ ಹೊರತಾಗಿರಲಿಲ್ಲ. ಈ ದೃಷ್ಟಿಯಿಂದ ದಲಿತರ ಬದುಕಿನಲ್ಲಿ ವೈಚಾರಿಕ ಪ್ರಜ್ಞೆ, ಸ್ವಾಭಿಮಾನ ಮೂಡಿಸುವ ಕೆಲಸ ೧೯೪೦ ರ ಸುಮಾರು ಕೇರುಬುವಾ ಗಾಯಕವಾಡ ಅವರಿಂದ ಪರಿಣಾಮಕಾರಿಯಾಗಿ ನಡೆಯಿತು. ಇವರು ನಾಟಕಗಳ ಮೂಲಕ ಫುಲೆ - ಅಂಬೇಡ್ಕರ್ ತತ್ವಗಳನ್ನು ಜನಮನಕ್ಕೆ ತಲುಪಿಸಲು ಬಹಳ ಶ್ರಮಪಟ್ಟರು. ಇವರಿಂದ ಮರಾಠಿ ದಲಿತ ನಾಟಕ ಸಾಹಿತ್ಯಕ್ಕೆ ಸ್ಫೂರ್ತಿ ಒದಗಿತು.

ಸ್ವಾತಂತ್ರ್ಯೋತ್ತರ ಕಾಲದಲ್ಲಿ, ದಲಿತ ಚಳುವಳಿ ಹರಳು, ಗಟ್ಟುತ್ತಿದ್ದಂತೆ ರಂಗದ ಮೇಲಿ ಹೊಸ ಹೊಸ ನಾಟಕಗಳು ಪ್ರದರ್ಶನಕ್ಕೆ ಬಂದವು. ಗಂಗಾಧರ ಪಾಂತಾವಣೆ ಅವರ 'ಮಾಣೂಸಕಿ ಚಾ ಬಂಡ` (ಮನುಷ್ಯತ್ವದ ಬಂಡಾಯ) ದತ್ತಾ ಭಗತರ 'ಪಿಂಜರಾತಿಲ ಪೋಪಟ` (ಪಂಜರದ ಗಿಳಿ) ನಾಮದೇವ ವ್ಹಟಕರ ಅವರ 'ಡಾಗ` (ಕಲೆ), ' ವಾಟ ಚುಕಲಿ`(ದಾರಿ ತಪ್ಪಿತು). ಪ್ರೇಮಾನಂದ ಗಜವಿ ಅವರ 'ಘೋಟಭರ ಪಾಣಿ` (ಗುಟುಕು ನೀರು) ಮ.ಭೀ ಚಿಟಣೀಸರ ' ಯುಗಯಾತ್ರಾ` ಮುಂತಾದವು ದಲಿತ ರಂಗ ಚಳುವಳಿಗೆ ಚಾಲನೆ ನೀಡಿದ ನಾಟಕಗಳೆನಿಸಿವೆ. ಇವು ಪ್ರಚಲಿತವಿದ್ದ ತಮಾಶಾ, ಭಾರುಡ ಮುಂತಾದ ಜನಪ್ರಿಯ ರಂಗರೂಪಗಳ ತಂತ್ರಗಳನ್ನು ಬಳಸಿಕೊಂಡು, ದಲಿತ ಪ್ರಜ್ಞೆ ಜಾಗೃತಗೊಳಿಸುವಲ್ಲಿ ಯಶಸ್ವಿಯಾಗಿವೆ. ಇವುಗಳನ್ನು ಬರೆದವರು ದಲಿತರಾದ್ದರಿಂದ ಅವರ ಸಮಾಜದ ನೋವು - ಅವಮಾನಗಳು ರಂಗದ ಮೇಲೆ ಸಹಜವಾಗಿ ಜೀವ ಪಡೆದುಕೊಂಡವು.

ಸಂಘರ್ಷ , ಬಿಡುಗಡೆಗಾಗಿ ಹೋರಾಟ ಮತ್ತು ಚಳುವಳಿ ಈ ಮೂರು ಅಂಶಗಳು ದಲಿತ ರಂಗ ಚಳುವಳಿಯ ಮೂರು ಆಧಾರಗಳೆನಿಸಿವೆ. ಇವು ನಾಟಕದ ಪ್ರದರ್ಶನವನ್ನು

ನಿರ್ದೇಶಿಸುವ ಸೂತ್ರಗಳೂ ಹೌದು. ಮನರಂಜನೆಗಿಂತ ಮನೋವಿಕಾಸವೆ ಈ ರಂಗದ ಉದ್ದೇಶವಾದ್ದರಿಂದ ನಾಟಕದ ವಸ್ತುವಿಗೂ-ಚಳುವಳಿಗೂ ಏಕರೂಪ ಸಂಬಂಧವಿರುತ್ತದೆ. ಸ್ವಾತಂತ್ರ್ಯ , ಸಮತೆ, ಸೋದರತೆ ಇವುಗಳ ಜತೆಗೆ ಕಲಿಯಿರಿ, ಸಂಘಟಿತರಾಗಿರಿ ಮತ್ತು ಹೋರಾಡಿರಿ ಎಂಬ ಮೂರು ಮೌಲ್ಯಗಳೂ ಈ ರಂಗ ಕಲೆಯ ಕೇಂದ್ರಬಿಂದುಗಳೆನಿಸಿವೆ. ಈ ಸೈದ್ಧಾಂತಿಕ ನೆಲೆಯಿಂದ , 'ಕಾಳೋಖ್ಯಾಚ ಗರ್ಭಾತ `(ಕತ್ತಲೆಯ ಗರ್ಭದಲ್ಲಿ), 'ಥಾಂಬಾ ರಾಮರಾಜ್ಯ ಯೇತಯ` (ನಿಲ್ಲಿ, ರಾಮರಾಜ್ಯ ಬರುತ್ತದೆ !.) ನಾಟಕಗಳು ಗಮನಾರ್ಹವಾಗಿವೆ

ಇವತ್ತಿನ ದಿನಗಳಲ್ಲಿ ರಾಷ್ಟ್ರೀಯ ಏಕತೆಗೆ, ರಾಷ್ಟ್ರೀಯವಾದಕ್ಕೆ ಹಲವಾರು ತೊಡಕುಗಳಿವೆ. ಧರ್ಮ , ಸಂಪ್ರದಾಯ ಕಲೆ, ಜಾತೀಯತೆ. ಅಪರಾಧ, ಭ್ರಷ್ಟಾಚಾರ, ಧರ್ಮಾಂಧತೆ, ಪ್ರಾದೇಶಿಕತೆ ಮುಂತಾದ ಘಾತಕ ಶಕ್ತಿಗಳಿಂದ ರಾಷ್ಟ್ರೀಯತೆಗೆ ಧಕ್ಕೆ ಸಂಭವಿಸುತ್ತದೆ. ಇಂಥ ಸ್ಥಿತಿಯಲ್ಲಿ ಮನರಂಜನೆಯ ಮಾರ್ಗ ಹಿಡಿದ ನಾಟಕಗಳಿಗಿಂತ ಸಾಮಾಜಿಕ ಅರಿವು ಮೂಡಿಸುವ ನಾಟಕಗಳು ಮೌಲಿಕವೆನಿಸುವುದು ಸಹಜ. ಇಂಥ ಸಾಮಾಜಿಕ ಬದ್ಧತೆಯಿಂದಾಗಿ ದಲಿತ ನಾಟಕಗಳು ಉಪಯುಕ್ತವೆನಿಸುತ್ತಿವೆ. ಸರ್ವ ಜನರ ಹಿತಾಸಕ್ತಿ, ನೈತಿಕ ಮೌಲ್ಯಗಳ ಉದಾತ್ತೀಕರಣ ದಲಿತ ದಲಿತೇರರನ್ನು ಒಂದುಗೂಡಿಸುವ ಪ್ರಯತ್ನದಿಂದ ದಲಿತ ರಂಗದ ಪ್ರದರ್ಶನಗಳು ಭರವಸೆ ಹುಟ್ಟಿಸಿವೆ.

ನಾಟಕಗಳು

`ಜನರನ್ನು ವಸ್ತುಸ್ಥಿತಿಯ - ವಾಸ್ತವದ ಸಂದರ್ಭದಲ್ಲಿ ಅಂತರ್ಮುಖಿಯನ್ನಾಗಿ ಮಾಡಿ ಚಿಂತನೆಗೆ ತೊಡಗಿಸುವ ಶಕ್ತಿ- ಸಾಮರ್ಥ್ಯ ದಲಿತ ನಾಟಕಗಳಿಗಿದೆ' - ಎಂಬುದು ರಂಗವಿಮರ್ಶಕ ಡಾ. ಮಧುಕರ ಮೊಕಾಶಿ ಅವರ ಅಭಿಪ್ರಾಯ. ದತ್ತಾ ಭಗತ, ಪ್ರೇಮಾನಂದ ಗಜವಿ ದಲಿತ ರಂಗಭೂಮಿಯ ಶ್ರೇಷ್ಠ ನಾಟಕಕಾರರು. ದಲಿತ ನಾಟಕಗಳು ವರ್ಗ ಸಂಘರ್ಷದ ಮಿತಿಯೊಳಗೆ ಸುತ್ತುತ್ತವೆ ಎಂಬ ಅಪವಾದಕ್ಕೆ ಇವರ ಕೃತಿಗಳು ಉತ್ತರ ನೀಡುತ್ತವೆ. ಭಗತ ಅವರ `ವಾಟಾ ಪಳವಾಟಾ' (ದೋಚುವ ಹಾದಿ) ಗಜವಿ ಅವರ `ಕಿರವಂತ' (ಮಹಾರಾಷ್ಟ್ರದಲ್ಲಿ `ಕಿರವಂತ' ಎಂಬುದು ಬ್ರಾಹ್ಮಣರೊಳಗಿನ ಉಪಜಾತಿ ಹೆಸರು. ಕೇವಲ ಅನಿಷ್ಟ ಹಾಗೂ ಕೀಳು ಕೆಲಸಗಳಿಗೆ ಯೋಗ್ಯರಾದ ಬ್ರಾಹ್ಮಣ ಜನ ಎಂದರ್ಥ) ದಲಿತ - ದಲಿತೇತರರನ್ನು ವಿಚಾರಕ್ಕೆ ತೊಡಗಿಸುವಂಥ ವೈಶಿಷ್ಟ್ಯಪೂರ್ಣ ಕಲಾಕೃತಿಗಳೆನಿಸಿವೆ.

ಅಂಬೇಡ್ಕರ್ ತತ್ವಗಳನ್ನು ತಮ್ಮ ಜೋಳಿಗೆಯನ್ನಾಗಿ (ಭಿಕ್ಷಾಪಾತ್ರೆ) ಮಾಡಿಕೊಂಡು ಸುಖ ಉಣ್ಣುತ್ತಿರುವ ದಲಿತ ನಾಯಕರ ಸ್ವಾರ್ಥ. ಸುಶಿಕ್ಷಿತ, ನೌಕರಿ ವರ್ಗದ ದಲಿತರು ತಳೆದ ಭೇದ ಭಾವಗಳನ್ನು ವಾಟಾ - ಪಳವಾಟಾ ಪರಿಣಾಮಕಾರಿಯಾಗಿ ಚಿತ್ರಿಸುತ್ತದೆ. `ಕಿರವಂತ'

ಜಾತಿ ಮೂಲದ ಸ್ವಾರ್ಥವನ್ನು ಸೂಕ್ಷ್ಮವಾಗಿ ಪರಿಶೀಲಿಸಿದರೆ, ಭಾಲಚಂದ್ರ ಫಡಕೆಯವರ 'ಅಂಬೇಡ್ಕರ ಮತ್ತು ಗಾಂಧೀಜಿ' ನಾಟಕವು ಅಸ್ಪೃಶ್ಯತಾ ನಿವಾರಣೆಯನ್ನು ಪರಿಣಾಮಕಾರಿಯಾಗಿ ವಿಶ್ಲೇಷಿಸುತ್ತದೆ. ಈ ನಾಟಕಗಳು ಸಂಘರ್ಷದ ತೀವ್ರ ಅಪೇಕ್ಷೆಯೊಂದಿಗೆ ಫುಲೆ - ಅಂಬೇಡ್ಕರ್ ಚಳುವಳಿಯ ವಿಚಾರಗಳನ್ನು ಕಲಾತ್ಮಕವಾಗಿ ಸಾದರಪಡಿಸುತ್ತವೆ.

ಮೇಲ್ಜಾತಿ - ಕೆಳ ಜಾತಿಗಳನ್ನು ಸರಳ ರೇಖೆಯಲ್ಲಿ ಮುನ್ನಡೆಸಿದ ರಾಜಕೀಯವನ್ನು ಗಜವಿ ಅವರ `ಘೋಟಭರ ಪಾಣಿ' ಚೆನ್ನಾಗಿ ಅಭಿನಯಿಸುತ್ತದೆ. 'ಮಣ್ಣು ಮಣ್ಣಿನ್ನೆ ಕೂಡಲು ಬಿಡುವುದಿಲ್ಲ ಈ ಗುಟುಕು ನೀರು' - ಇದು ನಾಟಕದ ಕೊನೆಯ ಮಾತು. ಗುಟುಕು ನೀರು, ಜಾತಿ ವ್ಯವಸ್ಥೆಯನ್ನು ಪೋಷಿಸುವ ಒಂದು ಸನಾತನ ಪ್ರತಿಮೆಯಾಗಿ ನಾಟಕದುದ್ದಕ್ಕೂ ಚಲಿಸುತ್ತದೆ. ಇನ್ನೊಂದು `ನಾಟಕ ದೇವ ನಗರಿ' ಇದರಲ್ಲಿ ದೇವದಾಸಿ ಸಮಸ್ಯೆ ಇದೆ, ದೇವದಾಸಿ ಪದ್ಧತಿ ಬೆಳೆದು ಬಂದುದುರ ದರ್ಶನ ಮಾಡಿಸುತ್ತ - `ಯಲ್ಲಮ್ಮ, ನೀನು ಇಲ್ಲಿರುವವರೆಗೆ ಹೀಗೆಯೇ ನಡೆಯುತ್ತದೆ. ನೀನು ಇಲ್ಲಿ ಏತಕ್ಕಾಗಿರುವೆ?' ಎಂದು ಪ್ರಶ್ನಿಸುವುದರ ಮೂಲಕ ವಿಮೋಚನೆಗೆ ಹಾದಿ ತೋರುವುದು ಈ ನಾಟಕದ ವಿಶೇಷತೆ.

ರಂಗಭೂಮಿ ಮತ್ತು ಚಿತ್ರರಂಗದ ಪ್ರಸಿದ್ಧ ನಟ ಶ್ರೀರಾಮ ಲಾಗು ಅವರ ನಿರ್ದೇಶನದಲ್ಲಿ `ಕಿರವಂತ'ದ ಪ್ರಯೋಗಗಳು ಜನಮನ್ನಣೆ ಪಡೆದರೆ; `ತನ - ಮಾಜೋರಿ' (ಕಸ - ಬೆಳೆದಿದೆ) ಲಂಡನ್ನಿನಲ್ಲಿ ಪ್ರಯೋಗಗೊಂಡು ಯಶಸ್ವಿಯಾಗಿದೆ. ಇಂಥ ಹನ್ನೆರಡಕ್ಕೂ ಹೆಚ್ಚು ಏಕಾಂಕ ಸಂಕಲನಗಳನ್ನು ಬರೆದ ಪ್ರೇಮಾನಂದ ಗಜವಿ ದಲಿತ ರಂಗ ಚಳುವಳಿಯ ಶಕ್ತಿಯಾಗಿ ನಿಂತು ಅನನ್ಯ ಯಶ ಸಂಪಾದಿಸಿದ್ದಾರೆ.

ಲಕ್ಷ್ಮಣ ಮಾನೆ ಅವರ `ಪ್ರಕಾಶ ಪುತ್ರ', ರಾಮನಾಥ ಚವ್ಹಾಣರ `ಸಾಕ್ಷಿಪುರಂ' ನಾಟಕಗಳು ದಲಿತ ರಂಗಕ್ಕೆ ಹೊಸ ಕೊಡುಗೆ ಎನಿಸಿವೆ. `ಮರಾಠಿ ನಾಟಕ ರಚನೆಯಲ್ಲಿ ಮೊದಲು ದಲಿತರ ಜೀವನವು ದಲಿತ ರಂಗ ಚಳುವಳಿಯ ಮೂಲಕ ಸಾಕಾರಗೊಂಡಿದೆ ಮತ್ತು ಮರಾಠಿ ನಾಟಕ ಸಾಹಿತ್ಯದ ಕ್ಷಿತಿಜ ವಿಸ್ತಾರಗೊಂಡಿದೆ. ದಲಿತ ನಾಟಕಗಳಿಂದ ಅನುಭವವ ಭಾಂಡಾರ ಬೆಳೆದಿದೆ. ಮಾನವ ಸಮಾಜದ ಸಂಕೀರ್ಣತೆ, ತೊಡಕುಗಳ ದರ್ಶನ ಒದಗಿದೆ' - ಎಂಬುದು ವಿಮರ್ಶಕರ ಮಾತು.

ಗಮನಿಸಬೇಕಾದ ಅಂಶವೆಂದರೆ, ರಂಗಚಳುವಳಿಯ ಮುನ್ನಡೆಯ ದೃಷ್ಟಿಯಿಂದ, ನಾಟಕಗಳ ಪ್ರಯೋಗ ದೃಷ್ಟಿಯಿಂದ, ಸಂಘಟನೆಯ ದೃಷ್ಟಿಯಿಂದ, ಕಲಾತ್ಮಕತೆಯ ದೃಷ್ಟಿಯಿಂದ, ಉದ್ಭವಿಸುವ ಪ್ರಶ್ನೆಗಳಿಗೆ ಪರಿಹಾರ ಸೂಚಿಸುವ ಹಾದಿಯಲ್ಲಿ ದತ್ತಾ ಭಗತ, ರಾಮನಾಥ ಚವ್ಹಾಣ, ಗಜವಿ ಅವರಿಂದ ನಾಟಕಗಳು ರಚನೆಯಾಗುತ್ತಿರುವುದು. ಇವರ

ಜೊತೆಗೆ ಪ್ರಭಾಕರ ಧುಪಾರೆ, ಭಗವಾನ್ ಹಿರೆ, ಭುಜಂಗ ಮೇಶ್ರಾಮ, ಜಾನಿ ಮೇಶ್ರಾಮ, ಇವರ ಹೊಸ ತಂತ್ರಗಳು, ಹೊಸ ವಿಷಯಗಳು, ಹೊಸ ಜೀವನ ದೃಷ್ಟಿಯ ನಾಟಕಗಳು ದಲಿತ ಚಳುವಳಿಯ ವ್ಯಾಪ್ತಿಯನ್ನು ವಿಸ್ತರಿಸಿವೆ. ಸಂಪ್ರದಾಯದ ಮಿತಿಗಳೊಳಗಿಂದ ಹೊರ ಬೀಳಲಿರುವ ರಂಗ ಚಳುವಳಿಗೆ ನೆರವಾಗಿವೆ.

ಸವಾಲುಗಳು:

ದಲಿತ ರಂಗಭೂಮಿ ಎದುರಿಗಿರುವ ಸವಾಲುಗಳು, ಎದುರಿಸುತ್ತಿರುವ ಸಮಸ್ಯೆಗಳ ಕುರಿತು ಮಹಾರಾಷ್ಟ್ರದಲ್ಲಿ ಸಾಕಷ್ಟು ಚರ್ಚೆ ನಡೆದಿದೆ. ರಂಗ ಚಿಂತಕರಿಂದ ಹಲವಾರು ಸೂಕ್ತ ಸಲಹೆಗಳು ವ್ಯಕ್ತವಾಗಿವೆ. ದಲಿತ-ದಲಿತರೊಳಗಿನ ಜಾತೀಯತೆ, ಸಮಾಜ ವ್ಯವಸ್ಥೆ , ದಲಿತ ಸಿರಿವಂತರ ಜೀವನ ಪದ್ಧತಿ, ವೃತ್ತಿ-ಪ್ರವೃತ್ತಿ, ಸ್ವಾರ್ಥ ಸಮಯ ಸಾಧಕತೆ, ದಲಿತರ ಭವಿಷ್ಯ ಹಾಗೂ ಜಾಗೃತಿ, ಹೊಸ ಬೇಡಿಕೆಗಳು, ಹಕ್ಕುಗಳು, ವಿಶೇಷವಾಗಿ ಸ್ತ್ರೀಯರ ಸಮಸ್ಯೆಗಳು, ಸವಾಲುಗಳು-ರಾಜಕೀಯ, ಸಾಮಾಜಿಕ, ಶೈಕ್ಷಣಿಕ ರಂಗಗಳ ದೋಷ-ದೌರ್ಬಲ್ಯಗಳು , ಬ್ರಾಹ್ಮಣ ಸಂಸ್ಕೃತಿಯ ದುಷ್ಪರಿಣಾಮ ಈ ಎಲ್ಲ ದೋಷ-ದೌರ್ಬಲ್ಯಗಳನ್ನು ಬರೆದು ಪ್ರದರ್ಶಿಸುವ ಮೂಲಕ ದಲಿತ ರಂಗ ಚಳುವಳಿಗೆ ಉತ್ತಮ ಭವಿಷ್ಯವಿದೆ- ಎಂದು ದಲಿತ ಸಾಹಿತಿಗಳ ಆಶಯ. ಮುಂದಿನ ದಿನಗಳಲ್ಲಿ ದಲಿತ-ದಲಿತೇತರರ ನಡುವಿನ ಭೇದ ಅಳಿಸಿ ಹಾಕಿ ಸಮಾನತೆಯ ಯುಗ ನಿರ್ಮಾಣವಾಗುವ ದಿಶೆಯಲ್ಲಿ ದಲಿತ ರಂಗ ಚಳುವಳಿ ಕ್ರಿಯಾಶೀಲವಾಗಬೇಕಿದೆ.

ರಂಗ ಚಳುವಳಿಯ ಕಾರ್ಯಕರ್ತರು , ನಟರು, ನಾಟಕಕಾರರು, ಪ್ರೇಕ್ಷಕರು ಚಳುವಳಿಯ ಹೊಣೆಯನ್ನು ನಿಷ್ಠೆಯಿಂದ ನಿರ್ವಹಿಸುವ ಅಗತ್ಯವಿದೆ. ಪ್ರದರ್ಶನಗಳಲ್ಲಿ ಹೊಸ ಹೊಸ ತಂತ್ರಗಳನ್ನು ಅಳವಡಿಸಿಕೊಳ್ಳುತ್ತಿರಬೇಕು. ಇತ್ತೀಚೆಗೆ ಏಕಾಂಕ ನಾಟಕೋತ್ಸವ, ರಂಗತರಬೇತಿ ಶಿಬಿರಗಳನ್ನು ಯೋಜಿಸುತ್ತಿರುವುದು; ವಿಮರ್ಶೆ-ಸಂವಾದಗಳನ್ನೇರ್ಪಡಿಸಿ, ಹೊಸ ಅಂಶಗಳನ್ನು ಮೇಳವಿಸಿಕೊಳ್ಳುತ್ತಿರುವುದು ಆರೋಗ್ಯಕರ ಬೆಳವಣಿಗೆಯೆನಿಸಿದೆ. ನಾಟಕಗಳ ವಾಚನ, ರಂಗ ಪ್ರಯೋಗಗಳ ಅಧ್ಯಯನ ಮತ್ತು ಮೌಲ್ಯಮಾಪನ ಮಾಡುತ್ತ ಪ್ರದರ್ಶನಗಳನ್ನು ಪೂರ್ಣತೆಯತ್ತ ಕೊಂಡೊಯ್ಯಬೇಕು. ಇದರಿಂದ ಪ್ರೇಕ್ಷಕರಿಗೆ ಹೊಸ ಅನುಭವ ಲಭಿಸುವುದು. ಅಲ್ಲದೆ ಅಸ್ಪಷ್ಟಗೊಳಿಸುವ ಸಾಮಾಜಿಕ ಜೀವನದ ಪರಿಚಯವಾಗುವುದು.

ಈ ಪ್ರಯೋಗಶೀಲ ನಡೆ ಗ್ರಾಮೀಣ ಭಾಗಕ್ಕೂ ವ್ಯಾಪಿಸಬೇಕಾದ ಅಗತ್ಯ ಕಂಡುಕೊಳ್ಳಲಾಗಿದೆ. ನಿತ್ಯವೂ ಬೆಳೆಯುತ್ತಿರುವ ಸಮಸ್ಯೆಗಳಿಗೆ , ಅಸಮಾನತೆಗಳಿಗೆ, ದೌರ್ಜನ್ಯಗಳಿಗೆ ರೂಪ ಕೊಟ್ಟು ಜನರಿಗೆ ತಲುಪಿಸುವ , ಅವರಲ್ಲಿ ಅರಿವು ಮೂಡಿಸುವುದರತ್ತ

ದಲಿತ ರಂಗಭೂಮಿ ಕ್ರಿಯಾಶೀಲವಾದರೆ ಬೆಳವಣಿಗೆಗೆ ಗತಿ ದೊರೆಯುತ್ತದೆ. ಪಾರಂಪರಿಕ ರಂಗಕಲೆಗಳ ಉತ್ತಮಾಂಶಗಳನ್ನು ಸ್ವೀಕರಿಸಿ, ಕಲೆಯನ್ನೇ ಉಪಜೀವನ ಮಾಡಿಕೊಂಡ ಕಲಾವಿದರನ್ನು ಉಪಯೋಗಿಸಿ ಕೊಂಡರೆ ಸಾಂಸ್ಕೃತಿಕವಾಗಿಯೂ ಬೆಳೆಯಲು ನೆರವಾಗುವುದು.

ಒಟ್ಟಾರೆ ದಲಿತ ರಂಗ ಚಳುವಳಿಯು ದಲಿತ ಸಮೂಹದ, ದಲಿತ ಪ್ರಜ್ಞೆಯ , ದಲಿತರ ಸುಖ-ದುಃಖಗಳ ಒಂದು ಸಾಂಸ್ಕೃತಿಕ ಚಳುವಳಿಯಾಗಿ ಮುನ್ನಡೆಯಬೇಕಿದೆ. ದಲಿತ ನಾಟಕಗಳು- ಸಮಕಾಲೀನ ಸಮಾಜದ, ಭವಿತವ್ಯದ ಅಭಿವ್ಯಕ್ತಿಯ ಸುಧಾರಣಾವಾದಿ ಚಳುವಳಿಯ ಪ್ರತೀಕಗಳಾಗಿ ಪ್ರದರ್ಶನಗೊಳ್ಳುತ್ತಿರಬೇಕು.

ಆರತಿ: ಜಾನಪದ ಸಂಪ್ರದಾಯಗಳು

● ಸರೋಜ ಇಟ್ಟಣ್ಣವರ

ಆರತಿಯು ಜಾನಪದ ಜೀವನದಲ್ಲಿ ಮಹತ್ವದ ಸ್ಥಾನ ಪಡೆದಿದೆ. ಪ್ರತಿಯೊಂದು ಮಂಗಲ ಕಾರ್ಯಗಳಲ್ಲಿಯೂ ಆರತಿ ಇದ್ದೇ ಇರುತ್ತದೆ. ಸಾರ್ವಜನಿಕ ಕೆಲಸವೇ ಇರಲಿ, ವೈಯಕ್ತಿಕ ಕೆಲಸವೇ ಇರಲಿ ನಮ್ಮವರು ಆರತಿಗೊಂದು ವಿಶೇಷ ಸ್ಥಾನವನ್ನಿತ್ತಿದ್ದಾರೆ.[೧] ಆರತಿಯು ಜನಪದರ ನಂಬಿಕೆ ಮತ್ತು ಸಂಪ್ರದಾಯಗಳನ್ನು ಒಳಗೊಂಡಿದೆ. ಮನುಷ್ಯನ ಬಾಳಿನ ಕತ್ತಲೆಯನ್ನು ಹೊಡೆದೋಡಿಸಿ, ಬೆಳಕನ್ನು ತುಂಬಲಿ ಎಂಬುದು ಆರತಿಯ ತಾತ್ಪರ್ಯ; ಇದು ಶುಭದ ಸಂಕೇತ.

ಆರತಿ ಸಂಪ್ರದಾಯದ ಪ್ರಾಚೀನತೆಯನ್ನು ಹೇಳುವುದು ಕಷ್ಟದ ಕೆಲಸ. ಜನಪದರ ಯಾವುದೇ ನಂಬಿಕೆ ಮತ್ತು ಸಂಪ್ರದಾಯಗಳು ಹೀಗೇ ಪ್ರಾರಂಭವಾದವು ಎಂದು ನಿಖರವಾಗಿ ಹೇಳುವುದು ಅಸಾಧ್ಯ. ಕಾಲದಿಂದ ಕಾಲಕ್ಕೆ, ಪ್ರದೇಶದಿಂದ ಪ್ರದೇಶಕ್ಕೆ, ರೂಢಿಗತ ನಂಬಿಕೆ ಮತ್ತು ಸಂಪ್ರದಾಯಗಳಲ್ಲಿ ಸಾಕಷ್ಟು ವೈವಿಧ್ಯತೆಯನ್ನು ನಾವು ಗುರುತಿಸಬಹುದು.

ಮಾನವ ತೀರ ಅನಾಗರಿಕ ಸ್ಥಿತಿಯಲ್ಲಿದ್ದಾಗ ಲೋಹಗಳ ಬಳಕೆಯ ಅರಿವು ಇಲ್ಲದಾಗ ಮಣ್ಣಿನ ಆರತಿ ತಟ್ಟೆಯನ್ನೇ ಉಪಯೋಗಿಸುತ್ತಿದ್ದಿರಬೇಕು. ಇದರ ಪಳಿಯುಳಿಕೆಯನ್ನು ಗುಳ್ಳವ್ವನ ಆರತಿಯಲ್ಲಿ ಕಾಣಬಹುದು. ಇಂದಿಗೂ ಗುಳ್ಳವ್ವನನ್ನು ಕೂಡಿಸಿದಾಗ ಅವಳಿಗೆ ಆರತಿ ಬೆಳಗಬೇಕಾದರೆ ಜೇಡಿಮಣ್ಣಿನಲ್ಲಿಯೇ ಒಂದು ತಟ್ಟೆಯಾಕಾರ ಮಾಡಿ ಅದರಲ್ಲಿಯೇ ದೀಪ ಹಚ್ಚಿ ಆರತಿ ಬೆಳಗುವುದು ಒಂದು ಸಂಪ್ರದಾಯ. ಮಣ್ಣಾಮಕ್ಕಳು ಮಾಡುವ ಈ ಪೂಜೆ ಮಣ್ಣಿನ ಆರತಿ ತಟ್ಟೆಯಿಂದಲೇ ಪೂರ್ಣಗೊಳ್ಳುವುದು ಇಂದಿಗೂ ರೂಢಿಯಲ್ಲಿದೆ. ಮೊದಲು ಕುಂಬಾರರು ತಾವು ಕೊಡುವ ಗುಳ್ಳವ್ವ ಬಸವಣ್ಣಾರ ಜೊತೆಗೆ ಜೇಡಿಮಣ್ಣಿನ ಆರತಿ ತಟ್ಟೆಯನ್ನು ಮಾಡಿಕೊಡುತ್ತಿದ್ದರು. ಆದರೆ ಈಗ ಅವರು ತಟ್ಟೆ ಮಾಡುವುದನ್ನು ನಿಲ್ಲಿಸಿದ್ದಾರೆ.

ಮಾನವ ನಾಗರಿಕತೆಯತ್ತ ವಾಲತೊಡಗಿದಂತೆ ಅನೇಕ ಬದಲಾವಣೆಗಳಾಗಿವೆ. ಈಗ ವಿವಿಧ ಆಕಾರದ ನೂರೆಂಟು ನಮೂನೆಯ ಆರತಿ ತಟ್ಟೆಗಳನ್ನು ಕಾಣುತ್ತೇವೆ. ಈಗ ಹಿತ್ತಾಳೆ, ಸ್ಟೀಲು. ಕಂಚು, ಬೆಳ್ಳಿ, ಹೀಗೆ ಅವರವರ ಅಂತಸ್ತಿಗೆ ತಕ್ಕಂಥ ನಾನಾ ವಿಧದ ಆರತಿ ತಟ್ಟೆಗಳು

೧. ಈ ಲೇಖನದಲ್ಲಿ ಬಿಜಾಪುರ, ಧಾರವಾಡ, ಬೆಳಗಾವಿ ಜಿಲ್ಲೆಗಳನ್ನು ಮಾತ್ರ ಅನುಲಕ್ಷಿಸಿ ಆರತಿಗೆ ಸಂಬಂಧಪಟ್ಟ ಜನಪದ ವಿಷಯಗಳನ್ನು ಕಲೆ ಹಾಕಿದೆ.

ನೋಡಲು ಸಿಗುತ್ತವೆ. ಒಂದು ಕಾಲಕ್ಕೆ ರಾಜ ಮಹಾರಾಜರು ಬಂಗಾರದ ಆರತಿ ತಟ್ಟೆಗಳನ್ನು ಉಪಯೋಗಿಸುತ್ತಿದ್ದಿರಬಹುದು. ಜನರ ಅಭಿರುಚಿಯಲ್ಲಿ ವೈವಿಧ್ಯತೆಯಿರುವಂತೆ ಆರತಿ ತಟ್ಟೆಗಳಲ್ಲಿಯೂ ವಿವಿಧತೆಯನ್ನು ಕಾಣುತ್ತೇವೆ. ಈಗ ಹೆಚ್ಚಾಗಿ ನಟ್ ಇರುವ ಸ್ಟೀಲಿನ ತಟ್ಟೆಗಳನ್ನೇ ಕಾಣುತ್ತೇವೆ.

ಸಾಮಾನ್ಯವಾಗಿ ಆರತಿ ತಟ್ಟೆಯಲ್ಲಿ ಎರಡು ದೀಪದ ಹಣತೆಗಳು, ಒಂದು ಕಳಸ ತಂಬಿಗೆ ಇರುತ್ತದೆ. ಈ ಕಳಸದ ತಂಬಿಗೆಯನ್ನು ಖಾಲಿ ಇಡುವುದಿಲ್ಲ. ಇದರ ಮೇಲೆ ಕುಡಿ ಇರುವ ಎರಡು ಎಲೆಗಳನ್ನಿಟ್ಟು, ನಡುವೆ ಒಂದು ಅಡಿಕೆ ಅಥವಾ ವಿಭೂತಿಯನ್ನಿಡುತ್ತಾರೆ. ಇನ್ನು ಕೆಲವರು ಮುತ್ತಿನ ತೆನೆಗಳನ್ನು ಇಡುತ್ತಾರೆ. ಆರತಿ ತಟ್ಟೆಯಲ್ಲಿ ಅರಿಷಿಣ, ಕುಂಕುಮದ ಭರಣಿ, ಬಟ್ಟಲಗಳಿರಬಹುದು; ಅಥವಾ ಚೀಟುಕಟ್ಟಿ ಹಾಗೆಯೇ ಇಟ್ಟಿರಬಹುದು.

ಆರತಿಯನ್ನು ಮನುಷ್ಯರಿಗೆ ಮಾಡುವಂತೆ ದೇವರಿಗೆ , ಪ್ರಾಣಿಗಳಿಗೆ ಮಾಡುವುದು ಸಾಮಾನ್ಯ. ಆದ್ದರಿಂದ ಈ ಸಂಪ್ರದಾಯದಲ್ಲಿ ಮಾನವ ಸಂಬಂಧೀ ಆರತಿ, ದೈವ ಸಂಬಂಧೀ ಆರತಿ, ಪ್ರಾಣಿ ಸಂಬಂಧೀ ಆರತಿ ಎಂದು ವಿಭಾಗ ಮಾಡಿಕೊಂಡು ವಿಶ್ಲೇಷಣೆ ಮಾಡಿಕೊಳ್ಳಬಹುದು.

I ಮಾನವ ಸಂಬಂಧಿ ಆರತಿ :

ಮಾನವ ಸಂಬಂಧಿ ಆರತಿಯಲ್ಲಿ ಆರತಿ ಮತ್ತು ನಿವಾಳಿ ಆರತಿಯೆಂದು ಎರಡು ಬಗೆಗಳುಂಟು.

ಮಗುವಿನ ಹುಟ್ಟಿನೊಂದಿಗೇ ಆರತಿ ಮಾಡುವ ಕ್ರಮ ಪ್ರಾರಂಭಗೊಳ್ಳುತ್ತದೆ. ಮಗು ಹುಟ್ಟಿದ ಮೇಲೆ ಶೆಟಿಗೆವ್ವನಿಗೆ ಮಾಡುವಾಗ ತಾಯಿ-ಮಗುವನ್ನು ಎರೆದು, ಅವರಿಗೆ ಕಾಡಿಗೆ ಹಚ್ಚಿ ಮಣೆ ಮೇಲೆ ತಾಯಿಯನ್ನೂ, ತಾಯಿಯ ತೊಡೆಯ ಮೇಲೆ ಮಗುವನ್ನೂ ಮಲಗಿಸಿ ತಾಯಿ-ಮಗು ಇಬ್ಬರಿಗೂ ಇಬ್ಬರು ಅಥವಾ ಐದು ಜನ ಮುತ್ತೈದೆಯರು ಆರತಿ ಮಾಡುತ್ತಾರೆ. ಮುಂದೆ ಹೆಸರಿಡುವಾಗಲೂ ತಾಯಿ-ಮಗು ಇಬ್ಬರಿಗೂ ಮುತ್ತೈದೆಯರು ಆರತಿ ಮಾಡುವುದುಂಟು.

ಹೆಣ್ಣು ಮಗಳು ಋತುಮತಿಯಾದಾಗಲೂ ಆರತಿ ಮಾಡುವ ಸಂಪ್ರದಾಯವಿದೆ. ಋತುಮತಿಯಾದವಳನ್ನು 'ಎಬ್ಬಿಸುವ ದಿನ' ಅವಳನ್ನು ಮಂಚ ಅಥವಾ ಮಣೆಯ ಮೇಲೆ ಕೂಡ್ರಿಸಿ ಕಣ್ಣಿಗೆ ಕಾಡಿಗೆ ಹಚ್ಚಿ ಮುತ್ತೈದೆಯರು ಆರತಿ ಬೆಳಗುತ್ತಾರೆ. ನಿಶ್ಚಯದ ಸಂದರ್ಭದಲ್ಲಿ ವಧು-ವರರಿಗೆ ಮತ್ತು ಅವರಿಬ್ಬರ ಹಿಂದೆ ಕುಳಿತ ತಂದೆ ತಾಯಿಗಳಿಗೂ ಆರತಿ ಮಾಡುವುದುಂಟು. ಮುಂದೆ ಬಷ್ಟಗಿ ಹಾಕುವಾಗ ಕನ್ಯೆಯೊಬ್ಬಳಿಗೆ ಹೊಸ ಸೀರೆ ಉಡಿಸಿ ಉಡಿ ತುಂಬಿ ಆರತಿ ಮಾಡುತ್ತಾರೆ.

ಮದುವೆಯಲ್ಲಿ ಸುರಗಿ ಸುತ್ತುವ ಸಂದರ್ಭದಲ್ಲಿ ವಧು-ವರರಿಗೂ, ಅವರ ಹಿಂದೆ ಕುಳಿತ ತಂದೆ ತಾಯಿಗಳಿಗೂ ಮುತ್ತೈದೆಯರು ಆರತಿ ಬೆಳಗುತ್ತಾರೆ. ಅಕ್ಷತಾರೋಪಣೆ ಮುಗಿದ

ಮೇಲೆ ಆರತಿ ಬೆಳಗಲಾಗುತ್ತದೆ. ಈ ಸಂದರ್ಭದಲ್ಲಿ ಗಂಡಸರೂ ಆರತಿ ಮಾಡುತ್ತಾರೆ. ಹೀಗೆ ಮದುವೆಯ ಸಂದರ್ಭದಲ್ಲಿ ಪ್ರಾರಂಭದಿಂದ ಹಿಡಿದುಕೊಂಡು ಕೊನೆಯವರೆಗೂ ಆರತಿ ಬಹು ಮುಖ್ಯವಾದ ಪಾತ್ರವಾದುತ್ತದೆ.

ಪ್ರಸ್ತುತ ಸಂದರ್ಭದಲ್ಲಿ ವರನಿಗೆ ಹಾರ ಹಾಕಿ ಕನ್ಯೆಗೆ ದಂಡೆ ಕಟ್ಟಿ ಅವರಿಬ್ಬರನ್ನೂ ಮಂಚದ ಮೇಲೆ ಕೂಡ್ರಿಸಿ ಐದು ಜನ ಮುತ್ತೈದೆಯರು ಆರತಿ ಬೆಳಗುವ ಸಂಪ್ರದಾಯವುಂಟು.

ಕಳ್ಳ ಕುಬಸ ಮಾಡುವಾಗ ಹಸಿರು ಬಳೆ ತೊಡಿಸಿ ಎಂಬಲ ಗಡಿಗೆಯ ಪೂಜೆ ಮಾಡಿ ಕೈಯಲ್ಲಿ ಒಂದು ಹಸಿರು ಕಣ ಕೊಟ್ಟು ತಲೆಗೆ ಹೂ ಮುಡಿಸಿ, ಅರಿಷಿಣ, ಕುಂಕುಮ ಕೊಟ್ಟು ಆರತಿ ಬೆಳಗುತ್ತಾರೆ. ಕೆಲವು ಸಲ ಬೇರೆಯವರ ಮನೆಗೆ ಕುಬಸಕ್ಕೆ ಹೋದಾಗಲೂ ಅವರೂ ಆರತಿ ಮಾಡುವುದುಂಟು. ದೊಡ್ಡ ಕುಬಸದ ಕಾಲಕ್ಕೆ ಗಂಡ ಹೆಂಡತಿ ಇಬ್ಬರನ್ನೂ ಮಂಚ ಅಥವಾ ಕುರ್ಚಿಗಳ ಮೇಲೆ ಕೂಡ್ರಿಸಿ, ತವರು ಮನೆಯವರು ಗಂಡನಿಗೆ ಬಾಸಿಂಗ ಹೆಂಡತಿಗೆ ದಂಡೆಕಟ್ಟಿ ಆರತಿ ಮಾಡಿ ತಾವು ತಂದಂತಹ ಆಹೇರಿಗಳನ್ನು ಮಾಡುತ್ತಾರೆ. ಕುಬಸದ ಆಹೇರಿಯನ್ನು ಗಂಡಸರಿಗೆ ಮಾಡುವಾಗ ಗಂಡಸರೇ ಆರತಿ ಮಾಡುವ ಪದ್ಧತಿಯುಂಟು.

ಮುತ್ತೈದೆಯರಿಗೆ ಮಾಡುವುದು:

ಶ್ರಾವಣ ತಿಂಗಳ ಕಡೇ ಶುಕ್ರವಾರ ಇಬ್ಬರು ಅಥವಾ ಐದು ಜನ ಮುತ್ತೈದೆಯರಿಗೆ ದಂಡೆ ಕಟ್ಟಿ, ಉಡಿ ತುಂಬಿ ಜಂಪರ ಕಣ ಕೊಟ್ಟು ಆರತಿ ಮಾಡುವ ಸಂಪ್ರದಾಯವುಂಟು. ಆರತಿ ಮಾಡಿದ ತಕ್ಷಣವೇ ಅವರನ್ನು ಹೊರಗೆ ಕಳಿಸುವುದಿಲ್ಲ. ಮುತ್ತೈದೆ ಎಂದರೆ ಮನೆ ಲಕ್ಷ್ಮಿ ಇದ್ದಂತೆ ಎಂಬ ನಂಬಿಕೆಯುಂಟು. ಆದ್ದರಿಂದ ಕೆಲವು ಜನ ಸಂಜೆಯ ದೀಪ ಹಚ್ಚಿದ ನಂತರ ಅವರನ್ನು ಹೊರಗೆ ಕಳಿಸುತ್ತಾರೆ.

ಹಿಂದೂಗಳ ವಿಶೇಷ ಹಬ್ಬಗಳಾದ ದೀಪಾವಳಿ ಹಾಗೂ ಯುಗಾದಿಗಳಲ್ಲಿ ಆರತಿ ಬೆಳಗುವ ಸಂಪ್ರದಾಯವುಂಟು. ಈ ಸಂದರ್ಭದಲ್ಲಿ ಆರತಿಯನ್ನು ಮನೆಯ ಹೆಣ್ಣು ಮಕ್ಕಳೇ ಹೆಚ್ಚಾಗಿ ಬೆಳಗುತ್ತಾರೆ. ಆಕಸ್ಮಾತ 'ಹೆಣ್ಣುಮಕ್ಕಳು' (ಅಕ್ಕ-ತಂಗಿಯರು) ಇರದಿದ್ದರೆ ತಾಯಿಯೋ ಹೆಂಡತಿಯೋ ಆರತಿ ಮಾಡಿ ಮುಗಿಸುವುದುಂಟು.

ನೂಲ ಹುಣ್ಣಿಮೆಯ ಸಂದರ್ಭದಲ್ಲಿಯೂ ರಾಖಿ ಕಟ್ಟಿದ ಮೇಲೆ ಆರತಿ ಬೆಳಗುವ ಸಂಪ್ರದಾಯವುಂಟು.

ಹೆಣಕ್ಕೂ ಆರತಿ ಮಾಡುತ್ತಾರೆ. ಹೆಂಡತಿ ಜೀವಂತವಿದ್ದು ಗಂಡ ಸತ್ತರೆ ತವರು ಮನೆಯವರು ಹೆಂಡತಿಗೆ ತಂದ ಹೊಸ ಸೀರೆ ಉಡಿಸಿ ಅವಳನ್ನು ಹೆಣದ ಮಗ್ಗಲು ಕೂಡ್ರಿಸಿ ಇಬ್ಬರಿಗೂ ಕೂಡಿ ಕೊನೆ ಆರತಿ ಎನ್ನುವಂತೆ ಆರತಿ ಮಾಡುತ್ತಾರೆ. ಗಂಡ ಇದ್ದು ಹೆಂಡತಿ ಸತ್ತರೆ ಅಂದರೆ ಮುತ್ತೈದೆ ಸತ್ತರೆ ಮದುವೆಯ ಕಾಲದ ಎಲ್ಲಾ ಸಂಪ್ರದಾಯಗಳನ್ನೂ ಅವಳಿಗೆ-ಹೆಣಕ್ಕೆ ತಿರುಗಿ ಮಾಡುತ್ತಾರೆ. ಅವಳನ್ನು ಎರೆದು ಹೊಸ ಸೀರೆ ಉಡಿಸಿ ಅರಿಷಿಣ, ಕುಂಕುಮ

ಹಚ್ಚಿ ಹಸಿರು ಬಳೆಗಳನ್ನು ಹಾಕಿ, ದಂಡೆ ಕಟ್ಟಿ ಹೊಸ ಕಾಲುಂಗುರ ,ಹೊಸ ತಾಳಿಗಳನ್ನು ಮಾಡಿಸಿ ಮುತ್ತೈದೆಯರು ಆರತಿ ಬೆಳಗುತ್ತಾರೆ. ಆಕಸ್ಮಾತ ವಿಧುರ ಸತ್ತರೆ ಅವನಿಗೆ ಆರತಿ ಮಾಡುವಂತಿಲ್ಲ.

ನಿವಾಳಿ ಆರತಿ ಎಂಬುದೊಂದು ಜಾನಪದ ಬದುಕಿನಲ್ಲಿ ರೂಢಿಯಲ್ಲಿದೆ. ದೃಷ್ಟಿ ತೆಗೆಯುವುದು ಈ ನಿವಾಳಿ ಆರತಿಯ ಮುಖ್ಯ ಉದ್ದೇಶ. ತಮ್ಮ ತಮ್ಮ ಅನುಕೂಲಕ್ಕೆ ತಕ್ಕಂತೆ ಅಕ್ಕಿಯ ಅನ್ನವನ್ನೋ, ಜೋಳ ಅಥವಾ ಗೋದಿ ಹಿಟ್ಟನ್ನೋ ಕಲಿಸಿ ನಿವಾಳಿ ಆರತಿಯನ್ನು ತಯಾರಿಸುವುದುಂಟು. ಅನ್ನವನ್ನೋ ಅಥವಾ ಹಿಟ್ಟನ್ನೋ ಕಿವುಚಿ ಒಂದು ಚಿಕ್ಕ ಬಟ್ಟಲಾಕಾರ ಮಾಡಿ ಅದರಲ್ಲಿ ಕಡ್ಡಿ ಬತ್ತಿಯಿಟ್ಟು (ಕಡ್ಡಿ ಬತ್ತಿಎಂದರೆ ಕೆಳಗೆ ದುಂಡಗೆ ಇದ್ದು ಮೇಲೆ ಉದ್ದವಾಗಿ ಅರಳೆಯಿಂದ ಮಾಡಿದ ದೀಪದ ವ್ಯವಸ್ಥೆ) ಎಣ್ಣೆ ಹಾಕಿ ದೀಪ ಹಚ್ಚಲಾಗುತ್ತದೆ. ಅದೇ ಅನ್ನ ಅಥವಾ ಹಿಟ್ಟನ್ನು ಕಿವುಚಿ ಸಣ್ಣ ಚಿಣಿಗಳಂತೆ ಎರಡು ಆಕಾರ ಮಾಡಿ ದೀಪದ ಎರಡೂ ಬದಿಗಳಲ್ಲಿಡಲಾಗುತ್ತದೆ. ಉದ್ದೇಶಿತ ವ್ಯಕ್ತಿಯೆದುರು ಈ ಆರತಿ ಮಾಡುವವರು ಕೈಯಲ್ಲಿ ನಿವಾಳಿ ಆರತಿಯನ್ನು ಹಿಡಿದು ಅದನ್ನು 'ಇಳಿಸಿ` ಎಡಬದಿಗೆ ಒಂದು ಬಲಬದಿಗೆ ಒಂದು ಅನ್ನದ ಅಥವಾ ಹಿಟ್ಟಿನ ವಸ್ತುಗಳನ್ನು ಇಡಲಾಗುತ್ತದೆ.

ಹಲವಾರು ಸಂದರ್ಭಗಳಲ್ಲಿ ಈ ನಿವಾಳಿ ಆರತಿ ಬಳಕೆಯಲ್ಲುಂಟು. ಮದುವೆಯ ಸಂದರ್ಭದಲ್ಲಿ ವಧು-ವರರಿಗೆ ಅರಿಷಿಣ ಹಚ್ಚಿ ಮನೆಯೊಳಗೆ ಕರೆತರುವಾಗ , ಮದುಮಕ್ಕಳನ್ನು ಹೊಸದಾಗಿ ಕರೆ ತಂದಾಗ, ನಿವಾಳಿ ಆರತಿಯನ್ನು ಮಾಡಲಾಗುತ್ತದೆ. ದೀಪಾವಳಿ ಮತ್ತು ಯುಗಾದಿ ಹಬ್ಬಗಳಂದು ಮಾಡುವ ಸಾಮಾನ್ಯ ಆರತಿಯಾದ ಮೇಲೆ ಈ ನಿವಾಳಿ ಆರತಿಯನ್ನೂ ಕೆಲವರು ಜರುಗಿಸುವುದುಂಟು. ದಸರೆಯಲ್ಲಿ ಬನ್ನಿ ಮುಡಿದು ಬಂದ ಕೂಡಲೆ ಗಂಡಸರಿಗೆ ನಿವಾಳಿ ಮಾಡುವ ಪದ್ಧತಿ ಕೆಲವೆಡೆ ಇದೆ. ಹಿರಿಮಗನ ಲಗ್ನ ಸಂದರ್ಭದಲ್ಲಿ ದೇವರನ್ನು ಕರೆದುಕೊಳ್ಳುವಾಗ ನಿವಾಳಿ ಆರತಿಯಾದ ಮೇಲೆ ಅಭಿಷೇಕ ಮಾಡಿ ಆರತಿ ಮಾಡಲಾಗುತ್ತದೆ.

ಮೇಲೆ ಹೇಳಿದಂತೆ ನಿವಾಳಿಯ ಮುಖ್ಯ ಉದ್ದೇಶ ದೃಷ್ಟಿ ತೆಗೆಯುವುದು. ಜನ ನೆಟ್ಟ ದೃಷ್ಟಿಯಿಂದ ಸಂದರ್ಭದ ಕೇಂದ್ರ ವ್ಯಕ್ತಿಗಳನ್ನು ನೋಡಿ 'ಕಣ್ಣು ಹತ್ತಿರುತ್ತವೆ.` ಆ ಕಣ್ಣು ಸುಟ್ಟು ಹೋಗಲಿ ಅಂದರೆ ತಾಕಿದ ದೃಷ್ಟಿ ಸುಟ್ಟು ಹೋಗಲಿ ಎಂಬುದು ಇದರ ಹಿಂದಿರುವ ನಂಬಿಕೆ.

II ದೈವ ಸಂಬಂಧಿ ಆರತಿ:

ದೇವರಿಗೆ ಮಾಡುವ ಆರತಿ ದೈವ ಸಂಬಂಧಿ ಆರತಿಯೆನಿಸುತ್ತದೆ. ಜನರು ದೇವರಿಗೆ ಬೇಡಿಕೊಂಡಾಗ , ದೇವರಿಗೆ ಮಾಡುವಾಗ, ಹುಟಗಿ ಉಟ್ಟಾಗ, ದೀಡ ನಮಸ್ಕಾರ ಹಾಕುವಾಗ ಮುಂತಾದ ಸಂದರ್ಭಗಳಲ್ಲಿ ದೇವರಿಗೆ ಆರತಿ ಮಾಡಲಾಗುತ್ತದೆ. ದೈವ ಸಂಬಂಧೀ ಆರತಿಯಲ್ಲಿ ನಾನಾ ಬಗೆಗಳಿವೆ.

೧. ಮಣ್ಣಿನ ಆರತಿ:

ಹಿಂದೆ ಹೇಳಿದಂತೆ ಗುಳ್ಳವ್ವನಿಗೆ ಆರತಿ ಮಾಡುವ ಕಾಲಕ್ಕೆ ಮಣ್ಣಿನ ಆರತಿಯನ್ನು ಬಳಸುವುದು ಇಂದಿಗೂ ರೂಢಿಯಲ್ಲಿದೆ. ಕೆಲವೆಡೆ ಹುಡುಗಿಯರು ತಮ್ಮ ಓಣಿಯ ಮನೆ ಮನೆಗೆ ಹೋಗಿ ಗುಳ್ಳವ್ವನಿಗೆ ಆರತಿ ಮಾಡಿ ಬರುವುದುಂಟು. ಆರತಿ ಮಾಡುವ ಸಂದರ್ಭದಲ್ಲಿ

ಅಕ್ಕ ಗುಳ್ಳವ್ವ ಇಕ್ಕ ಗುಳ್ಳವ್ವ
ಚಂದ್ರ ಚೌಕಾಳಿ
ಮಲ್ಲಿಗಿ ಹೂಕಾಳಿ
ಹೂವs ಹೂವs
ದಾಳಂಬರಿ ಹೂವ[೧]

ಇದು ಐದಾರು ಸಲ ಪುನರಾವರ್ತನೆಗೊಳ್ಳುತ್ತದೆ. ಪುನರಾವರ್ತನೆಗೊಳ್ಳುತ್ತ ಹೋದಂತೆ ಕೊನೆಯ ಸಾಲಿನಲ್ಲಿ ಬರುವ ಹೂ ಮಾತ್ರ ಬದಲಾಗುತ್ತದೆ. 'ಮಲ್ಲಿಗಿ ಹೂವ' 'ಸ್ಯಾವಂತಿಗಿ ಹೂವ' ಮುಂತಾಗಿ .

೨. ಧೂಪದಾರತಿ:

ಎಲ್ಲ ದೇವರ ಗುಡಿಗಳಲ್ಲಿ ಪೂಜೆಯಾದ ಮೇಲೆ ಧೂಪದಾರತಿ ಮಾಡುವ ಪದ್ಧತಿಯುಂಟು. ಬೇಡಿಕೊಂಡವರಿದ್ದರೆ ಭಕ್ತರು ಧೂಪ ಒಯ್ದು ಪೂಜಾರಿಗಳ ಕೈಯಲ್ಲಿ ಕೊಡುವದಿದೆ. ಪೂಜಾರಿಗಳೇ ಈ ಆರತಿಯನ್ನು ಮಾಡುವರು. ಧೂಪದಾರತಿಯನ್ನು ದೇವಾಲಯದ ಸಂಕೀರ್ಣದಲ್ಲಿರುವ ಇತರ ದೇವರುಗಳಿಗೂ ಮಾಡುವರು. ದೇವಾಲಯದ ಸಂಕೀರ್ಣದಲ್ಲಿರುವ ಇತರ ದೇವರುಗಳಿಗೆ ಆರತಿ ಮಾಡುವಾಗ ಜನರು ಅಡ್ಡ ಬೀಳುವುದು ಪೂಜಾರಿ ಅವರನ್ನು ದಾಟುವುದು ರೂಢಿಯಲ್ಲಿದೆ.

೩. ಕರ್ಪೂರದಾರತಿ:

ಕೆಲವು ದೇವಾಲಯಗಳಲ್ಲಿ ಕರ್ಪೂರವನ್ನು ಬೆಳಗಿಸಿ ದೇವರಿಗೆ ಆರತಿಯನ್ನು ಮಾಡುತ್ತಾರೆ.

೪. ತುಪ್ಪದ ಆರತಿ:

ಬೇಡಿಕೊಂಡ ಭಕ್ತರು ಕೆಲವರು ಎಣ್ಣೆಯ ಬದಲಾಗಿ ತುಪ್ಪವನ್ನು ಕೊಟ್ಟು ಆರತಿಯನ್ನು ಬೆಳಗಿಸುವುದುಂಟು.

---

೧. ಗೋಕಾಕ ತಾಲೂಕಿನ ಯಾದವಾಡದಲ್ಲಿ ಪ್ರಚಾರದಲ್ಲಿರುವ ಹಾಡು.

೫. ಮಂಗಳಾರತಿ:

ಸಾಮಾನ್ಯವಾಗಿ ಎಲ್ಲ ದೇವರ ಗುಡಿಗಳಲ್ಲಿಯೂ ದಿನಾಲೂ ಮಂಗಳಾರತಿಯನ್ನು ಮಾಡಲಾಗುತ್ತದೆ. ಆಯಾ ದೇವರ ವಾರ, ಶ್ರಾವಣ ಮಾಸ, ಜಾತ್ರೆ ಮುಂತಾದ ಸಂದರ್ಭಗಳಲ್ಲಿ ವಿಶೇಷ ಮಂಗಳಾರತಿಗಳಾಗುತ್ತವೆ. ಅನೇಕ ಭಕ್ತರು ಮಂಗಳಾರತಿ ಮಾಡಿಸುವುದಾಗಿಯೂ ಹರಕೆ ಹೊರುತ್ತಾರೆ. ಭಕ್ತರು ದೇವರಿಗೆ ಅಭಿಷೇಕ ಮಾಡಿಸುವಾಗ ಮಂಗಳಾರತಿಯಾಗುವುದು ಸಾಮಾನ್ಯ. ಮಂಗಳಾರತಿಯ ಸಂದರ್ಭದಲ್ಲಿ ದೇವಾಲಯಗಳಲ್ಲಿ ನಗಾರಿ, ಜಾಗಟೆ ಮುಂತಾದ ಮಂಗಳ ವಾದ್ಯಗಳನ್ನು ಬಾರಿಸುತ್ತಾರೆ. ಹಾಡುತ್ತಲೇ ಮಂಗಳಾರತಿ ಮಾಡುವುದೂ ಇದೆ.

೬. ಸಕ್ಕರೆ ಆರತಿ:

ಸೀಗಿ ಹುಣ್ಣಿವೆ, ಗೌರಿ ಹುಣ್ಣಿವೆಗಳಲ್ಲಿ ಸಕ್ಕರೆಯಿಂದ ಮಾಡಿದ ಆರತಿಯನ್ನು ಬೆಳಗುವದು ರೂಢಿಯಲ್ಲಿದೆ. ಸಕ್ಕರೆಯಿಂದ ಮಾಡಿದ ಬೇರೆ ಬೇರೆ ಆಕೃತಿಯ ಸಾಮಾನುಗಳನ್ನು ಒಂದು ತಾಟಿನಲ್ಲಿ ಹಾಕಿಕೊಂಡು ದೀಪಗಳನ್ನು ಹಚ್ಚಿಕೊಂಡು ಅರಿಷಿಣ, ಕುಂಕುಮಗಳನ್ನು ಇಟ್ಟುಕೊಂಡು ಬೇರೆ ಮನೆಗಳಿಗೆ ಹೋಗಿ ಆರತಿ ಮಾಡಿ ಬರುವುದು ಒಂದು ರೂಢಿ. ಮನೆಗೆ ಬಂದ ನಂತರ ಆಕಾಶದ ಕಡೆಗೆ ಮುಖ ಮಾಡಿ ಚಂದ್ರನಿಗೂ, ಮನೆಯ ಹೊಸ್ತಿಲಿಗೂ ಆರತಿ ಮಾಡಿ ಒಳಗೆ ಆರತಿ ಒಯ್ಯುವರು.

೭. ಸಾಮಾನ್ಯ ಆರತಿ:

ಮನೆಯಲ್ಲಿ ಗಣಪತಿ ಹಾಗೂ ಲಕ್ಷ್ಮೀಪೂಜೆಯ ಕಾಲಕ್ಕೆ ಸಾಮಾನ್ಯ ಆರತಿ ಬಳಕೆಯಲ್ಲಿದೆ.

III ಪ್ರಾಣಿ ಸಂಬಂಧಿ ಆರತಿ:

ಪ್ರಾಣಿಗಳಿಗೆ ಸಂಬಂಧ ಪಡುವುದು ನಿವಾಳಿ ಆರತಿ, ಮಾತ್ರ. ಅನೇಕ ಪ್ರಸಂಗಗಳಲ್ಲಿ ಮನುಷ್ಯನಿಗೆ ನಿವಾಳಿ ಆರತಿಯೆತ್ತುವಂತೆ ಎತ್ತುಗಳಿಗೂ ಕೂಡ ಈ ಬಗೆಯ ಆರತಿಯನ್ನು ಎತ್ತುವುದುಂಟು. ಗಾಡಿಶರತ್ತು, ಕಲ್ಲು ಜಗ್ಗುವ ಶರ್ತು ಮುಂತಾದ ಸ್ಪರ್ಧಾತ್ಮಕ ಪ್ರಸಂಗಗಳಲ್ಲಿ ಎತ್ತುಗಳು ಗೆದ್ದು ಬಂದಾಗ ಎತ್ತುಗಳಿಗೆ ಆರತಿ ಮಾಡಲಾಗುತ್ತದೆ. ಇದಲ್ಲದೇ ಕಾರಹುಣ್ಣಿಮೆಯ ಕರಿ ಹರಿದು ಬಂದ ಎತ್ತುಗಳಿಗೆ, ಹೊಸದಾಗಿ ತಂದ ಎತ್ತುಗಳಿಗೆ ಆರತಿ ಎತ್ತಲಾಗುವುದು. ಕಾರಹುಣ್ಣಿಮೆಯಂದು ಕೆಲವರು ಎತ್ತುಗಳನ್ನು ಮೆರೆಸಿ ಮನೆಗೆ ತಂದಾಗ ನಿವಾಳಿ ಆರತಿ ಮಾಡುವುದುಂಟು. ಮನುಷ್ಯ ಸಂಬಂಧೀ ನಿವಾಳಿ ಆರತಿ ಪದ್ಧತಿಯನ್ನೇ ಇಲ್ಲಿಯೂ ಕೂಡ ಅನುಸರಿಸಲಾಗುತ್ತದೆ. ದನಗಳಿಗೆ ದೃಷ್ಟಿಯಾಗಬಾರದೆಂಬುದೇ ಇದರ ಮುಖ್ಯ ಉದ್ದೇಶ.

IV ಸಾಮೂಹಿಕ ಆರತಿ:

ಕೆಲವು ಸಂದರ್ಭಗಳಲ್ಲಿ ಊರವರೆಲ್ಲ , ಇನ್ನು ಕೆಲವು ಸಂದರ್ಭಗಳಲ್ಲಿ ಆಯಾ ಸಮಾಜ(ಜಾತಿ) ದವರೆಲ್ಲ ಸಾಮೂಹಿಕವಾಗಿ ಪಾಲ್ಗೊಳ್ಳುತ್ತಾರೆ. ಇದು ಮನೆಗೊಂದು ಆರತಿಯೆಂದೇ ಪ್ರಸಿದ್ಧಿ.

೧. ಹಿಂದಿನ ಕಾಲದಲ್ಲಿ ರಾಜರು ಯುದ್ಧದಲ್ಲಿ ಗೆದ್ದು ಬಂದಾಗ ಊರ ಸುಮಂಗಲೆಯರೆಲ್ಲರೂ ಆರತಿ ತೆಗೆದುಕೊಂಡು ಹೋಗಿ ತಮ್ಮ ರಾಜರನ್ನು ಬರಮಾಡಿಕೊಳ್ಳುತ್ತಿದ್ದರು.
೨. ಪುರವಂತರು ಊರೊಳಗೆ ಬಂದಾಗ ಸುಮಂಗಲೆಯರನೇಕ ಆರತಿ ತರುತ್ತಾರೆ.
೩. ದೇವರ ಪಲ್ಲಕ್ಕಿಗಳು ಊರಲ್ಲಿ ಅಡ್ಡಾಡುತ್ತಿರುವಾಗ ಪಲ್ಲಕ್ಕಿ ಹಿಂದೆ ಆರತಿ ಹಿಡಿದ ಸುಮಂಗಲೆಯರಿರುತ್ತಾರೆ.
೪. ಗೌರಿ ಹುಣ್ಣಿವೆ, ಶೀಗಿ ಹುಣ್ಣಿವೆಗಳಲ್ಲಿ ಆಯಾ ಓಣಿಯ ಹೆಣ್ಣುಮಕ್ಕಳು ಆರತಿಗಳನ್ನು ದೇವಿಯನ್ನು ಕೂಡ್ರಿಸಿದಲ್ಲಿಗೆ ಒಯ್ದು ಬೆಳಗಿ ಬರುತ್ತಾರೆ.

ವಿಧಿಗಳು:

ಎಲ್ಲ ಸಂಪ್ರದಾಯಗಳ ಹಿಂದೆ ಕೆಲವು ನಿಯಮಗಳಿರುವಂತೆ ಆರತಿ ಸಂಬಂಧದಲ್ಲಿಯೂ ಕೆಲವು ವಿಧಿಗಳುಂಟು.

೧. ಮುತ್ತೈದೆಯೇ ಆರತಿ ಮಾಡಬೇಕು, ಬಾಲಮುತ್ತೈದೆಯರೂ ಮಾಡಬಹುದು.
೨. ಆರತಿಯನ್ನು ಬರಿ ನೆಲದ ಮೇಲೆ ಇಡುವಂತಿಲ್ಲ. ಅದ್ದುಣಗಿ, ಮಣೆ, ಕಂಬಳಿ, ಜಮಖಾನೆ ಇವುಗಳ ಮೇಲೆ ಆರತಿಯನ್ನು ಇಡಬೇಕು.
೩. ಆರತಿಯನ್ನು ಮಾಡುವವರು ತಲೆಯ ಮೇಲೆ ಏನನ್ನಾದರೂ ಹಾಕಿಕೊಳ್ಳಬೇಕು. (ಬಕ್ಕನೆತ್ತಿಯಲ್ಲಿರಬಾರದು.)
೪. ದೇವರಿಗೆ ಮಂಗಳಾರತಿ ಮಾಡುವಾಗ ಎಲ್ಲರೂ ಎದ್ದು ನಿಲ್ಲಬೇಕು.
೫. ಆರತಿ ಮಾಡಿಸಿಕೊಳ್ಳುವವರನ್ನು ಮಣೆ, ಕಂಬಳಿ ಅಥವಾ ಜಮಖಾನೆಯ ಮೇಲೆ ಕೂಡ್ರಿಸಬೇಕು.

ನಿಷೇಧಗಳು:

ಈ ಸಂಬಂಧದಲ್ಲಿ ಕೆಲವು ನಿಷೇಧಗಳೂ ಉಂಟು.

೧. ವಿಧವೆ ಆರತಿ ಮಾಡಬಾರದು.
೨ ಉಡಿಕೆಯಾದವರು ಆರತಿ ಮಾಡಬಾರದು.
೩. ಅಂಗಹೀನರಾದವರು-ಬೆರಳು ಕತ್ತರಿಸಿದವರು, ಮೂಗು ಹರಿದವರು, ಕಿವಿ ಹರಿದವರು,ಹಲ್ಲು ಮುಕ್ಕಾದವರು ಆರತಿ ಮಾಡುವಂತಿಲ್ಲ.
೪. ಕಣ್ಣಲ್ಲಿ ಹೂ ಬಿದ್ದವರು ಆರತಿ ಮಾಡಬಾರದು.
೫. ಬಿಳುಪು ಹತ್ತಿದವರು ಆರತಿ ಮಾಡಬಾರದು.

ನಂಬಿಕೆಗಳು:

ಆರತಿ ಶಾಸ್ತ್ರದಲ್ಲಿ ಕೆಲವೊಂದು ನಂಬಿಕೆಗಳು ರೂಢಿಯಲ್ಲಿವೆ.

೧. ಆರತಿ ಮಾಡುವಾಗ ಸೆರಗು ಸುಡಬಾರದು. ಸೆರಗಿಗೆ ಬೆಂಕಿ ತಗುಲಿದರೆ ಅವಳ ಪತಿಗೆ ಏನಾದರೂ ಆಗುವುದೆಂಬ ಸಂಶಯ.

೨. ಮದುವೆಯಲ್ಲಿ ಆರತಿ ಮಾಡುವಾಗ ಬಾಸಿಂಗ ಸುಡಬಾರದು.

೩. ಮುಟ್ಟಾದವರು ಆರತಿ ಮಾಡಬಾರದು.

೪. ಹೊಸ ಅರಿವೆಗೆ ಆರತಿ ತಗುಲಬಾರದು.

೫. ಕಳಸ ಬೀಳಬಾರದು, ಅದು ಆರತಿ ಮಾಡುವವರಿಗೋ ಆರತಿ ಮಾಡಿಸಿಕೊಳ್ಳುವವರಿಗೋ ಅಶುಭವಾಗುತ್ತದೆಂದು ನಂಬಿಕೆ.

೬. ಕಳಸದಲ್ಲಿಯ ತೆನೆ ಬೀಳಬಾರದು.

೭. ಆರತಿಯ ದೀಪ ಆರಬಾರದು.

೮. ಕೈಯಿಂದ ಆರತಿ ಜ್ಯಾರಿ ಬೀಳಬಾರದು.

ರೂಢಿಗಳು:

ಪರಂಪರಾಗತ ನಂಬಿಕೆಗಳಿರುವಂತೆಯೇ ಕೆಲವು ರೂಢಿಗಳು ಆರತಿ ಬೆಳಗುವ ಸಂಪ್ರದಾಯದಲ್ಲಿವೆ.

೧. ಆರತಿ ಮಾಡುವವರ ಸೆರಗನ್ನು ಹಿಂದಿದ್ದವರು ಹಿಡಿಯುವದು.

೨. ಆರತಿ ಮಾಡಿದ ಮೇಲೆ ಗಂಡನ ಹೆಸರನ್ನು ಹೇಳಿ ಆರತಿಯನ್ನು ಇನ್ನೊಬ್ಬರ ಕೈಗೆ ಕೊಡುವುದು.

೩. ಮನೆಯಲ್ಲಿಯ ಯಾವುದೇ ಶುಭಕಾರ್ಯಗಳಲ್ಲಿ ಆ ಮನೆಯ 'ಹೆಣ್ಣು ಮಕ್ಕಳೇ' ಆರತಿ ಹಿಡಿಯುವರು. ಹಳ್ಳಿ ಭಾಷೆಯಲ್ಲಿ ಇದು 'ಬಾಜ' ಎನಿಸಿಕೊಳ್ಳುತ್ತದೆ.

ಸಾಹಿತ್ಯ:

ಆರತಿಗೆ ಸಂಬಂಧಪಟ್ಟಂತೆ ನಮ್ಮಲ್ಲಿ ನಾನಾ ಬಗೆಯಾದ ಸಾಹಿತ್ಯವಿದೆ. ಬೇರೆ ಬೇರೆ ದೇವರುಗಳಿಗೆ ಸಂಬಂಧಪಟ್ಟಂತೆ ನೂರಾರು ಮಂಗಳಾರತಿ ಪದಗಳು ನಮ್ಮಲ್ಲಿ ಉಂಟು. ಸಾಮಾನ್ಯವಾಗಿ ಇವುಗಳ ಭಾಷೆ ಶಿಷ್ಟ ಮತ್ತು ಆಡುನುಡಿಯ ಮಧ್ಯದಲ್ಲಿರುತ್ತವೆ ಉದಾಹರಣೆಗೆ ಕೆಳಗಿನ ಮಂಗಳಾರತಿ ಪದವನ್ನು ನೋಡಬಹುದು.

ಮಂಗಳಾಂಗಿಯರು ಮಂಗಳಾರುತಿ ಎತ್ತಿರಿ ಶಂಕರಿಗಿ I
ಅಂಗದೊಳ ಮಾಲಿಂಗವ ಧರಿಸಿದ ಮಂಗಲ ಮಹಿಮರಿಗಿ II

ಮೂರು ಲೋಕವ ಪಾವನ ಮಾಡುವ ಮುರಹರಿ ಪ್ರಿಯನಿಗಿ
ಮೂರು ಲೋಕವನ್ನಾಳುವಂತ ಒಡೆಯ ಮುಕ್ತನಿಗಿ
ಹೆಮ್ಮೆಯಿಂದಲೆ ಮೆರೆಯುವ ಬ್ರಹ್ಮನ ಸಿರವ ತಗಿದವನಿಗಿ
ಒಮ್ಮೆ ಓಂ ನಮಃ ಶಿವಾಯ ಎನ್ನಲು ಪದವಿ ಕೊಡುವವಗಿ.

ಮಂಗಳಾಂಗಿಯರು ಮಂಗಳಾರುತಿ ಎತ್ತಿರಿ ಶಂಕರಿಗಿ
ಅಂಗದೊಳ ಮಾಲಿಂಗವ ಧರಿಸಿದ ಮಂಗಲ ಮಹಿಮರಿಗಿ
ಸುಜನರ ರಕ್ಷ ಕುಜನರ ಶಿಕ್ಷ ಅಜಸುರ ವಂದಿಪಗಿ
ಭಜನೆಯ ಮಾಡುವ ಭಜಕರ ಗೋವಿಂದ ಗಿರಿಜಾ ವಲ್ಲಭಗಿ.

ಶರಣರ ಹೃದಯ ಕಮಲಗಳಿರುವ ಕರುಣ ಸಾಗರಿಗಿ
ದೊರೆಯುಳ್ಳ ಬೀಳಗಿ ವಾಸ ಒಡೆಯ ಮುಕ್ತನಿಗಿ
ಮಂಗಳಾಂಗಿಯರು ಮಂಗಳಾರತಿ ಎತ್ತಿರಿ ಶಂಕರಿಗಿ
ಅಂಗದೊಳ ಮಾಲಿಂಗವ ಧರಿಸಿದ ಮಂಗಲ ಮಹಿಮರಿಗಿ[೧]

ಅನೇಕ ಜನಪದ ತ್ರಿಪದಿಗಳಲ್ಲಿ ಆರತಿಯ ಉಲ್ಲೇಖಉಂಟು.

ಆರೂತಿ ಅಡ್ಡುಣಗಿ ಗೀರೂತಿ ಬಟ್ಟಲ
ಮಾರಾಯ ಅಣ್ಣನ ಶಿವಪೂಜಿ I ಮಾಡಟಗೆ
ಮೂಡಲ ಕೆಂಪು ತಿಳಿಹರಿದು[೨]

ಗಾದೆ, ಪಡೆನುಡಿಗಳೂ ಆರತಿಗೆ ಸಂಬಂಧಪಟ್ಟಂತೆ ಹಲವಾರು ಇವೆ.
ಆರತಿಗೊಬ್ಬ ಮಗಳು ಕೀರುತಿಗೊಬ್ಬ ಮಗ. (ಹೊಸಗಾದೆ)
ಆತೇನ ನಿನ್ನ ಮೋತಿಗಿ ಮಂಗಳಾರತಿ! (ಪಡೆನುಡಿ)[೩]

---

೧. ಹೇಳಿದವರು : ಶ್ರೀಮತಿ ಶೇಕವ್ವ ಓರಿ ಬೀಳಗಿ
೨. ಗರತಿಯ ಹಾಡು ಸಂ, ಹಲಸಂಗಿ ಗೆಳೆಯರು (೧೯೭೧) ಪುಟ:೧೦೩
೩. ಈ ಲೇಖನಕ್ಕೆ ಸಂಬಂಧಿಸಿದ ಮಾಹಿತಿಯನ್ನು ನೀಡಿದವರು ಬೀಳಗಿಯ ಶ್ರೀಮತಿಯವರಾದ ದಾಸಮ್ಮ ಕೆರೂರ, ನೀಲಗಂಗವ್ವ ಕೆರೂರ, ಗಿರಿಜ ಕೆರೂರ, ದಾಕ್ಷಾಯಿಣಿ ಕೆರೂರ, ಇವರಿಗೆ ಕೃತಜ್ಞತೆಗಳು.

ಹಾಗಲವಾಡಿ ಅರಸರ ಸಾಹಿತ್ಯ ಪೋಷಣೆ

● ವೀರಣ್ಣ ರಾಜೂರ

ಪೀಠಿಕೆ:

ಕನ್ನಡ ನಾಡು, ನುಡಿ, ಕಲೆ, ಧರ್ಮ, ಸಾಹಿತ್ಯ, ಸಂಸ್ಕೃತಿಗಳನ್ನು ಪೋಷಿಸುತ್ತ, ಪ್ರೋತ್ಸಾಹಿಸುತ್ತ ಬಂದ ಕೀರ್ತಿ ಈ ನಾಡನ್ನಾಳಿದ ಪ್ರಭುಗಳಿಗೆ ಸಲ್ಲುತ್ತದೆ. ಅರಸು, ಮಾಂಡಲೀಕ, ಸಾಮಂತ, ಪಾಳೆಯಗಾರ ಮೊದಲಾದ ಹಿರಿಕಿರಿಯ ರಾಜಮನೆತನಗಳೆಲ್ಲ ಒಂದಿಲ್ಲೊಂದು ರೀತಿಯಲ್ಲಿ ಸಂಸ್ಕೃತಿಸಂವರ್ಧನೆ ಕಾರ್ಯದಲ್ಲಿ ತಮ್ಮನ್ನು ತೊಡಗಿಸಿಕೊಳ್ಳುತ್ತ ಬಂದಿವೆ.

ಸಾಹಿತ್ಯಸಂವರ್ಧನೆ ಕಾರ್ಯದಲ್ಲಿ ತೊಡಗಿದ ವೀರಶೈವ ಅರಸುಮನೆತನಗಳಲ್ಲಿ ವಿಜಯನಗರ ಸಾಮ್ರಾಜ್ಯಕ್ಕೆ ಅಗ್ರಸ್ಥಾನ. ಈ ಹಿರಿಯ ಸಾಮ್ರಾಜ್ಯದ ಜೊತೆಗೆ ಕೆಳದಿ, ಸ್ವಾದಿ, ಬೀಳಗಿ, ಕೊಡಗು, ಪುಂಗನೂರು, ಕಿತ್ತೂರು, ಬೆಳವಡಿ, ಯಲಹಂಕ, ಹದಿನಾಡು, ಮಹಾನಾಡು, ಮೊದಲಾದ ಕಿರಿಯ ಅರಸುಮನೆತನಗಳ ಸಾಹಿತ್ಯ ಸೇವೆಯೂ ಉಪೇಕ್ಷಿಸುವಂತಹದಲ್ಲ. ಇಂಥ ಕಿರಿಯ ರಾಜಮನೆತನಗಳಲ್ಲಿ ಹಾಗಲವಾಡಿ ಪಾಳೆಯಗಾರರ ಸಂಸ್ಥಾನವೂ ಒಂದು.

ವಿಜಯನಗರ ಸಾಮ್ರಾಜ್ಯದ ಅಧೀನ ಸಾಮಂತರಾಗಿ ೧೪೭೮ ರಿಂದ ೧೭೭೬ ರ ವರೆಗೆ ಸುಮಾರು ೩೦೦ ವರ್ಷ ಕಾಲ ದಕ್ಷತೆಯಿಂದ ರಾಜ್ಯಭಾರ ಮಾಡಿದ ಈ ಪಾಳೆಯಗಾರರು ಮೂಲತಃ ಬೇಡ ಜನಾಂಗಕ್ಕೆ ಸೇರಿದವರೆಂದು ತಿಳಿದುಬರುತ್ತದೆ. ಈ ಮನೆತನದಲ್ಲಿ ಆಗಿ ಹೋದ ೧೩ ಜನ ಅರಸರಲ್ಲಿ ಮೂರನೆಯವನಾದ ಭೈರವನಾಯಕ (೧೫೪೪-೧೫೭೮) ವೀರಶೈವವನ್ನು ಸ್ವೀಕರಿಸಿ, ಹಾಗಲವಾಡಿ ಮನೆತನಕ್ಕೆ 'ವೀರಶೈವ ಸಂಸ್ಥಾನ' ಎಂಬ ಹೆಸರು ಬರಲು ಕಾರಣನಾದನು. ಸಿದ್ಧರಾಮೇಶ್ವರದೇವರ ವರಪ್ರಸಾದದಿಂದ ಪುತ್ರಸಂತಾನವನ್ನು ಪಡೆದ ಈತ ಅವನನ್ನು ಆರಾಧ್ಯ ದೈವವೆಂದು ಸ್ವೀಕರಿಸಿ , ಶಿವಭಕ್ತಿಯನ್ನು ಪಾಲಿಸುತ್ತ ಶಿವ ಧರ್ಮದ ಏಳಿಗೆಯನ್ನು ಸಾಧಿಸುತ್ತ ನಡೆದನಂತೆ. ಮುದಿಜಂಗಮನ ವೇಷದ ಸಿದ್ಧರಾಮನ ವರದಿಂದ ಹುಟ್ಟಿದ ಇವನ ಮಗ ಮುದಿಯಪ್ಪ ನಾಯಕ ಅಥವಾ ಹಿರಿಯ ಮುದಿಯಪ್ಪನಾಯಕನ ಆಳ್ವಿಕೆ ಈ ಮನೆತನದಲ್ಲಿಯೇ ಹಲವು ಕಾರಣಗಳಿಂದ ಗಮನಾರ್ಹವಾದುದೆನಿಸಿದೆ. ಸತ್ಯಸಂಧನೂ, ಧರ್ಮನಿಷ್ಠನೂ, ಕುಶಲಮತಿಯೂ, ಪ್ರಜಾವತ್ಸಲನು ಸಾಹಿತ್ಯ ಕಲಾಪ್ರೇಮಿಯೂ ಆದ ಈತ ತನ್ನ ರಾಜ್ಯದ ಗಡಿಗೆರೆಗಳನ್ನು ವಿಸ್ತರಿಸುವುದರ ಜೊತೆಗೆ ಧರ್ಮ, ಕಲೆ, ಸಾಹಿತ್ಯ,

ಸಂಸ್ಕೃತಿ ವರ್ಧನೆಯ ಕಾರ್ಯಗಳನ್ನೂ ಅಷ್ಟೇ ಉತ್ಕಟವಾಗಿ ಕೈಕೊಂಡನು. ಈತ ಆರಂಭಿಸಿದ ಈ ಪರಂಪರೆಯನ್ನು ಅನಂತರದ ಅರಸರು ಮುಂದುವರಿಸಿಕೊಂಡು ಸಾಗಿದರು. ಹೀಗಾಗಿ ಈ ಮನೆತನದ ಸಾಹಿತ್ಯ ಪೋಷಣೆಯ ಕಾರ್ಯ ಹಿರಿಯ ಮುದಿಯಪ್ಪ ನಾಯಕನಿಂದ ಆರಂಭವಾಯಿತೆಂದು ಹೇಳಬೇಕಾಗುತ್ತದೆ. ತತ್ಪೂರ್ವದ ಅರಸರು ರಾಜ್ಯವಿಸ್ತರಣೆಯಲ್ಲಿ, ಸೈನ್ಯಬಲ ಹೆಚ್ಚಿಸುವಲ್ಲಿ, ಕೋಟೆ, ಕೊತ್ತಲ, ಕೆರೆ-ಕಾಲುವೆಗಳನ್ನು ಕಟ್ಟಿಸುವುದರಲ್ಲಿ ತಮ್ಮ ಹೆಚ್ಚಿನ ಗಮನವನ್ನು ಕೇಂದ್ರೀಕರಿಸಿದರು. ಆಗ ಅದು ಅವರಿಗೆ ಅಗತ್ಯವೂ, ಅಷ್ಟೇ ಅನಿವಾರ್ಯವೂ ಆದ ಕಾರ್ಯವಾಗಿತ್ತು. ಹಾಗೆ ಅವರು ಸಂಸ್ಥಾನದ ಬುನಾದಿಯನ್ನು ಭದ್ರಗೊಳಿಸಿದರೆಂದೇ ಮುದಿಯಪ್ಪ ನಾಯಕನಿಗೆ ಸಂಸ್ಕೃತಿ ಸಂವರ್ಧನೆಯತ್ತ ಗಮನಹರಿಸಲು ಸಾಧ್ಯವಾಯಿತು. ಈತನಿಗಿಂತ ಹೆಚ್ಚು ಪರಿಣಾಮಕಾರಿಯಾಗಿ ಈ ಕಾರ್ಯ ಮಾಡಿದ ಇನ್ನೊಬ್ಬ ದೊರೆ ೧೭೨೦ - ೧೭೪೦ ರ ವರೆಗೆ ಆಳಿದ ೯ ನೆಯ ದೊರೆ ಇಮ್ಮಡಿ ಮುದಿಯಪ್ಪ ನಾಯಕ.

ಹಾಗಲವಾಡಿ ಅರಸರು ಮಾಡಿದ ಸಾಹಿತ್ಯ ಪೋಷಣೆಯ ಕಾರ್ಯವನ್ನು ನಾಲ್ಕು ಹಂತಗಳಲ್ಲಿ ಗುರುತಿಸಿ ಅಧ್ಯಯನ ಮಾಡಬಹುದು.

೧. ಸ್ವತಃ ಅರಸರೇ ಕವಿಗಳಾಗಿ ಕೃತಿರಚನೆ ಮಾಡಿದುದು.

೨. ಅನ್ಯ ಕವಿಗಳಿಗೆ ಆಶ್ರಯವಿತ್ತುದು.

೩. ಹಸ್ತ ಪ್ರತಿ ಲಿಪಿಕಾರರಿಗೆ ಪೋಷಣೆಯಿತ್ತುದು.

೪. ಸಂಪಾದನ ಸಮಯದ ಅನುಭವಿಗಳಿಗೆ ಗೌರವಿಸಿದುದು.

೧

ಈ ಮನೆತನದ ಸಿದ್ಧರಾಮಪ್ಪ ನಾಯಕ ಎಂಬ ಅರಸು 'ಮಹಾನುಭಾವ ಪ್ರಕಾಶಿಕೆ' ಎಂಬ ಗದ್ಯಗ್ರಂಥವನ್ನು ರಚಿಸಿರುವನೆಂದೂ, ಇದನ್ನು ಪೂರ್ವದಲ್ಲಿ ಸಿದ್ಧಲಿಂಗೇಶ್ವರರು ಶೀಲವಂತ ಮುರಿಗೆಪ್ಪನೆಂಬ ಶರಣನಿಗೆ ನಿರೂಪಿಸಿದ್ದರೆಂದೂ ತಿಳಿದುಬರುತ್ತದೆ.[1] ಈತ ೧೬೭೧-೧೭೦೧ ರವರೆಗೆ ಆಳಿದ ರಾಮಪ್ಪ ನಾಯಕನಾಗಿರಬೇಕು. ಈ ಮನೆತನದ ಆರಾಧ್ಯದೈವ ಸಿದ್ಧರಾಮೇಶ್ವರನನ್ನು ರಾಮೇಶ್ವರ ಎಂದೂ ಕರೆಯಲಾಗಿದೆ. ಅದೇ ಹೆಸರನ್ನು ಈತನಿಗೆ ಇಟ್ಟಿರಬೇಕು. ಈತ ರಚಿಸಿದ ಕೃತಿ ಈಗ ಉಪಲಬ್ಧವಿಲ್ಲ.

ಈ ಅರಸು ಮನೆತನದ ಪ್ರಸಿದ್ಧ ದೊರೆ ಇಮ್ಮಡಿ ಮುದಿಯಪ್ಪ ನಾಯಕ ಸ್ವತಃ ಕವಿಯೂ ಅನುಭಾವಿಯೂ ಆಧ್ಯಾತ್ಮವಾದಿಯೂ ಆಗಿದ್ದು, ಜೀವನ್ಮುಕ್ತಿ, ಕಾಲಸೂಚನೆ

---

೧. ಕರ್ನಾಟಕ ಕವಿಚರಿತೆ : ಸಂಪುಟ - ೨ ಪು. ೫೩೨

ಮೊದಲಾದ ಏಳುನೂರು ತತ್ವಗ್ರಂಥಗಳನ್ನು ರಚಿಸಿ ತನ್ನ ದೇಶದೊಳಗೆ ಎಲ್ಲ ಜನರೂ ಜೀವನ್ಮುಕ್ತರಾಗಬೇಕೆಂದು ಜ್ಞಾನಿಗಳ ಮೂಲಕ ತತ್ವಪ್ರಚಾರ ಮಾಡಿಸಿದನೆಂದು ಹೇಳಲಾಗುತ್ತದೆ.[೧] ಏಳುನೂರು ಗ್ರಂಥಗಳೆಂದರೆ ಏಳುನೂರು ತತ್ವಪ್ರಧಾನವಾದ ಸ್ವರ ವಚನಗಳಾಗಿವೆಯೆಂದೂ 'ಶ್ರೀ ಗುರುಸಿದ್ಧರಾಮ' ಎಂಬುದು ಇವುಗಳ ಅಂಕಿತವಾಗಿದೆ ಎಂದೂ ವಿದ್ವಾನ್ ಎಂ. ಎಸ್. ಬಸವರಾಜಯ್ಯ ಅವರು ಅಭಿಪ್ರಾಯಪಡುತ್ತಾರೆ.[೨] ಆದರೆ ಇವು ಇದುವರೆಗೆ ದೊರಕದೇ ಇರುವುದು ವಿಷಾದದ ಸಂಗತಿ. ಆ ಭಾಗದಲ್ಲಿ ಕ್ಷೇತ್ರಕಾರ್ಯ ನಡೆಸಿದರೆ ಜನರ ಸ್ಮೃತಿಯಲ್ಲಿ ಹಾಗೂ ಹಸ್ತ ಪ್ರತಿಯಲ್ಲಿ ಅಡಗಿ ಕುಳಿತಿರಬಹುದಾದ ಈ ಸ್ವರವಚನಗಳಲ್ಲಿ ಕೆಲವಾದರೂ ದೊರಕಬಹುದು. ಆಗ ಮಾತ್ರ ಮುದಿಯಪ್ಪ ನಾಯಕನ ನಿಜವಾದ ಕವಿತ್ವಶಕ್ತಿ, ಅನುಭವ ಶ್ರೀಮಂತಿಕೆಗಳು ಅರಿತಕ್ಕೆ ಬರುತ್ತವೆ.

ಹಾಗಲವಾಡಿ ಅರಸರ ಆಶ್ರಿತ ಕವಿಗಳಲ್ಲಿ, ಸದ್ಯ ಗುರುತಿಸಲ್ಪಟ್ಟವರು ಇಬ್ಬರು ಮಾತ್ರ. ಒಬ್ಬ ಸೋಸಲೆ ರೇವಣಾರಾಧ್ಯ. ಮತ್ತೊಬ್ಬ ಬೆಂಗಳೂರು ಮುದ್ವೀರಸ್ವಾಮಿ. ಇವರ ಜೀವನ, ವ್ಯಕ್ತಿ ವೈಶಿಷ್ಟ್ಯ ಹಾಗೂ ಕೃತಿಗಳ ಪರಿಚಯ ಹೀಗಿದೆ:

ಸೋಸಲೆ ರೇವಣಾರಾಧ್ಯ:

ಸೋಸಲೆ ರೇವಣಾರಾಧ್ಯ ಆರಾಧ್ಯ ಪರಂಪರೆಗೆ ಸೇರಿದ ವೀರಶೈವ ಕವಿ. ಶ್ರೇಷ್ಠ ಅನುಭಾವಿ, ತತ್ವವೇತ್ತ. ಉಭಯಭಾಷಾ ಪಂಡಿತ ,ಕವಿ, ಟೀಕಾಕಾರನೆನಿಸಿ ಅನೇಕ ಕೃತಿಗಳನ್ನು ರಚಿಸಿದ ಈತ ವೀರಶೈವ ಸಾಹಿತ್ಯ ಚರಿತ್ರೆಯಲ್ಲಿ ತನ್ನದೇ ಆದ ವಿಶಿಷ್ಟ ಸ್ಥಾನವನ್ನು ಗಳಿಸಿಕೊಂಡಿದ್ದಾನೆ. 'ಮಹಿಮ್ನಸ್ತವಟೀಕೆ' ಎಂಬ ತನ್ನದೊಂದು ಕೃತಿಯಲ್ಲಿ "ಚಿಕ್ಕನಾಯಕ ಪೂಷ್ಕರ್ತುರ್ಮುದಿನಾಯಕ ಭೂಭುಜಃ ಮುದೇ ಟೀಕಾಕಾರಿತೇಯಂ ಸೋಮಶೇಖರಯೋಗಿನಾ"[೩] ಅಂದರೆ ಚಿಕ್ಕನಾಯಕಪುರದ ಅರಸನಾದ ಮುದಿನಾಯಕನ ಸಂತೋಷಾರ್ಥವಾಗಿ ಸೋಮಶೇಖರ ಶಿವಯೋಗಿ ತನ್ನಿಂದ ಮಹಿಮ್ನಸ್ತವಟೀಕೆಯನ್ನು ಮಾಡಿಸಿದನೆಂದು ಹೇಳಿಕೊಂಡಿದ್ದಾನೆ. ಇಲ್ಲಿ ಉಲ್ಲೇಖಗೊಂಡ ಮುದಿನಾಯಕ ೧೫೭೮ ರಿಂದ ೧೬೧೮ ರ ವರೆಗೆ ಆಳಿದ ಹಾಗಲವಾಡಿ ಅರಸು ಮನೆತನದ ನಾಲ್ಕನೆಯ ದೊರೆ ಹಿರಿಯ ಮುದಿಯಪ್ಪನಾಯಕ ಎಂದು ತಿಳಿದು ಬರುತ್ತದೆ. ಬಹುಶಃ ಸೋಸಲೆ ರೇವಣಾರಾಧ್ಯ ಈ ಅರಸುಮನೆತನದ ರಾಜಗುರುವಾಗಿರಬೇಕು. ಆದರೆ ಈ ಊಹೆಯನ್ನು ಖಚಿತಪಡಿಸಲು ಇನ್ನಷ್ಟು ಆಧಾರಗಳು ಅಪೇಕ್ಷಣೀಯ. ಏಕೆಂದರೆ ಈತ ತನ್ನ ಇನ್ನೂ ಕೆಲವು ಕೃತಿಗಳ ಟೀಕೆಗಳನ್ನು ಬೇರೆ ಬೇರೆ ವ್ಯಕ್ತಿಗಳ ಆಜ್ಞೆ, ಅಪೇಕ್ಷೆಯ

---

೧. ಹಾಗಲವಾಡಿಯ ಪಾಳೆಯಗಾರರು : ಎಂ. ಎಸ್. ಪುಟ್ಟಣ್ಣ, ಪು. ೧೮ - ೧೯

೨. ಕವಿಕರ್ಣ ರಸಾಯನ ಟೀಕೆ : ಪ್ರಸ್ತಾವನೆ.

೩. ಕರ್ನಾಟಕ ಕವಿಚರಿತ್ರೆ : ಸಂಪುಟ - ೨ ಪು. ೩೨೦ (ಅಟಿ)

ಮೇರೆಗೆ ಬರೆದುದಾಗಿ ತಿಳಿಸುತ್ತಾನೆ. ವೀರಶೈವ ಸಿದ್ಧಾಂತ ಶಿಖಾಮಣಿಯ ಟೀಕೆಯನ್ನು ಭೋಗಮಲ್ಲೇಶನ ಶಿಷ್ಯನಾದ ಸಿದ್ಧವೃಷೇಶ್ವರನ ಆಜ್ಞಾನುಸಾರವಾಗಿ ಶಿವಾಧಿಕ್ಯಶಿಖಾಮಣಿ ಟೀಕೆಯನ್ನು ಕಳಲೆ ಕೆಂಪನಂಜಾರ್ಯ, ನಮಸ್ಕಾರಪುರಿ ಸಿದ್ಧನಂಜಾರ್ಯ, ಸುತ್ತೂರ ಸಿಂಹಾಸನದ ಗುರುನಂಜಾರ್ಯನ ಶಿಷ್ಯ ಚನ್ನಬಸವ -ಈ ಮೂವರುಗಳ ಇಷ್ಟಾನುಸಾರ ಬರೆದಂತೆ ಹೇಳುತ್ತಾನೆ. ಮುದಿಗೆರೆ ರಘುವಪ್ಪ ನಾಯಕನು ಈ ಗ್ರಂಥ ರಚನೆಗೆ ಕಾರಣೀಭೂತನಾಗಿದ್ದಾನೆ. ಎಂಬ ವಿಷಯವು ಈ ಗ್ರಂಥಾಂತರ್ಗತ ಹೇಳಿಕೆಯಿಂದ ತಿಳಿದುಬರುತ್ತದೆ.[೧] ಹಾಗಲವಾಡಿ ಹಿರಿಯ ಮುದಿಯಪ್ಪ ನಾಯಕನ ಕಾಲದ ಹಿನ್ನೆಲೆಯಲ್ಲಿ ಕವಿಚರಿತ್ರೆಕಾರರು ಈತನ ಕಾಲವನ್ನು ಸು ೧೬೨೩ ಎಂದು ನಿರ್ಧರಿಸಿದ್ದಾರೆ.[೨]

ಸೋಸಲೆ ರೇವಣಾರಾಧ್ಯ ತನ್ನ ಕೃತಿಗಳ ಅಂತ್ಯದಲ್ಲಿ ತನ್ನ ವಂಶಪರಂಪರೆಯನ್ನು ಹೀಗೆ ಹೇಳಿಕೊಂಡಿದ್ದಾನೆ:

ರೇಣುಕಾಚಾರ್ಯ ವಂಶೋದ್ಭವ ವಿಶ್ವನಾಥ, ಅವನ ಮಗ ವಾರಣಾಸೀಶ; ಅವನ ಮಕ್ಕಳು ವೀರಾರ್ಯ ಮತ್ತು ಸರ್ವೇಶ್ವರ; ಸರ್ವೇಶ್ವರನ ಮಗ ವೀರಣ; ಅವನ ಮಗ ರೇವಣಾರ್ಯ; ಅವನ ಮಗ ಕವಿ ರೇವಣಾಚಾರ್ಯ ಅಥವಾ ರೇಣುಕಾಚಾರ್ಯ.[೩]

ಈತ ತನ್ನ ವ್ಯಕ್ತಿ ವಿಶೇಷತೆಗಳನ್ನು ಹೀಗೆ ಹೇಳಿಕೊಂಡಿದ್ದಾನೆ:

"ಶ್ರೀ ಮದ್ವೇದವೇದ ಶಿರಶ್ಶಿವಾಗಮ ಪುಣ್ಯಪುರಾಣ ಪ್ರಭೃತಿ ಪ್ರಭೂತ ಪ್ರಥಿತ ಪ್ರಮು.ಗ ಸಂಗೀತ ವಿದ್ಯಾನವದ್ಯ ಶ್ರೀವೀರಶೈವ ಷಟ್‌ಸ್ಥಲ ಶಿವಾದ್ವೈತ ಸನ್ಮಾರ್ಗ ಪ್ರತಿಷ್ಠಾಪನಾಚಾರ್ಯವರ್ಯ."[೪] ಪ್ರತಿಯೊಂದು ಕೃತಿಯ ಪ್ರತಿ ಸ್ಥಲದ ಅಂತ್ಯದಲ್ಲಿ "ಸೋಸಲೆ ರೇವಣಾರಾಧ್ಯ ಶಿವಯೋಗೀಂದ್ರ ವಿರಚಿತಾಯಾಂ"[೫] ಎಂದು ಹೇಳಿಕೊಂಡಿದ್ದಾನೆ. ಇದರಿಂದ ಆತ ಶಿವಾಗಮ ವೀರಶೈವ ಷಟ್‌ಸ್ಥಲ ಶಿವಾದ್ವೈತ ಸಿದ್ಧಾಂತ ಕೋವಿದನೂ, ಶಿವಯೋಗೀಂದ್ರನೂ ಆಗಿದ್ದನೆಂದು ತಿಳಿದುಬರುತ್ತದೆ. ಇದು ಆತ ರಚಿಸಿದ ಕೃತಿಗಳಿಂದ ಸ್ಪಷ್ಟವಾಗುತ್ತದೆ.

---

೧. ಕರ್ನಾಟಕ ಕವಿಚರಿತ್ರೆ : ಸಂಪುಟ - ೨ ಪುಟ ೩೨೧ (ಅ. ಟಿ.)

೨. ಅದೇ ಪು. ೩೨೦

೩. ಶಿವಜ್ಞಾನ ಪ್ರಕಾಶಿಕೆ ಅಂತ್ಯ (ಕ ಅ ಹೀ ತಾಪ್ರ. ೫೮೬ ಗರಿ ೧೨೮)

೪. ಶಾರೀರ ಪ್ರಕಾಶಿಕೆ - ಅಂತ್ಯ (ಕ ಅ ಹೀ. ತಾಪ್ರ ೫೮೬, ಗರಿ ೧೬).

೫. ಅದೇ ಕೃತಿಯ ಪ್ರತಿ ಉಪದೇಶದ ಅಂತ್ಯ. ಹೀಗೆಯೇ ಇತರ ಕೃತಿಗಳಲ್ಲಿಯೂ ಇದೆ.

ಉಭಯ ಭಾಷಾ ಪಂಡಿತನಾಗಿದ್ದ ರೇವಣಾರಾಧ್ಯನ ಸಾಹಿತ್ಯ ಸೃಷ್ಟಿ ವಿಪುಲವಾಗಿದೆ. ಸದ್ಯ ಈತನ ೨೦ ಕೃತಿಗಳು ಲಭ್ಯವಾಗಿವೆ.

೧. ಶಾರೀರ ಪ್ರಕಾಶಿಕೆ (ಸಂಸ್ಕೃತ) - ೩ ಉಪದೇಶ[೧]

೨. ಅಂತಃಕರಣ ಪ್ರಕಾಶಿಕೆ (ಸಂ) - ೩ ಉಪದೇಶ

೩. ಸ್ವಸ್ವರೂಪ ಪ್ರಕಾಶಿಕೆ (ಸಂ) - ೫ ಉಪದೇಶ

೪. ಪರಮಾತ್ಮ ಪ್ರಕಾಶಿಕೆ (ಸಂ) - ೩ ಉಪದೇಶ

೫. ನಿಜದೀಪ್ತಿ ಪ್ರಕಾಶಿಕೆ (ಸಂ) - ೩ ಉಪದೇಶ

೬. ಶಿವಜ್ಞಾನ ಪ್ರಕಾಶಿಕೆ (ಸಂ+ಕ) - ೫೫ ಷಟ್ಪದಿ , ಅಷ್ಟೇ ಸಂಖ್ಯೆಯ ಶ್ಲೋಕ[೨]

೭. ಷಟ್‌ಸ್ಥಲ ಬ್ರಹ್ಮದೀಪಿಕೆ (ಪರಮುಕ್ತಿ ಪ್ರದೀಪಿಕೆ) (ಸಂ)[೩] - ಪ್ರಕಟಿತ ಶಿ. ಭ. ೮-೩,೪

೮. ಅಕ್ಷರಾಂಕಗದ್ಯ ಟೀಕೆ (ಮೂಲ ಪಾಸೋ. ಕೆ.ಆರ್.ಐ.-V-೮)

೯. ಅಕ್ಷರಮಾಲಿಕಾ ಗದ್ಯ ಟೀಕೆ (ಅದೇ. ಕೆ.ಆರ್. ಐ-V-೫)

೧೦. ಮಹಿಮ್ನಸ್ತವಟೀಕೆ (ಮಹಿಮ್ನ ಪ್ರದೀಪಿಕಾ)-ಕೆ-೩೮/೫

೧೧. ಚೆನ್ನಬಸವ ರಗಳೆ ಟೀಕೆ (ಮೂ. ಪಾಸೋ. ಮಹಾರಾಜಾ ಸಂಸ್ಕೃತ ಪಾಠಶಾಲೆ)

೧೨. ನಮಸ್ಕಾರಗದ್ಯ ಟೀಕೆ (ಮೂ. ಪಾಸೋ ಕೆ. ಆರ್. ಐ. V-೪೨)[೪]

೧೩. ಶರಣು ಬಸವ ರಗಳೆ ಟೀಕೆ (ಮೂ. ಪಾಸೋ. ಕೆ. ೧೭೪೫/೮)

೧೪. ಸದ್ಗುರು ರಗಳೆ ಟೀಕೆ (ಮೂ. ಪಾಸೋ. ಪ್ರಕಟಿತ-ಕಸಾಪಪ. ಎಸ್.ಶಿವಣ್ಣ)

೧೫. ವೀರಶೈವ ಸಿದ್ಧಾಂತ ಶಿಖಾಮಣಿಟೀಕೆ - ಕೆ ೪೭೨

---

೧. ೧ ರಿಂದ ೬ ರ ವರೆಗಿನ ಕೃತಿಗಳು ಕನ್ನಡ ಅಧ್ಯಯನ ಪೀಠದ ತಾಪ್ರ. ೫೮೬ ರಲ್ಲಿ ಒಟ್ಟು ದೊರೆಯುತ್ತವೆ.

೨. ಇದರಲ್ಲಿ ಕರಸ್ಥಲದ ವೀರಣ್ಣೊಡೆಯನ 'ಮಾಯಾ ಭ್ರಾಂತಿ ನಿರಸನ' ಎಂಬ ಕೃತಿಯನ್ನು ಅಡಕಗೊಳಿಸಲಾಗಿದೆ. ಒಂದೊಂದು ಶ್ಲೋಕಕ್ಕೆ ಒಂದೊಂದು ಷಟ್ಪದಿಯಂತೆ ಜೋಡಿಸಲಾಗಿದೆ.

೩. ಹಾಗಲವಾಡಿ ಇಮ್ಮಡಿ ಮುದಿಯಪ್ಪನಾಯಕನ ಕಾಲದಲ್ಲಿದ್ದ - ರಾಜಗುರುವಾಗಿದ್ದ - ಮುದ್ವೀರಸ್ವಾಮಿ ಈ ಕೃತಿಯನ್ನಾಧರಿಸಿ ಕನ್ನಡ ಷಟ್ಪದಿ ರೂಪದ 'ಶಿವತತ್ತ್ವ ಸುಜ್ಞಾನ ಪ್ರದೀಪಿಕೆ' ಎಂಬ ಕೃತಿಯನ್ನು ರಚಿಸಿದುದಾಗಿ ಹೇಳಿಕೊಂಡಿದ್ದಾನೆ.

೧೬. ಶಿವಾಧಿಕ್ಯ ಶಿಖಾಮಣಿ ಟೀಕೆ (ಸಿದ್ಧಾರ್ಥ ಸಂಬೋಧಿನಿ) - ಕ. ೧೯೦(ಬೆಂ)

೧೭. ರುದ್ರಭಾರತ ಟೀಕೆ, ಕಕಚ III ೪೯೭

೧೮. ಯೋಗತಾರಾವಳಿ, ಕಕಚ ಅ ಸೂ. ಪು. ೫೪

೧೯. ಶ್ರೀ ರುದ್ರ ಟೀಕೆ (ಶಾಂತಮೂರ್ತಿ ಪ್ರಕಾಶಿಕೆ) - ಪ್ರಕಟಿತ ಆರ್. ಶ್ರೀಕಂಠಾರಾಧ್ಯ

೨೦. ಸ್ವರವಚನ - ವೀರಣಾರ್ಯ ಅಂಕಿತ - ಪ್ರಕಟಿತ[1]

ಇವುಗಳಲ್ಲಿ ಒಂಬತ್ತು ಸ್ವತಂತ್ರ ಕೃತಿಗಳಾಗಿದ್ದರೆ, ಹನ್ನೊಂದು ಬೇರೆಯವರ ಕೃತಿಗಳಿಗೆ ಬರೆದ ಟೀಕೆಗಳಾಗಿವೆ. ಸ್ವತಂತ್ರ ಕೃತಿಗಳಲ್ಲಿಯೂ ಯೋಗತಾರಾವಳಿ ಮತ್ತು ಸ್ವರವಚನ ಎರಡು ಮಾತ್ರ ಸ್ವರಚಿತ; ಉಳಿದವು ಬೇರಬೇರೆ ಕೃತಿಗಳಿಂದ ವೇದ, ಆಗಮ, ಉಪನಿಷತ್ತು, ಪುರಾಣ ಇತ್ಯಾದಿಗಳಿಂದ ಶ್ಲೋಕಗಳನ್ನು ಆಯ್ದು ಒಂದು ತತ್ವದ ಹಿನ್ನೆಲೆಯಲ್ಲಿ ಜೋಡಿಸಿದ ಸಂಯೋಜನ ರೂಪದ ಕೃತಿಗಳಾಗಿವೆ. ಇವುಗಳಲ್ಲಿ ಶಿವಜ್ಞಾನ ಪ್ರಕಾಶಿಕೆ (ಮಾಯಾಭ್ರಾಂತಿ ನಿರಸನ ಅಂತರ್ಗತ) ಎಂಬುದು ಇದುವರೆಗೆ ಗುರುತಿಸದೇ ಇದ್ದ ಹೊಸ ಕೃತಿಯಾಗಿದೆ. ಹಾಗೆಯೇ ಒಂದು ಸ್ವರವಚನವನ್ನು ಈಚೆಗೆ ಗುರುತಿಸಿ ಪ್ರಕಟಿಸಲಾಗಿದೆ. ಶೋಧಿಸುತ್ತ ನಡೆದಂತೆ ಕಾಲಕ್ರಮದಲ್ಲಿ ಇನ್ನೂ ಹೆಚ್ಚಿನ ಸಂಖ್ಯೆಯ ಈತನ ಸ್ವರವಚನಗಳು ಮತ್ತು ಇತರ ಕೃತಿಗಳು ಸಿಗುವ ಸಂಭವವಿದೆ. ದೊರೆತ ಎಲ್ಲ ಕೃತಿಗಳು ತತ್ವ ಪ್ರಧಾನವಾಗಿದ್ದು, ರೇವಣಾರಾಧ್ಯನ ಪ್ರತಿಭೆ, ಪಾಂಡಿತ್ಯ, ಆಧ್ಯಾತ್ಮ ಶ್ರದ್ಧೆ, ಭಾಷಾಪ್ರಭುತ್ವ, ಅನುಭಾವಿಕ ಸಿದ್ಧಿಯನ್ನು ಪ್ರಕಟಿಸುತ್ತ ನಿಂತಿವೆ. ಈ ಕೃತಿಗಳ ಪ್ರಕಟನೆ, ಆಳವಾದ ಅಧ್ಯಯನ ಇನ್ನೂ ನಡೆಯಬೇಕಾಗಿದೆ.

ಬೆಂಗಳೂರ ಮುದ್ವೀರಸ್ವಾಮಿ :

ಹಾಗಲವಾಡಿ ಅರಸರ ಆಶ್ರಿತ ಕವಿಗಳಲ್ಲಿ ಎದ್ದು ಕಾಣುವ ಮತ್ತೊಂದು ಹೆಸರು ಮುದ್ವೀರಸ್ವಾಮಿಗಳದು. ಇವರನ್ನು ಕುರಿತು ನಾನು ಈಗಾಗಲೇ `ಹಾಗಲವಾಡಿ ಮುದ್ವೀರಸ್ವಾಮಿಯ ಸ್ವರವಚನಗಳು'[2] ಎಂಬ ಕೃತಿಯ ಪ್ರಸ್ತಾವನೆಯಲ್ಲಿ ಸುದೀರ್ಘವಾಗಿ ಪ್ರಸ್ತಾಪಿಸಿದ್ದೇನೆ. ಅಲ್ಲಿ ಹೇಳಿದ ಸಂಗತಿಗಳ ಜೊತೆಗೆ ಈಚೆಗೆ ದೊರೆತ ಹೆಚ್ಚಿನ ಆಕರ ಸಾಮಗ್ರಿಯನ್ನು ಬಳಸಿಕೊಂಡು ಹಿಂದೆ ಹೇಳಿದ ಸಂಗತಿಗಳಲ್ಲಿ ತೋರುವ ಕೊರತೆಯನ್ನು ನಿವಾರಿಸಿಕೊಂಡು ನಿಜಚರಿತ್ರೆಯನ್ನು ನಿರೂಪಿಸಲು ಇಲ್ಲಿ ಪ್ರಯತ್ನಿಸಿದ್ದೇನೆ.

---

೧. ಸೋಸಲೆ ರೇವಣಾರಾಧ್ಯರ ಒಂದು ಸ್ವರವಚನ - ಡಾ. ವೀರಣ್ಣ ರಾಜೂರ. (ಬ. ಪ. ೫ - ೧.೨)

೨. ಹಾಗಲವಾಡಿಯ ಮುದ್ವೀರಸ್ವಾಮಿಯ ಸ್ವರವಚನಗಳು ಪ್ರ. ವೀರಶೈವ ಅಧ್ಯಯನ ಸಂಸ್ಥೆ, ಜಗದ್ಗುರು ತೋಂಟದಾರ್ಯ ಮಠ, ಗದಗ (೧೯೮೭)

ಈ ಮೊದಲು ದೊರಕದೇ ಈಚೆಗೆ ಬೆಳಕಿಗೆ ಬಂದ ಆಕರಗಳಲ್ಲಿ ಚೆನ್ನವೀರ ವಿರಚಿತ `ಮುದ್ವೀರ ತಾರಾವಳಿ'[೧] ಮತ್ತು `ಪರಾಕು'[೨] ಎಂಬ ಎರಡು ಕೃತಿಗಳು ಮುಖ್ಯವಾದುವು. ಇವುಗಳ ಜೊತೆಗೆ ಒಟ್ಟಾಗಿ ಮುದ್ವೀರಸ್ವಾಮಿಯ ಜೀವನಸಂಗತಿಗಳನ್ನು ತಿಳಿಸುವ ಇತರ ಆಕರಗಳೆಂದರೆ ಸ್ವತಃ ಈತನೇ ಬರೆದ ಸ್ವರವಚನ, ವಚನ ಮತ್ತು ಶಿವತತ್ವಸುಜ್ಞಾನ ಪ್ರದೀಪಿಕೆ ಎಂಬ ಷಟ್ಪದಿಕಾವ್ಯ ಹಾಗೂ ಎಂ. ಎಸ್. ಪುಟ್ಟಣ್ಣ ಅವರು ಬರೆದ ಹಾಗಲವಾಡಿ ಪಾಳೆಯಗಾರರು ಎಂಬ ಗ್ರಂಥ. ಇವುಗಳಲ್ಲಿ ಹೆಚ್ಚು ಚಾರಿತ್ರಿಕ ಸಂಗತಿಗಳನ್ನೊಳಗೊಂಡ ಆಕರವೆಂದರೆ ಚೆನ್ನವೀರನ ಮುದ್ವೀರ ತಾರಾವಳಿ . ಅದರ ವಿವರ ಹೀಗಿದೆ:

ರೇವಣ ಸಿದ್ಧೇಶ್ವರನಿಂದ ಸಿದ್ಧಾಂತ ಶಿಖಾಮಣಿಯನ್ನು ಬೋಧಿಸಿಕೊಂಡ ಅಗಸ್ತ್ಯ ತನಗೊದಗಿದ ಜ್ಞಾನವನ್ನು ಲೋಕಹಿತಕ್ಕಾಗಿ ಬಳಸಲು ಮುದ್ವೀರೇಶನನ್ನು ನೆನೆಯುತ್ತಾನೆ. ವೀತರಾಗನೂ ಯೋಗಕೊಡೆಯನೂ, ಮೋಕ್ಷದ ಪುಂಜನೂ, ಗುರುಕುಲತಿಲಕನೂ ಎಂಬ ಬಿರುದನ್ನು ಪಡೆದ ಮುದ್ವೀರೇಶನು ಲೋಕಸಂಚಾರ ಮಾಡುತ್ತ, ಭಕ್ತರಿಗೆ ಆಗಮ, ವೇದ, ಪುರಾಣದರ್ಥವನ್ನು ಬೋಧಿಸುತ್ತ, ಕಾಶಿ, ಕೇದಾರ, ಕುಂಭಕೋಣ, ಶ್ರೀಶೈಲ, ರಾಮೇಶ್ವರಗಳನ್ನು ಸುತ್ತುಹಾಕಿ, ಲೋಕೋತ್ತರ ಪುಣ್ಯಕ್ಷೇತ್ರವೂ, ದಕ್ಷಿಣ ಕಾಶಿಯೂ ಎನಿಸಿದ ಕಕುದ್ಗಿರಿ (ಇಂದಿನ ಶಿವಗಂಗೆ)ಗೆ ಬಂದು, ಆ ಪ್ರಶಾಂತ ಪ್ರದೇಶದಲ್ಲಿ ಸಂತೋಷದಿಂದ ಚರಿಸುತ್ತಿದ್ದನು. ಒಂದು ದಿನ ಶಿವಯೋಗ ನಿದ್ರಾಮುದ್ರೆಯಲ್ಲಿರುವಾಗ ಶಿವಯೋಗೀಶ್ವರ ಗುರು ಸ್ವಪ್ನದಲ್ಲಿ ಕಾಣಿಸಿಕೊಂಡು `ಇಲ್ಲಿಯೇ ಸಮೀಪದಲ್ಲಿ ಸಂಗಮೇಶ್ವರನೆಂಬ ಗುರು ಇದ್ದಾನೆ. ಅಲ್ಲಿಗೆ ಹೋಗಿ ಪರತತ್ವವನ್ನು ಕೇಳು. ಎಂದು ಹೇಳುತ್ತಾನೆ. ಅದರಂತೆ ಮುದ್ವೀರೇಶ ಗುರು ಸಂಗಮೇಶ್ವರನ ಬಳಿಗೆ ಹೋಗಿ ಭಯ ಭಕ್ತಿಯಿಂದ ಎರಗಿ ಪರತತ್ವವನ್ನು ಬೋಧಿಸಬೇಕೆಂದು ಪ್ರಾರ್ಥಿಸುತ್ತಾನೆ. ಅವನ ಅಪೇಕ್ಷೆಯ ಮೇರೆಗೆ ತತ್ವೋಪದೇಶವನ್ನು ಮಾಡುತ್ತಾನೆ. ಗುರುನಿರೂಪವನ್ನು ಹೊತ್ತ ಮುದ್ವೀರೇಶ ಅವನಿಂದ ಬೀಳ್ಕೊಂಡು ಯೋಗೋಚಿತವಾದ ಸ್ಥಳವನ್ನು ಹುಡುಕುತ್ತ, ನದಿತೀರ, ಪುಷ್ಪವಾಟಿ, ತೋಟ, ಗಿರಿ ತಟಾಕಗಳಲ್ಲಿ ಯೋಗಧ್ಯಾನ ಮಾಡುತ್ತ ಬರುವಾಗ ಬೆಂಗಳೂರಿನ ಭಕ್ತರಿಗೆ ಶುಭ ಸೂಚನೆಗಳಾಗುತ್ತವೆ. ತಮ್ಮ ಊರಿನ ಹೊರ ವಲಯದಲ್ಲಿ ಯೋಗೀಶ್ವರರು ಬರುತ್ತಿದ್ದಾರೆ ಎಂಬ ಸಂಗತಿ ತಿಳಿಯುತ್ತದೆ. ತಕ್ಷಣ ಹೋಗಿ ಎದುರುಗೊಂಡು ನಮಸ್ಕರಿಸಿ ತಮ್ಮ ಗ್ರಾಮಕ್ಕೆ ಬರಬೇಕೆಂದು ಪ್ರಾರ್ಥಿಸುತ್ತಾರೆ. ಭಕ್ತರ ಕೋರಿಕೆಯನ್ನು ಮನ್ನಿಸಿ ಮುದ್ವೀರೇಶ ಬೆಂಗಳೂರಿಗೆ ಬಂದು ಅಲ್ಲಿ ಯೋಗ್ಯ ಸ್ಥಾನದಲ್ಲಿ ನೆಲೆಸಿ, ಯೋಗಸಾಧನ ಮಾಡಿ ಸಿದ್ಧಿಯನ್ನು ಪಡೆಯುತ್ತಾನೆ.

೧. ಮುದ್ವೀರ ತಾರಾವಳಿ : ಸಂ. ಎಸ್. ಶಿವಣ್ಣ, ಸತ್ಯಶುದ್ಧಕಾಯಕ. ೨.೧, ೨ ಸೆ. ೩. ೧೯೯೧

೨. ಪರಾಕು : ಸಂ. ಎಸ್. ಶಿವಣ್ಣ, ಕರ್ನಾಟಕ ಭಾರತಿ ೨೫-೧

ಅಷ್ಟರಲ್ಲಿ ಇತ್ತ ಎಡೆಯೂರ ಸಿದ್ಧಲಿಂಗರ ಶೇಷಸಂಭವನಾದ ಹಾಗಲವಾಡಿಯ ಅರಸು ಮುದಿಯಪ್ಪನಾಯಕನಿಗೆ ಸಿದ್ಧಲಿಂಗ 'ಬೆಂಗಳೂರಿನಲ್ಲಿ ಮುದ್ವೀರಯತೀಶನಿದ್ದಾನೆ ಆತನನ್ನು ಕರೆಸಿಕೊಂಡು ನಿನ್ನ ಜ್ಞಾನವನ್ನು ಹೆಚ್ಚಿಸಿಕೊ' ಎಂದು ಪ್ರೇರಣೆ ಕೊಡುತ್ತಾನೆ. ಅದರಂತೆ ಅರಸು ಮುದ್ವೀರೇಶನನ್ನು ಕರೆತರಲು ಪಲ್ಲಕ್ಕಿ ಪರಿವಾರದವರನ್ನು ಕಳಿಸಿ, ಪುರವನ್ನು ಶೃಂಗರಿಸಿ ರಾಜಮರ‍್ಯಾದೆಯಿಂದ ಸ್ವಾಗತಿಸುತ್ತಾನೆ. ಭಯ ಭಕ್ತಿಯಿಂದ ಪೂಜಿಸಿ, ಜ್ಞಾನದೀಕ್ಷೆಯನ್ನು ಕೊಡಬೇಕೆಂದು ಬೇಡಿಕೊಳ್ಳುತ್ತಾನೆ. ಮುದ್ವೀರಯೋಗಿ ರಾಜನ ಭಕ್ತಿಗೆ ಮೆಚ್ಚಿ , ಆತನಿಗೆ `ಶಿವತತ್ವ ಸುಜ್ಞಾನ ದೀಪಿಕೆ'ಯನ್ನು ಬೋಧಿಸುತ್ತಾನೆ. ಅಲ್ಲದೆ ಪುತ್ರ ಸಂತಾನವಾಗುವಂತೆ ಅನುಗ್ರಹಿಸುತ್ತಾನೆ. ಹೀಗೆ ಕೆಲವು ವರ್ಷ ರಾಜಪೂಜಿತನಾಗಿ ತತ್ವಜ್ಞಾನವನ್ನು ಬೋಧಿಸುತ್ತ ಇದ್ದು, ಸಾಂಬಲೋಕಕ್ಕೆ ಹೋಗಲು ಸೂಚನೆಯಾಗಲು, ಮೂರು ತಿಂಗಳು ಮೊದಲೇ ಲಿಂಗಧ್ಯಾನದಲ್ಲಿ ಲೀನವಾಗಲು ಬಯಸುತ್ತಾನೆ. ಮುದಿಯಪ್ಪ ನಾಯಕ ಪುರದ ಮಧ್ಯದ ಗೋಪ್ಯ ಸ್ಥಳದಲ್ಲಿ ಗುರುವಿಗೆ ಧ್ಯಾನಮಂಟಪವನ್ನು ಕಟ್ಟಿಸಿಕೊಡುತ್ತಾನೆ. ಮುದ್ವೀರೇಶ ಅಲ್ಲಿ ಧ್ಯಾನಮಗ್ನನಾಗಿ 'ಕಾಳಾಯುಕ್ತನಾಮ ವತ್ಸರದ ಮಾಘಮಾಸ ದಶಮಿ ಭಾನುವಾರ'ಅಂದರೆ ಕ್ರಿ. ಶ. ೧೭೩೯ ರಲ್ಲಿ ಕರ್ಪೂರ ಉರಿಯೊಳಗಡಗಿದಂತೆ ಲಿಂಗದಲ್ಲಿ ಲೀನವಾಗುತ್ತಾನೆ. ಭಕ್ತರೆಲ್ಲ ಸೇರಿ ಶಾಸ್ತ್ರಕ್ರಮದಿಂದ ಸಂಸ್ಕಾರ ಮಾಡುತ್ತಾರೆ. ಮುದಿಯಪ್ಪ ನಾಯಕ ಗುರುವಿನ ಗೌರವಾರ್ಥವಾಗಿ ದಾಸೋಹ ರಥೋತ್ಸವವನ್ನು ನಡೆಸುತ್ತಾನೆ. ಇದು ಈ ತಾರಾವಳಿಯ ಸಾರ ಸಂಗ್ರಹ.

ಈ ಕೃತಿಯಿಂದ ವ್ಯಕ್ತವಾಗುವ ಚಾರಿತ್ರಿಕ ಅಂಶಗಳು ಇವು: ಮುದ್ವೀರಸ್ವಾಮಿ ಮೂಲತಃ ದಕ್ಷಿಣ ಕರ್ನಾಟಕಕ್ಕೆ ಸೇರಿದವನು. ಮಹಾಜ್ಞಾನಿಯಾಗಿದ್ದ ಆತ ಪುಣ್ಯಕ್ಷೇತ್ರಗಳನ್ನು ಸಂದರ್ಶಿಸಿ ಬಂದು ಕಕುದ್ಗಿರಿ(ಶಿವಗಂಗೆ)ಯಲ್ಲಿ ವಾಸವಾಗಿದ್ದನು.

ಇದೇ ಪ್ರದೇಶದಲ್ಲಿ ಇದ್ದಿರಬಹುದಾದ ಸಂಗಮೇಶ್ವರ ಎಂಬವರಿಂದ ಪರತತ್ವ ಬೋಧೆಯನ್ನು ಪಡೆದು ಯೋಗ ಸಾಧನೆ ಮಾಡಿ ನಂತರದಲ್ಲಿ ಬೆಂಗಳೂರಿಗೆ ಬಂದು ನೆಲಸಿದನು. ಎಡೆಯೂರ ಸಿದ್ಧಲಿಂಗರ ಪ್ರೇರಣೆಯ ಮೇರೆಗೆ ಹಾಗಲವಾಡಿ ಮುದಿಯಪ್ಪ ನಾಯಕ ಇವರನ್ನು ತನ್ನ ರಾಜ್ಯಕ್ಕೆ ಕರೆಯಿಸಿಕೊಂಡು ಅವರಿಂದ ತತ್ವಜ್ಞಾನೋಪದೇಶವನ್ನು ಪಡೆದನು. ಮುದಿಯಪ್ಪ ನಾಯಕನ ಭಕ್ತಿಗೆ ಮೆಚ್ಚಿ ಪುತ್ರಫಲ ಅನುಗ್ರಹವನ್ನೂ ಅವನ ಆಧ್ಯಾತ್ಮದ ಹಸಿವನ್ನು ಕಂಡು `ಶಿವತತ್ವಸುಜ್ಞಾನದೀಪಿಕೆ -' ಎಂಬ ಷಟ್‌ಸ್ಥಲ ತತ್ವಗ್ರಂಥವನ್ನೂ ಬೋಧಿಸಿದನು. ಗುರುವಿಗಾಗಿ ಮುದಿಯಪ್ಪನಾಯಕ ಧ್ಯಾನಮಂಟಪವನ್ನು ಕಟ್ಟಿಸಿಕೊಟ್ಟನು. ಐಕ್ಯ ಸಮಯಕ್ಕೆ ಮೂರು ತಿಂಗಳು ಮೊದಲೇ ಆ ಧ್ಯಾನಮಂಟಪದಲ್ಲಿ ಮುದ್ವೀರಯೋಗಿ

ಲಿಂಗಧ್ಯಾನದಲ್ಲಿ ತೊಡಗಿ ೧೭೬೯ ರಲ್ಲಿ ಲಿಂಗೈಕ್ಯನಾದನು. ಅವರ ಸ್ಮರಣಾರ್ಥವಾಗಿ ದೊರೆ ದಾಸೋಹ ರಥೋತ್ಸವನ್ನು ನಡೆಸಿದನು.

ಇಲ್ಲಿ ಕೆಲವು ಅಂಶಗಳು ಸ್ಪಷ್ಟವಾಗಿರುವುದಿಲ್ಲ. ಮುದ್ವೀರಸ್ವಾಮಿಗೆ ಸಂಗಮೇಶ್ವರನಲ್ಲಿಗೆ ಹೋಗುವಂತೆ ಸ್ವಪ್ನದಲ್ಲಿ ಕಾಣಿಸಿಕೊಂಡು ಹೇಳಿದ ಯೋಗೀಶ್ವರ ಯಾರು? ಸಂಗಮೇಶ್ವರ ಇದ್ದ ಸ್ಥಳಯಾವುದು? ಬೆಂಗಳೂರಲ್ಲಿ ಮುದ್ವೀರಸ್ವಾಮಿ ಎಲ್ಲಿ ನೆಲೆಸಿದ್ದ? ಇವು ಇನ್ನೂ ಶೋಧಿಸಬೇಕಾದ ಸಂಗತಿಗಳಾಗಿವೆ.

ಹಾಗಲವಾಡಿಗೆ ಹತ್ತು ಮೈಲು ಅಂತರದಲ್ಲಿ ಚೇಳೂರು ಎಂಬ ಗ್ರಾಮವಿದ್ದು, ಅಲ್ಲಿ ಸಂಗಮೇಶ್ವರಸ್ವಾಮಿಯ ಮಠವಿದೆ. ಅದರಲ್ಲಿ ಒಂದು ಗದ್ದುಗೆ ಇದ್ದು, ಅದು ಸಂಗಮೇಶ್ವರನ ಗದ್ದುಗೆಯೆಂದು ತಿಳಿದುಬರುತ್ತದೆ. ಮಠದ ಬಾಗಿಲ ಕೆತ್ತನೆ ಹಾಗಲವಾಡಿ ಅರಸರ ಕಾಲದ ಕೆತ್ತನೆಯನ್ನು ಹೋಲುತ್ತದೆ. ಕಾರಣ ಇದು ಮುದ್ವೀರಸ್ವಾಮಿಯ ಗುರುವಿನ ಹೆಸರಿನಲ್ಲಿ ಕಟ್ಟಿಸಿದ ಮಠವಾಗಿರಬೇಕು. ಅಂದರೆ ಸಂಗಮೇಶ್ವರ ಚೇಳೂರಿನಲ್ಲಿ ವಾಸವಾಗಿದ್ದ. ಮುದ್ವೀರಸ್ವಾಮಿ ಅಲ್ಲಿಗೆ ಹೋಗಿ ಪರತತ್ವ ಬೋಧನೆಯನ್ನು ಪಡೆದುಕೊಂಡ ಎಂದು ಹೇಳಲು ಅವಕಾಶವಿದೆ. ಹಾಗೆಯೇ ಬೆಂಗಳೂರಿನಲ್ಲಿ ಮುದ್ವೀರಸ್ವಾಮಿ ಈಗಿನ ಸರ್ಪಭೂಷಣಮಠದಲ್ಲಿ ವಾಸವಾಗಿದ್ದನೆಂದು ಹೇಳಲಾಗುತ್ತದೆ. ಇದಕ್ಕೆ ಖಚಿತ ಆಧಾರಗಳು ದೊರೆತಿಲ್ಲ.

ಇನ್ನು ತೋಂಟದ ಸಿದ್ಧಲಿಂಗರ ಪ್ರೇರಣೆಯ ಮೇರೆಗೆ ಮುದ್ವೀರಸ್ವಾಮಿಗಳನ್ನು ಬೆಂಗಳೂರಿನಿಂದ ಹಾಗಲವಾಡಿಗೆ ಕರೆಸಿಕೊಂಡ ದೊರೆ ಮುದಿಯಪ್ಪ ನಾಯಕನೆಂದರೆ ೧೭೨೦ ರಿಂದ ೧೭೪೦ ರ ವರೆಗೆ ಆಳಿದ ಒಂಬತ್ತನೆಯ ದೊರೆ ಇಮ್ಮಡಿ ಮುದಿಯಪ್ಪನಾಯಕನಾಗಿದ್ದಾನೆ. ಈತನ ಮಗ ಮುದ್ವೀರಪ್ಪ ನಾಯಕ (೧೭೪೦-೧೭೫೩)ನೇ ಮುದ್ವೀರಸ್ವಾಮಿಗಳ ಕೃಪೆಯಿಂದ ಹುಟ್ಟಿದವನಾಗಿದ್ದಾನೆ.

ಇತರ ಆಕರಗಳಿಂದ ದೊರೆಯುವ ಹೆಚ್ಚಿನ ಸಂಗತಿಗಳೆಂದರೆ ಮುದ್ವೀರಸ್ವಾಮಿ ತನ್ನ `ಶಿವತತ್ವ ಸುಜ್ಞಾನ ಪ್ರದೀಪಿಕೆ' ಯನ್ನು ಮುರಿಗೆಸ್ವಾಮಿಗಳು ಸ್ವಪ್ನದಲ್ಲಿ ಬಂದು ಬರೆಯಲು ಪ್ರೇರಣೆಯಿತ್ತರೆಂದೂ, ಅದರಂತೆ ತಾನು ಸೋಸಲೆ ರೇವಣಾರಾಧ್ಯರ (೧೯೨೩)`ಷಟ್‌ಸ್ಥಲ ಬ್ರಹ್ಮದೀಪಿಕೆ' ಎಂಬ ಸಂಸ್ಕೃತ ಕೃತಿಯನ್ನಾಧರಿಸಿ ಕನ್ನಡದಲ್ಲಿ ಈ ಕೃತಿಯನ್ನು ರಚಿಸಿದೆನೆಂದೂ, ಇದನ್ನು ಹಾಗಲವಾಡಿಯ ಮುದಿಯಾಖ್ಯನಿಗೆ ಹೇಳಿದೆನೆಂದೂ ತಿಳಿಸುತ್ತಾನೆ. ಅಜ್ಞಾತ ಅನುಭಾವಿಯೊಬ್ಬನಿಂದ ರಚಿತವಾದ ಪರಾಕು ಒಂದರಲ್ಲಿ "ಮುರುಗೇಂದ್ರ ಕರಕಂಜ ತುಂಗ ಪರಾಕು ಗುರುವರ ಮುದ್ವೀರಲಿಂಗ ಪರಾಕು" ಎಂದು ಹೇಳುವಲ್ಲಿ ಮುದ್ವೀರಸ್ವಾಮಿ ಮುರಿಗೇಂದ್ರನ ಕರಕಂಜದಲ್ಲಿ ಜನಿಸಿದವ - ಅಂದರೆ ಅವನ ಶಿಷ್ಯ ಎಂದು

ತಿಳಿದು ಬರುತ್ತದೆ. ಈ ಮುರಿಗೇಂದ್ರ ತೋಂಟದ ಸಿದ್ಧಲಿಂಗರ ಶಿಷ್ಯ ಪರಂಪರೆಗೆ ಸೇರಿದ ೧೬೫೭ ರಿರಂದ ೧೭೦೩ ರ ವರೆಗೆ ಇದ್ದ ಮುರಿಗೆ ಶಾಂತವೀರನಾಗಿರಬೇಕು.

ಈ ಎಲ್ಲ ಆಧಾರಾಂಶಗಳ ಹಿನ್ನೆಲೆಯಲ್ಲಿ ಸದ್ಯ ಮುದ್ವೀರಸ್ವಾಮಿಯ ಜೀವನದ ಬಗೆಗೆ ದೊರಕುವ ಸಂಗತಿಗಳನ್ನು ಹೀಗೆ ಸಂಗ್ರಹಿಸಬಹುದು. ಮುದ್ವೀರಸ್ವಾಮಿ ದಕ್ಷಿಣದ ಶಿವಗಂಗೆಯಿಂದ ಬಂದು ಬೆಂಗಳೂರಿನಲ್ಲಿ ನೆಲೆಸಿದ. ಅನಂತರ ಇಮ್ಮಡಿ ಮುದಿಯಪ್ಪ ನಾಯಕನ ರಾಜಧಾನಿ ಹಾಗಲವಾಡಿಗೆ ಹೋಗಿ ರಾಜಗುರುವಾಗಿ ಅಲ್ಲಿಯೇ ಐಕ್ಯನಾದ. ಅಲ್ಲಿ ಈಗಲೂ ಈತನ ಸಮಾಧಿ ಇದೆ. ಆ ಊರಿನ ಗುರುಪಾದಸ್ವಾಮಿಗಳ ಮನೆಯಲ್ಲಿ ಮುದ್ವೀರಸ್ವಾಮಿಯ ಒಂದು ಕಂಚಿನ ಮುಖವಾಡ ಇರುವುದಾಗಿಯೂ ತಿಳಿದುಬಂದಿದೆ.

- ಮೂಲತಃ ಮುರಿಗೆ ಶಾಂತವೀರನ ಶಿಷ್ಯನಾದ ಈತ ಶಿವಗಂಗೆಯ ಸಮೀಪದ ಚೇಳೂರಿನಲ್ಲಿ ವಾಸವಾಗಿದ್ದ ಸಂಗಮದೇವ ಎಂಬವರನ್ನು ತನ್ನ ಜ್ಞಾನಗುರುವನ್ನಾಗಿ (ಶಿಕ್ಷಾಗುರು) ಸ್ವೀಕರಿಸಿದನು. ಈತನ ಹೆಸರನ್ನೇ ತನ್ನ ವಚನ, ಸ್ವರವಚನಗಳಿಗೆ ಅಂಕಿತವನ್ನಾಗಿಟ್ಟು ಕೊಂಡನು.

- ಸೋಸಲೆ ರೇವಣಾರಾಧ್ಯರ ಷಟ್‌ಸ್ಥಲ ಬ್ರಹ್ಮದೀಪಿಕೆ ಎಂಬ ಸಂಸ್ಕೃತ ಕೃತಿಯನ್ನು ಆಧರಿಸಿ ಕನ್ನಡದಲ್ಲಿ `ಶಿವತತ್ವಸುಜ್ಞಾನಪ್ರದೀಪಿಕೆ' ಎಂಬ ಷಟ್ಪದಿ ಕಾವ್ಯವನ್ನು ಮತ್ತು ವಚನ, ಸ್ವರವಚನಗಳನ್ನು ರಚಿಸಿದನು.

- ಮಹಾಯೋಗಿಯೂ, ತತ್ವಜ್ಞಾನಿಯೂ, ಅನುಭಾವಿಯೂ ಆಗಿ ಲೋಕೋದ್ಧಾರ ಕಾರ್ಯವನ್ನು ತನ್ನ ಬೋಧೆ ಮತ್ತು ಕೃತಿರಚನೆಗಳ ಮೂಲಕ ಕೈಕೊಂಡನು.

- ರಾಜಪೂಜಿತನಾದಂತೆ, ಭಕ್ತಗಣ ಪೂಜಿತನೂ, ಲೋಕಪೂಜಿತನೂ ಆಗಿ ತಾರಾವಳಿ, ಪರಾಕುಗಳಂಥ ಕೃತಿಗಳಿಗೆ ವಸ್ತುವಾದನು.

- ಇಮ್ಮಡಿ ಮುದಿಯಪ್ಪನಾಯಕ (೧೭೨೦-೧೭೪೦), ಮುರಿಗೆ ಶಾಂತವೀರ (೧೬೫೭-೧೭೦೩), ಸೋಸಲೆ ರೇವಣಾರಾಧ್ಯ (೧೬೨೩)ಹಾಗೂ ಮುದ್ವೀರ ತಾರಾವಳಿಯಲ್ಲಿ ಉಕ್ತವಾದ ಕಾಲಮಿತಿ(೧೭೬೯)ಯ ಹಿನ್ನೆಲೆಯಲ್ಲಿ ಮುದ್ವೀರಸ್ವಾಮಿ ೧೭ ನೆಯ ಶತಮಾನದ ಉತ್ತರಾರ್ಧದಲ್ಲಿ ಜನಿಸಿ ೧೭೬೯ರಲ್ಲಿ ಐಕ್ಯವಾದನೆಂದು ಹೇಳಬಹುದು. ಐಕ್ಯದ ಕಾಲಮಾತ್ರ ದೊರೆತು ಜನನದ ಕಾಲ ದೊರೆಯದೆ ಇರುವುದರಿಂದ ಈತ ಎಷ್ಟು ವರ್ಷಕಾಲ ಬದುಕಿದ್ದನೆಂದು ಖಚಿತವಾಗಿ ಹೇಳಲು ಸದ್ಯಕ್ಕೆ ಸಾಧ್ಯವಿಲ್ಲ. ಕವಿಚರಿತ್ರೆಕಾರರು ಈತನ ಕಾಲವನ್ನು ೧೭೦೦ ಎಂದು ಊಹಿಸಿದುದು ಸರಿಯಾಗಿದೆ.

ಮುದ್ವೀರಸ್ವಾಮಿಗೆ ಮುದ್ವೀರಯೋಗಿ, ಮುದ್ವೀರಾಖ್ಯಯೋಗಿ, ಮುದ್ವೀರೇಶ, ಮುದ್ವೀರಲಿಂಗ, ಮುದ್ವೀರದೇಶಿಕೋತ್ತಮ, ಶಾಂಭವಯೋಗಿ, ಮುದ್ವೀರವರೇಣ್ಯ ಎಂದು ನಾಮಾಂತರಗಳಿವೆ. ಈತ ತನ್ನನ್ನು ಧೀರಮುದ್ವೀರ, ಗುರು ಮುದ್ವೀರೇಶ ಎಂದು ಅಂಕಿತ ರೂಪದಲ್ಲಿಯೂ ಕರೆದುಕೊಂಡಿದ್ದಾನೆ. ಈಚೆಗೆ ಈತನನ್ನು ಬೆಂಗಳೂರ ಮುದ್ವೀರಸ್ವಾಮಿ, ಹಾಗಲವಾಡಿ ಮುದ್ವೀರಸ್ವಾಮಿ ಎಂದು ಕರೆಯಲಾಗಿದೆ. 'ಮುದ್ವೀರಸ್ವಾಮಿ' ಈತನ ನಿಜನಾಮವಾದರೆ, ಯೋಗಿ, ಗುರು, ಈಶ, ಲಿಂಗ, ದೇಶಿಕೋತ್ತಮ, ಶಾಂಭವಯೋಗಿ ಎಂಬುವು ಆತನ ವ್ಯಕ್ತಿವೈಶಿಷ್ಟ್ಯ, ಗುಣವಿಶೇಷಗಳನ್ನು ಎತ್ತಿತೋರಲು ಬಳಸಿದ ವಿಶೇಷಣಗಳಾಗಿವೆ. ಬೆಂಗಳೂರು ಹಾಗೂ ಹಾಗಲವಾಡಿ ಎಂಬುವು ಆತನ ಕಾರ್ಯಕ್ಷೇತ್ರ ಅಂದರೆ ಆತ ನೆಲೆಸಿದ್ದ ಸ್ಥಳಗಳನ್ನು ಸೂಚಿಸುತ್ತವೆ. ಆತ ಯೋಗಿಯಾಗಿ, ಗುರುವಾಗಿ, ಸ್ವಾಮಿಯಾಗಿ, ಈಶನೆನಿಸಿ ಕೊನೆಗೆ ಲಿಂಗವೇ ಆಗಿ ಲೋಕಕಲ್ಯಾಣ ಕಾರ್ಯಮಾಡಿದ, ಬೆಂಗಳೂರು ಮತ್ತು ಹಾಗಲವಾಡಿ ಆತನ ಪ್ರಮುಖ ಕಾರ್ಯ ಕ್ಷೇತ್ರಗಳಾಗಿದ್ದವು ಎಂಬುದು ಈ ಹೆಸರುಗಳಿಂದ ವ್ಯಕ್ತವಾಗುವ ಒಟ್ಟು ಅಭಿಪ್ರಾಯ .

ಮುದ್ವೀರಸ್ವಾಮಿ ತನ್ನನ್ನು "ಶ್ರೀಮದ್ ವೇದಶಿರಃ ಶಿವಾಗಮ ಪ್ರಭೃತಿ ಪ್ರಭೂತ ಪುರಾತನ ಗೀತಾನವದ್ಯ ಪ್ರವೀರಣ ಶ್ರೀವೀರಶೈವ ಷಟ್‌ಸ್ಥಲ ಸ್ಥಾಪನಾಚಾರ್ಯವರ್ಯ"[೧] ಎಂದು ಕರೆದುಕೊಂಡಿದ್ದಾನೆ. ಇದರಿಂದ ಈತ ವೇದ, ಶಿವಾಗಮ, ಪುರಾತನರ ವಚನ, ಗೀತಗಳನ್ನು ಆಳವಾಗಿ ಅಧ್ಯಯನಮಾಡಿ, ವೀರಶೈವ ಷಟ್‌ಸ್ಥಲ ಸಿದ್ಧಾಂತವನ್ನು ಆತ್ಮಸಾತ್ ಮಾಡಿಕೊಂಡು ಶ್ರೇಷ್ಠ ಅನುಭಾವಿಯಾಗಿ, ಆ ಅನುಭಾವವನ್ನು ಬೋಧೆಯ ಮೂಲಕ ಕೃತಿಗಳ ಮೂಲಕ ಲೋಕಕ್ಕೆ ಹಂಚಿದನೆಂದು ತಿಳಿದುಬರುತ್ತದೆ.

ಕೃತಿಗಳು :

ಮುದ್ವೀರ ಸ್ವಾಮಿ ರಚಿಸಿದ ಕೃತಿಗಳು ಈಗ ಮೂರು ಪ್ರಕಾರಗಳಲ್ಲಿ ದೊರೆಯುತ್ತವೆ ೧. ಶಿವತತ್ವಸುಜ್ಞಾನ ಪ್ರದೀಪಿಕೆ ಎಂಬ ಷಟ್ಪದಿ ಕಾವ್ಯ. ೨. ಸ್ವರವಚನ ೩. ವಚನ ಇವುಗಳ ಸ್ಥೂಲ ಪರಿಚಯ ಕೆಳಗಿನಂತಿದೆ:

'ಶಿವತತ್ವಸುಜ್ಞಾನ ಪ್ರದೀಪಿಕೆ' ಗೆ[೨] 'ಶಿವಸುಜ್ಞಾನ ದೀಪಿಕೆ' 'ಶಿವತತ್ವಸುಜ್ಞಾನ ದೀಪಿಕೆ' ಎಂದು ಕರೆಯಲಾಗುತ್ತದೆ. ಕೃತಿ ನಾಲ್ಕು ಅಧ್ಯಾಯಗಳಲ್ಲಿ ಒಡೆದುಕೊಂಡಿದೆ.

---

೧. ಶಿವತತ್ವಸುಜ್ಞಾನ ಪ್ರದೀಪಿಕೆಯ ಪ್ರತಿ ಉಪದೇಶದ ಅಂತ್ಯಗದ್ಯದಲ್ಲಿ ಈ ಹೇಳಿಕೆ ಬರುತ್ತದೆ. ಸೋಸಲೆ ರೇವಣಾರಾಧ್ಯನೂ ತನ್ನನ್ನು ಹೀಗೆಯೇ ವಿಶೇಷಿಸಿ ಕೊಂಡಿದ್ದಾನೆ.

೨. ಅಪ್ರಕಟಿತವಾದ ಇದರ ಹಸ್ತಪ್ರತಿ. ಕನ್ನಡ ಅಧ್ಯಯನ ಪೀಠದ ಭಾಂಡಾರದಲ್ಲಿವೆ (ತಾ.ಪ್ರ. ೫೮೬)

ಅಧ್ಯಾಯಗಳಿಗೆ 'ಉಪದೇಶ' ಎಂದು ಕರೆಯಲಾಗಿದೆ. ಕ್ರಮವಾಗಿ ಅವು ಜ್ಞಾನಪಾದ, ಕ್ರಿಯಾಪಾದ, ಚರ್ಯಾಪಾದ ಮತ್ತು ಯೋಗಪಾದ ಎಂದು ಹೆಸರುಪಡೆದಿವೆ. ಪ್ರಥಮ ಉಪದೇಶದಲ್ಲಿ ತತ್ವಸ್ವರೂಪ ವಿಚಾರ ಬಂದರೆ, ಮುಂದಿನ ಮೂರು ಉಪದೇಶಗಳಲ್ಲಿ ವೀರಶೈವ ಸಮಯವಿಚಾರ, ಯೋಗ, ಷಟ್‌ಸ್ಥಲ ಬ್ರಹ್ಮೋಪದೇಶವಿಚಾರ ಮತ್ತು ಲಿಂಗಾಂಗ ಸಂಬಂಧ ವಿಚಾರ ಅಳವಟ್ಟಿವೆ. ೫೦೮ ವಾರ್ಧಕ ಷಟ್ಪದಿ ಹಾಗೂ ೪೪೫ ಸಂಸ್ಕೃತ ಸಾಕ್ಷಿ ಶ್ಲೋಕಗಳಲ್ಲಿ ಈ ವಿಷಯ ವಿಸ್ತೃತಗೊಂಡಿದೆ. ಆರಂಭದಲ್ಲಿ ಶ್ಲೋಕ, ನಂತರ ಆ ಶ್ಲೋಕದ ವಿಷಯುವನ್ನು ವಿವರಿಸುವ ಷಟ್ಪದಿ - ಹೀಗೆ ಕೃತಿ ಸಾಗಿ ನಡೆದಿದೆ.[1]

ಈ ಕೃತಿಯ ಆಕರ ಕೆಳಗಿನ ಪದ್ಯದಲ್ಲಿ ಉಕ್ತವಾಗಿದೆ :

ಧಾರುಣಿಯೊಳಧಿಕವಹ ಸ್ವಾಸಲಿ ಪುರವಾಸ
ಶ್ರೀರೇವಣಾರಾಧ್ಯರಿಂದೆ ಮಾಡಲುಪಟ್ಟು
ದಾರಮ್ಯತರವಾದ ಷಟ್‌ಸ್ಥಲ ಬ್ರಹ್ಮ ದೀಪಿಕೆಯೆಂಬ ಸಂಗ್ರಹವದ।
ಆರೈದು ಬಳಿಕಲಾ ದೀಪಿಕಾ ಸಂಗ್ರಹದ
ಸಾರ ಗ್ರಂಥಾರ್ಥವನೆ ಕನ್ನಡ ಪದಗಳಿಂ
ಸೇರುವೆಯ ಮಾಡಿ ವರದಪೆನು ಶಿವಜ್ಞಾನ ದೀಪಿಕೆಯ ನಲವಿನಿಂದೆ ॥ (೧-೮)

ಇದರಿಂದ ಇದು ಸೋಸಲೆ ರೇವಣಾರಾಧ್ಯನು ಸಂಸ್ಕೃತದಲ್ಲಿ ರಚಿಸಿದ ' ಷಟ್‌ಸ್ಥಲ ಬ್ರಹ್ಮ ದೀಪಿಕೆ' ಎಂಬ ಕೃತಿಯ ಕನ್ನಡ ಸಾರಸಂಗ್ರಹರೂಪ ಎಂದು ತಿಳಿದುಬರುತ್ತದೆ. ಈ ಕೃತಿರಚನೆಗೆ ಪ್ರೇರಣೆ ನೀಡಿದವನು ವೀರಶೈವ ಷಟ್‌ಸ್ಥಲ ಸ್ಥಾಪನಾಚಾರ್ಯನೆನಿಸಿದ ಗುರು ಮುರಿಗೆಸ್ವಾಮಿ, ಕೇಳಿದವನು ಗುರುಃಭಕ್ತಗಣಶಿರೋಗ್ರಣಿಯೆನಿಸಿದ ಹಾಗಲವಾಡಿಯ ಮುದಿಯಾಖ್ಯ-

ಉರು ವೀರಶೈವ ಷಟಸ್ಥಲ ಸ್ಥಾಪನಾಚಾರ್ಯವರ್ಯ
'ಮುರಿಗೆಸ್ವಾಮಿಗಳ್ಸ್ವಪ್ನದೊಳ್ ಕರುಣದಿಂದೆ

---

೧. ಬಹುಶ: ಈ ಕೃತಿಗೆ ಸೋಸಲೆ ರೇವಣಾರಾಧ್ಯನ 'ಶಿವಜ್ಞಾನ ಪ್ರದೀಪಿಕೆ' ಅಥವಾ ಪರಮುಕ್ತಿ ಪ್ರದೀಪಿಕೆ ಎಂಬುದು ಪ್ರೇರಣೆನೀಡಿರಬೇಕು. ಅದರಲ್ಲಿ ಆತ ಆರಂಭದಲ್ಲಿ ಒಂದು ಶ್ಲೋಕ, ನಂತರ ಕರಸ್ಥಲ - ವೀರಣ್ಣೊಡೆಯನ 'ದೂಯಾಭ್ರಾಂತಿ ನಿರಸನ' ಎಂಬ ಕೃತಿಯ ಒಂದೊಂದು ಷಟ್ಪದಿಗಳನ್ನು ಜೋಡಿಸುತ್ತ ಸಾಗಿದ್ದಾನೆ. ಅದೇ ಮಾದರಿಯ ಕೃತಿ ಇದಾಗಿದೆ.

ಪ್ರಸನ್ನವಾಗಲಮಲತಾಂಬೂಲ ಪ್ರಸಾದವಿತ್ತು ತರಳ ನೀ ಬದುಕು ಬದುಕೆಂದು
ಶಿರದೊಳಗಭಯಕರವಿರಿಸಿ ಮನ್ಮನೋಂಬುಜ
ಚಾರು ಕರ್ಣಕಾಂತರದೊಳಂತರ್ಭಾವವಾದನಂ
ತರದೊಳ್......... ॥ (೧-೬)

ಪರಮ ಶುದ್ಧಪ್ರಸಾದ ಪ್ರಣವ ಬೀಜವನು
ನಿರುತಲುರೆ ಹೊಂದಿರ್ಪ ವರರಕ್ಷಿಪಮಲತರ
ವರ ನಾಮಧೇಯದಿಂದೆಸೆವ ಹಾಗಲವಾಡಿ ಘನಪುರವರಾಧೀಶ್ವರ
ಗುರು ಭಕ್ತಗಣ ಶಿರೋಗ್ರಣಿಯೆನಿಪ ಮುದಿಯಾಖ್ಯ
ಧರಣಿಪಾಲಕನು ಕೇಳಿದ ವಾಕ್ಯಕುತ್ತರವ
ನಿರವಿಸಿದಪೆಂ ಸಕಲಭಕ್ತಿ ಮಾಹೇಶ್ವರರ ಪಾದಗಳ ನೆನೆದು ಮುದದಿಂ ॥ (೧-
೧೦)

ಈ ಕೃತಿಯ ವಸ್ತು ಷಟಸ್ಥಲ ತತ್ವ ನಿರ್ಣಯ. ಇದನ್ನು ವೇದ, ಆಗಮ, ಉಪನಿಷತ್ತುಗಳಲ್ಲಿ ಅಡಕವಾದ ಗ್ರಂಥಗಳ ಆಧಾರದಿಂದ ನಿರೂಪಿಸಲಾಗಿದೆ :

ವೇದಾಗಮೋಪನಿಷದಗಳೊಳ್ಪ ಚುರತರ
ವಾದ ಮೂವತ್ತಾರು ತತ್ವಗಳಿಂಗಿತವ
ಸಾದರದಿ ಪಂಚವಿಧ ಷಟ್‌ಸ್ಥಲದ ನಿರ್ಣಯವನತಿ ಭಕ್ತಯಿಂದ ನಿಮ್ಮ
ಪಾದಾರವಿಂದಗಳಿಗೆರಗಿ ಕೇಳುತ್ತಿಹೆನು
ನಾದಮಯ ಗುರುವೆ ಪೇಳೆಂದು ಕೇಳ್ಮುದಿಯ
ಮೇದಿನಿಯಪತಿಗೊಲಿದು ಪೇಳ್ವಪೆನು ಶಿವತತ್ವ ಸುಜ್ಞಾನದೀಪಿಕೆಯಿದಂ ॥ (೧-೧೧)

ಕೃತಿಯ ಆದಿಯಲ್ಲಿ ಗುರುಸಂಗಮೇಶ್ವರ, ಶಿವ, ಪಾರ್ವತಿ, ಗಣವರರು, ನಂದೀಶ, ವೀರೇಶ, ವಿಘ್ನೇಶ, ಷಣ್ಮುಖ, ಭೃಂಗೀಶ, ಪ್ರಭುಸ್ವಾಮಿ, ಬಸವೇಶ, ಚನ್ನಬಸವೇಶ, ಮರುಳ ಶಂಕರದೇವ, ಮಾಚಿದೇವಾರ್ಯ, ಶಿವವರಯೋಗಿ ಸಿದ್ಧರಾಮಯ್ಯ ಹಾಗೂ ಹರಗಣ ಸಮೂಹವನ್ನು ಸ್ತುತಿಸಲಾಗಿದೆ. ೧೨ ನೆಯ ಪದ್ಯದಿಂದ ತತ್ವನಿರೂಪಣೆ ಆರಂಭವಾಗುತ್ತದೆ. ಬಸವಾದಿ ಶರಣಪ್ರಣೀತ ಷಟ್‌ಸ್ಥಲತತ್ವವನ್ನು ಇಲ್ಲಿ ಸರಳ ಷಟ್ಪದಿಯಲ್ಲಿ ಆಗಮೋಕ್ತ ಆಧಾರಗಳ ಹಿನ್ನೆಲೆಯಲ್ಲಿ ನಿರೂಪಿಸಲಾಗಿದೆ. ಕೃತಿ ಪ್ರಶ್ನೋತ್ತರ ರೂಪದಲ್ಲಿ ಸಾಗಿದೆ. 'ತರಳ' ಎಂದು ಸಂಬೋಧಿಸುತ್ತ ಗಹನವಾದ ವಿಷಯವನ್ನು ಆತ್ಮೀಯ ಶೈಲಿಯಲ್ಲಿ ವಿವರಿಸಲಾಗಿದೆ.

ಹೀಗಾಗಿ ವೀರಶೈವ ತತ್ತ್ವಪ್ರಧಾನ ಕೃತಿಗಳಲ್ಲಿ ಇದಕ್ಕೊಂದು ಗಮನಾರ್ಹ ಸ್ಥಾನ ಮೀಸಲಾಗಿದೆ. ಸದ್ಯ ಇದರ ಒಂದು ಪ್ರತಿ ಮಾತ್ರ ಕರ್ನಾಟಕ ವಿಶ್ವವಿದ್ಯಾಲಯ ಕನ್ನಡ ಅಧ್ಯಯನ ಪೀಠದ ಹಸ್ತಪ್ರತಿ ಭಾಂಡಾರದಲ್ಲಿದ್ದು, ಇದು ಪ್ರಕಟವಾದರೆ ಮುದ್ವೀರಸ್ವಾಮಿಯ ಆಧ್ಯಾತ್ಮ ತತ್ತ್ವ ಪರಿಣತಿ ಹಾಗೂ ಕವಿತ್ವ ಶಕ್ತಿಯ ಮೇಲೆ ವಿಶೇಷ ಬೆಳಕು ಬೀಳುವುದರಲ್ಲಿ ಸಂದೇಹವಿಲ್ಲ.

ಮುದ್ವೀರಸ್ವಾಮಿಯ ರಚನೆಗಳಲ್ಲಿ ಸ್ವರವಚನಗಳಿಗೆ ಪ್ರಥಮ ಸ್ಥಾನ. ಬಸವಾದಿ ಶರಣರಿಂದ ಆರಂಭವಾಗಿ ನೂರೊಂದು ವಿರಕ್ತರ ಕಾಲದಲ್ಲಿ ವಿಶೇಷವಾಗಿ ಸೃಷ್ಟಿಗೊಂಡು, ನಿಜಗುಣಾದಿ ತತ್ತ್ವಜ್ಞಾನಿಗಳಿಂದ ಮಹಾಪೂರವಾಗಿ ಹರಿದು ಬಂದ ಈ ಸಾಹಿತ್ಯ ಪ್ರಕಾರಕ್ಕೆ ಮುದ್ವೀರಸ್ವಾಮಿಯೂ ವಿಶಿಷ್ಟ ಕಾಣಿಕೆಯನ್ನು ಸಲ್ಲಿಸಿದ್ದಾನೆ. ಈಗ ಈತನ ೧೧೧ ಸ್ವರವಚನಗಳು ಲಭ್ಯವಾಗಿದ್ದು,[೧] ಅವುಗಳಲ್ಲಿ ಮುದ್ವೀರಸ್ವಾಮಿಯ ಪ್ರತಿಭೆ, ಅನುಭಾವ, ತತ್ತ್ವನಿಷ್ಠೆ, ಲೋಕಾನುಭವ ದಟ್ಟವಾಗಿ ಕೆನೆಗಟ್ಟಿನಿಂತು, ಈತನೊಬ್ಬ ಶ್ರೇಷ್ಠಮಟ್ಟದ ಕವಿಹೃದಯದ ಅನುಭಾವಿ ಎಂಬುದನ್ನು ಎತ್ತಿ ಹೇಳುತ್ತವೆ. ಅವುಗಳಲ್ಲಿ ಅಳವಟ್ಟ ವಿಷಯ ವೈವಿಧ್ಯ, ರೂಪವೈವಿಧ್ಯ, ರಚನಾ ಬಂಧುರತೆ, ಭಾವದ ಉತ್ಕಟತೆ, ಗೇಯತೆ, ನಿರರ್ಗಳತೆ ಹಾಗೂ ನಿರಾಡಂಬರ ಶೈಲಿಯ ಸುಭಗತೆಗಳು ಮುದ್ವೀರಸ್ವಾಮಿ ಮೇಲ್ಮಟ್ಟದ ಅನುಭಾವಿ ಕವಿ ಎಂಬುದನ್ನು ಸಾಬೀತು ಪಡಿಸುತ್ತವೆ.

ಮುದ್ವೀರಸ್ವಾಮಿ ಶ್ರೇಷ್ಠಮಟ್ಟದ ಶಿವಯೋಗಿಯಾದುದರಿಂದ ಅವನ ಸ್ವರವಚನಗಳಲ್ಲಿ ಯೋಗತತ್ತ್ವದ ವಿಚಾರ, ಅದರಲ್ಲಿಯೇ ಶಾಂಭವಯೋಗದ ವಿಚಾರ ಹೆಚ್ಚಾಗಿ ಅಳವಟ್ಟಿರುವುದು ಕಂಡುಬರುತ್ತದೆ. ಕ.ವಿ.ವಿ. ಕನ್ನಡ ಸಂಶೋಧನ ಸಂಸ್ಥೆಗೆ ಸೇರಿದ ಹಸ್ತಪ್ರತಿಯಲ್ಲಿ ಸಂಗ್ರಹವಾಗಿರುವ ಈತನ ಸ್ವರವಚನಗಳಿಗೆ ' ಶಾಂಭವಜ್ಞಾನ ಸುಪ್ರಕಾಶಿಕೆ ' ಎಂದು ಕರೆದಿರುವುದು, ಅವುಗಳ ಮುಖ್ಯ ಆಶಯ ಶಾಂಭವಯೋಗ ಸ್ವರೂಪ ನಿರೂಪಣೆ ಎಂಬುದನ್ನು ಸಮರ್ಥಿಸುತ್ತದೆ. ಶಾಂಭವಯೋಗದ ಜೊತೆಗೆ ಇದರಲ್ಲಿ ಷಟ್‌ಸ್ಥಲ, ಅಷ್ಟಾವರಣ, ಪಂಚಾಚಾರ, ಮುದ್ರೆಗಳು ಪದಾರ್ಥತ್ರಯ, ಅರ್ಪಿತತ್ರಯ, ಮಲತ್ರಯ, ಆಧಾರತ್ರಯ, ತಾರಕತ್ರಯ, ಅಂಗಲಿಂಗತ್ರಯ, ಅಷ್ಟಾಂಗಯೋಗ, ಶಿವಯೋಗ, ಪಂಚಾಕಾಶ, ಪಂಚಸೂತಕ ಮೊದಲಾದ ವಿಷಯಗಳೂ, ವಿವೇಚಿತವಾಗಿವೆ. ಕೆಲವು ಸ್ವರಗಳಲ್ಲಿ ಲೋಕನೀತಿ, ಶಿವಸ್ತುತಿ, ಶರಣಸ್ತುತಿಗಳಿಗೂ ಆಸ್ಪದ ದೊರೆತಿದೆ.

ಈ ಸ್ವರವಚನಗಳ ಬಟ್ಟು ಸ್ವರೂಪ ವೈಶಿಷ್ಟ್ಯಗಳನ್ನು ಕೆಳಗಿನಂತೆ ಗುರುತಿಸಬಹುದು.

೧. ಅತಿ ಕಡಿಮೆ ಎಂದರೆ ೩ ನುಡಿ, ಅತಿ ಹೆಚ್ಚೆಂದರೆ ೬೩ ನುಡಿಗಳಿರುವುದು; ಅವುಗಳೊಂದಿಗೆ ೫, ೭, ೯, ೧೧, ೧೩ - ಹೀಗೆ ಬೆಸ ಸಂಖ್ಯೆಯಲ್ಲಿ ನುಡಿಗಳು ಇರುವುದು; ಪ್ರತಿ ಸ್ವರವಚನದ ಆದಿಯಲ್ಲಿ ಹೆಚ್ಚಾಗಿ ಎರಡು, ಕಡಿಮೆ ಪ್ರಮಾಣದಲ್ಲಿ ಒಂದು, ಮೂರು, ನಾಲ್ಕು ಪಾದಗಳ ಪಲ್ಲವಿ ಇರುವುದು ಇವುಗಳ ಬಾಹ್ಯ ಸ್ವರೂಪ.

---

೧. ಹಾಗಲವಾಡಿ ಮುದ್ವೀರಸ್ವಾಮಿಯ ಸ್ವರವಚನಗಳು ಕೃತಿಯಲ್ಲಿ ೧೦೭; ಈಚೆಗೆ ಬಿಡಿಯಾಗಿ ದೊರೆತವು ೪.

೨. ಎಲ್ಲ ಸ್ವರವಚನಗಳು 'ಗುರುಸಂಗ' ಎಂಬ ಅಂಕಿತವನ್ನು ಹೊಂದಿವೆ. ಹೆಚ್ಚಿನ ಸಂಖ್ಯೆಯ ಸ್ವರವಚನಗಳಿಗೆ ಅಂಕಿತ ಅಂತ್ಯದ ನುಡಿಯಲ್ಲಿದ್ದರೆ, ಎರಡು ಸ್ವರವಚನಗಳಲ್ಲಿ ಮಾತ್ರ ಅದು ಪಲ್ಲವಿಯಲ್ಲಿ ಕಾಣಸಿಕೊಂಡಿದೆ. 'ಗುರುಸಂಗ' ಎಂಬುದು ಅಧಿಕ ಸಂಖ್ಯೆಯ ಸ್ವರವಚನಗಳಲ್ಲಿ ಉಕ್ತವಾಗಿದ್ದರೆ, ಕೆಲವರಲ್ಲಿ ಸಂಗ, ಸಂಗಮೇಶ, ಗುರುಮುದ್ದಿರೇಶ, ಇಷ್ಟಲಿಂಗ ಎಂಬುವು ಬಳಕೆಯಾಗಿವೆ.

೩. ಛಂದೋರೂಪದ ದೃಷ್ಟಿಯಿಂದ ವೃತ್ತ, ಷಟ್ಪದಿ, ಸಾಮಾನ್ಯ, ಏಳೆ, ಚೌಪದಿ ಮತ್ತು ನಾಲ್ಕು ಪಾದದ ವಿಶಿಷ್ಟ ದೇಶೀ ಮಟ್ಟುಗಳು ಕಂಡುಬರುತ್ತವೆ.

೪. ಹೆಚ್ಚಿನ ಸಂಖ್ಯೆಯ ಸ್ವರವಚನಗಳಿಗೆ ರಾಗ ತಾಳ ಸೂಚನೆಯಿದೆ. ಸು. ೨೮ರಾಗಗಳು ೩ ವಿಧದ ತಾಳಗಳ ಹೆಸರು ಉಕ್ತವಾಗಿದು, ಮುದ್ದೀರಸ್ವಾಮಿ ಸಂಗೀತಜ್ಞನೂ ಆಗಿದ್ದನೆಂಬುದನ್ನು ಪ್ರಕಟಪಡಿಸುತ್ತವೆ.

೫. ಅಧಿಕ ಸಂಖ್ಯೆಯ ಸ್ವರವಚನಗಳು ತತ್ವಪ್ರಧಾನವಾಗಿದ್ದರೆ, ಕೆಲವು ಶರಣಸತಿ ಲಿಂಗಪತಿ ಭಾವವನ್ನು ಅಳವಡಿಸಿಕೊಂಡು ಸರಳಸುಂದರವಾಗಿವೆ. ಮೃದುಮಧುರಭಾವ, ಆತ್ಮೀಯ ಶೈಲಿ ಇಲ್ಲಿ ನೆಲೆನಿಂತಿದೆ. ಮತ್ತೆ ಕೆಲವು ಲೋಕನೀತಿಯನ್ನು ನಿರೂಪಿಸುತ್ತಿದ್ದು, ಮುದ್ದೀರಸ್ವಾಮಿಯ ಲೋಕಾನುಭವವನ್ನು ಪ್ರತಿಬಿಂಬಿಸುತ್ತವೆ.

೬. ವಸ್ತುವಿಗನುಗುಣವಾಗಿ ತಾತ್ವಿಕ ಪದಗಳಲ್ಲಿ ಭಾಷೆ ಬಂಧುರವಾಗಿದ್ದರೆ. ನೀತಿ ಬೋಧಕ ಮತ್ತು ಮಧುರಭಕ್ತಿಯಿಂದ ಕೂಡಿದ ರಚನೆಗಳಲ್ಲಿ ಅದು ಸರಳವಾಗಿದೆ. ಕೆಲವು ಬೆಡಗಿನ ವಚನಗಳೂ ಇವೆ. ಒಟ್ಟಿನಲ್ಲಿ ಶಿಷ್ಟ ಮತ್ತು ದೇಶಿ ಭಾಷೆಗಳ ಸಮನ್ವಯ ಇಲ್ಲಿದೆ.

೭. ಸಾಹಿತ್ಯ ರೂಪದ ದೃಷ್ಟಿಯಿಂದ ಗಮನಿಸಿದರೆ, ಸ್ತೋತ್ರ, ಜೋಗುಳ, ಸುದ್ದಿ, ಪರಾಕು, ಉಪ್ಪವಡಿಸುವ ಹಾಡು, ಚಂದಮಾಮಾ, ತಾಲೆಲೆ, ಮಂಗಳಾರತಿ ಮೊದಲಾದವು ಸಮಾವೇಶಗೊಂಡಿವೆ.

೮. ಎರಡು ಸ್ವರವಚನಗಳು ಸಂಸ್ಕೃತ ಭಾಷೆಯಲ್ಲಿದ್ದು ಮುದ್ದೀರಸ್ವಾಮಿಯ ಸಂಸ್ಕೃತ ಭಾಷಾ ಪ್ರಭುತ್ವಕ್ಕೆ ನಿದರ್ಶನವೆನಿಸಿವೆ.

ಹೀಗೆ ಧರ್ಮತತ್ವ, ಸಾಹಿತ್ಯ ಸಂಗೀತ, ಛಂದಸ್ಸುಗಳಿಗೆ ಈ ಸ್ವರವಚನಗಳು ವಿಶಿಷ್ಟ ಕಾಣಿಕೆ ನೀಡಿವೆ. ಇವುಗಳ ಮೂಲಕ ಮುದ್ದೀರಸ್ವಾಮಿ ವೀರಶೈವತತ್ವ, ಸಾಹಿತ್ಯ-ಸಂಸ್ಕೃತಿ-ಸಂಗೀತಗಳಿಗೆ ಅಮೂಲ್ಯವಾದ ಕೊಡುಗೆಯನ್ನು ಕೊಟ್ಟು ಹಾಗಲವಾಡಿ ಅರಸುಮನೆತನ ಆಶ್ರಿತ ಸಾಹಿತಿಗಳಲ್ಲಿಯೇ ಅಗ್ರಗಣ್ಯನೆನಿಸಿದ್ದಾನೆ.

ಮಾದರಿಗಾಗಿ ಇಲ್ಲಿ ಒಂದು ಸ್ವರವಚನವನ್ನು ಉದಾಹರಿಸಬಹುದು:

ಉಣ್ಣಲಾಗದು ಉಣ್ಣದಿರಲಾಗದು। ಮತ್ತೆ
ಹೆಣ್ಣುಗಳ ಸಂಗವನ್ನು ಮಾಡಲಾಗದು, ಮಾಡದಿರಲಾಗದು। ಪಲ್ಲ।

೧

ಉರ್ವಿಯ ಸೊಗಸ ತಾನು ತಿಳಿಯಲಾಗದು। ಬಳಿ
ಕುರ್ವಿಯ ಸೊಗಸ ತಾನು ತಿಳಿಯದಿರಲಾಗದು

ಸರ್ವರ ಸಂಗತಿಯನು ಮಾಡಲಾಗದು । ಬಳಿ
ಕೊರ್ವನೆವೊಂದೆಡೆಯೊಳಿರಲಾಗದು ॥

೨

ಹೆತ್ತ ಮಗನ ತಾನು ನೆರೆಯಲಾಗದು । ಮತ್ತೆ
ಹೆತ್ತ ಮಗನ ನೆರೆಯದಿರಲಾಗದು
ಸತ್ತವರ ಮಾತು ತಾನು ಕೇಳಲಾಗದು । ಮತ್ತೆ
ಸತ್ತವರ ಮಾತು ಕೇಳದಿರಲಾಗದು ॥

೩

ಲಿಂಗಪೂಜೆಯ ತಾನು ಮಾಡಲಾಗದು । ಮತ್ತೆ
ಲಿಂಗಪೂಜೆಯನ್ನು ಮಾಡದಿರಲಾಗದು
ಕಂಗಳವೆಳಗ ತಾನು ಕಳೆಯಲಾಗದು । ಗುರು
ಸಂಗನೊಳು ಬೆರೆವಡಿನಿತಿಲ್ಲದಾಗದು ॥[೧]

ಸದ್ಯಕ್ಕೆ ಮುದ್ವೀರಸ್ವಾಮಿ ರಚಿಸಿದ ಒಂದೇ ಒಂದು ವಚನ ದೊರೆತಿದ್ದು ಅದರಲ್ಲಿ ಶಾಂಭವಯೋಗದ ವಿವರ ಬಂದಿದೆ.[೨]

೩

ಹಾಗಲವಾಡಿ ಅರಸರ ಇತರ ಸಾಹಿತ್ಯ ಘೋಷಣೆಯ ಚಟುವಟಿಕೆಗಳಲ್ಲಿ ಇಮ್ಮಡಿ ಮುದಿಯಪ್ಪ ನಾಯಕನು ವೆಂಕಟಸುಧಿ ಎಂಬ ವಿದ್ವಾಂಸನಿಂದ ಷಡಕ್ಷರ ದೇವನ ಕವಿಕರ್ಣರಸಾಯನ ಎಂಬ ಸಂಸ್ಕೃತ ಕೃತಿಗೆ ಟೀಕೆ ಬರೆಸಿದುದು;[೩] ಹಿರಿಮುದಿಯಪ್ಪ ನಾಯಕ ಸಂಪಾದನೆ ಸಮಯದ ಅನುಭಾವಿಗಳಿಗೆ ಗೌರವಪೂರ್ವಕವಾಗಿ ಆಶ್ರಯವಿತ್ತು, ಸಂಪಾದನೆಯ ಸಿದ್ಧವೀರಣ್ಣನ ಅಪ್ಪಣೆಯ ಮೇರೆಗೆ ಹಾಗಲವಾಡಿಯಲ್ಲಿ ಮಠವನ್ನು ಕಟ್ಟಿಸಿಕೊಟ್ಟು ವಚನ ಸಂಕಲನ, ಸಂಪಾದನೆ ಕಾರ್ಯಗಳಿಗೆ ಪ್ರೋತ್ಸಾಹವಿತ್ತುದು;[೪] ಇಮ್ಮಡಿ ಮುದಿಯಪ್ಪನಾಯಕ 'ಕೃಷ್ಣಯ್ಯ' ಎಂಬ ಹಸ್ತಪ್ರತಿ ಲಿಪಿಕಾರನಿಗೆ ಆಶ್ರಯವಿತ್ತು 'ಪುರಾತನರ ಶಾಸ್ತ್ರ' ಎಂಬ ಕೃತಿಯನ್ನು ಪ್ರತಿ ಮಾಡಲು ಆದೇಶ ನೀಡಿದುದು ಮುಖ್ಯವಾದ ಕಾರ್ಯಗಳಾಗಿವೆ.

---

೧. ಹಾಗಲವಾಡಿ ಮುದ್ವೀರಸ್ವಾಮಿಯ ಸ್ವರವಚನಗಳು: ಪು. ೬೩

೨. ನೋಡಿ 'ಹಾಗಲವಾಡಿ ಮುದ್ವೀರಸ್ವಾಮಿಯ ಸ್ವರವಚನಗಳು' ಸಂ. ಡಾ. ವೀರಣ್ಣ ರಾಜೂರ, ಪ್ರ. ವೀರಶೈವ ಅಧ್ಯಯನಸಂಸ್ಥೆ, ಜಗದ್ಗುರು ತೋಂಟದಾರ್ಯಮಠ, ಗದಗ. ಪು. ೧೦೨-೧೦೫

೩. ಕವಿಕರ್ಣರಸಾಯನ ಸಂ.ಟೀ.,ಸಂ. ವಿದ್ವಾನ್ ಎಂ.ಎಸ್. ಬಸವರಾಜಯ್ಯ. ಪ್ರಸ್ತಾವನೆ

೪. ಶ್ರೀಮದನಾದಿ ಅಲ್ಲಮ ಪ್ರಭು-ಬುದ್ಧಯ್ಯ ಪುರಾಣ, (೧೯೩೬) ಪು.೧೧೪, ೧೪೦

ಕೃಷ್ಣಯ್ಯ ಬರೆದ ಹಸ್ತಪ್ರತಿ ಪ್ರಶಸ್ತಿ ಹೀಗಿದೆ.

"ಸ್ವಸ್ತಿ ಶ್ರೀ ವಿಜಯಾಭ್ಯುದಯ ಸಾಲಿವಾಹನ ಶಕ ವರುಷಂಗಳು... ನೆಯ ಕ್ರೋಧ ನಾಮ ಸಂವತ್ಸರದ ಭಾದ್ರಪದ ಹನ್ನೆರಡರಲು ಮುದಿಯಪ್ಪ ನಾಯ್ಕರ ಬಂಟನಾದಂಥ ಗಡೆಯ ಪಾಪಯ್ಯನ ಸುಪುತ್ರ ಕೃಷ್ಣಯ್ಯನು ಬರೆದು ಸಮರ್ಪಿಸಿದ ಪೂರ್ವ ಪುರಾತನರ ಶಾಸ್ತ್ರದ ಪುಸ್ತಕ..."[೧]

೪

ಹಾಗಲವಾಡಿ ಅರಸರ ಮತ್ತೊಂದು ಪ್ರಮುಖ ಸಾಹಿತ್ಯ ಪೋಷಣೆಯ ಕಾರ್ಯವೆಂದರೆ ಸಂಪಾದನ ಸಮಯದ ಅನುಭಾವಿಗಳನ್ನು ಗೌರವಿಸಿ, ಅವರಿಗೆ ಆಶ್ರಯವಿತ್ತು ವಚನ ಸಾಹಿತ್ಯ ಸಂಗ್ರಹ, ಸಂಪಾದನೆ, ಟೀಕೆ ಟಿಪ್ಪಣಿ ರಚನಾಕಾರ್ಯಕ್ಕೆ ಅನುವುಮಾಡಿ ಕೊಟ್ಟುದು.

ತೋಂಟದಸಿದ್ಧಲಿಂಗರ ಶಿಷ್ಯ-ಪ್ರಶಿಷ್ಯ ಪರಂಪರೆಯಲ್ಲಿ ಕಟ್ಟಿಗೆ ಸಿದ್ಧಲಿಂಗಸ್ವಾಮಿಗಳ ಕಾಲದಲ್ಲಿ ವಿಭಜನೆ ಉಂಟಾಗಿ ಐದು ಸಮಯಗಳಾಗಿ ಮಾರ್ಪಟ್ಟವು. ಅವು ಕ್ರಮವಾಗಿ ಮುರಿಗಾಸಮಯ, ಚೀಲಾಳಸಮಯ, ಕುಮಾರಸಮಯ, ಕೆಂಪಿನಸಮಯ ಹಾಗೂ ಸಂಪಾದನ ಸಮಯ ಎಂದು ಹೆಸರು ಪಡೆದವು. ಚಿತ್ರದುರ್ಗ, ಗದಗ, ಹುಬ್ಬಳ್ಳಿ, ಕಲ್ಯಾಣ, ಹಾಗಲವಾಡಿ- ಈ ಸಮಯಗಳ ಮೂಲ ಸ್ಥಾನಗಳೆನಿಸಿದವು.

ಸಂಪಾದನಸಮಯದ ಸಿದ್ಧವೀರಣ್ಣ ಹಾಗಲವಾಡಿಯ ದೊರೆ ಮುದಿಯಪ್ಪ ನಾಯಕನನ್ನು ಭಕ್ತನನ್ನಾಗಿ ಮಾಡಿಕೊಂಡು, ಅವನಿಂದ ಮಠ ಕಟ್ಟಿಸಿಕೊಂಡು ಸಂಪಾದನ ಸಮಯದ ಮೂಲಮಠವನ್ನು ಹಾಗಲವಾಡಿಯಲ್ಲಿ ಸ್ಥಾಪಿಸಿದನೆಂದೂ ಅದು ಇಂದಿಗೂ ಅಲ್ಲಿ ಇರುವುದೆಂದು ತಿಳಿದುಬರುತ್ತದೆ. ಹಾಗಲವಾಡಿಯಲ್ಲಿ ಸಿದ್ಧವೀರಣ್ಣನಿಂದ ಸ್ಥಾಪಿತವಾದ ಈ ಸಂಪಾದನ ಸಮಯದ ಮಠದ ಶಾಖೆಗಳು ಕನ್ನಡನಾಡಿನ ಬೇರೆ ಬೇರೆ ಭಾಗಗಳಲ್ಲಿ ನಂತರ ಹುಟ್ಟಿಕೊಂಡು ವಚನಸಾಹಿತ್ಯ ಸಂಪಾದನೆ, ವೀರಶೈವಸಾಹಿತ್ಯ, ಸಂಸ್ಕೃತಿ, ಸಿದ್ಧಾಂತಗಳ ಪ್ರಚಾರಕಾರ್ಯವನ್ನು ಮಾಡುತ್ತ ಬಂದಿವೆ.

ಹೀಗೆ ಹಾಗಲವಾಡಿಯ ಅರಸರು ಸ್ವತಃ ಕವಿಗಳಾಗಿ, ಕವಿ, ಲಿಪಿಕಾರರು, ಟೀಕಾಕಾರರು, ಹಾಗೂ ಅನುಭಾವಿಗಳಿಗೆ ಆಶ್ರಯವಿತ್ತು ರಾಜಕಾರ್ಯದ ಜೊತೆಗೆ ವೀರಶೈವಧರ್ಮ, ಸಾಹಿತ್ಯ, ಸಂಸ್ಕೃತಿ ಸಂವರ್ಧನೆಯ ಕಾರ್ಯದಲ್ಲಿಯೂ ತಮ್ಮನ್ನು ತೊಡಗಿಸಿಕೊಂಡುದು ಸ್ಮರಣೀಯವಾಗಿದೆ. ಈ ಅರಸರು ಆಳ್ವಿಕೆ ನಡೆಸಿದ ಪ್ರದೇಶದ ವ್ಯವಸ್ಥಿತ ಪರಿವೀಕ್ಷಣೆ ಕೈಕೊಂಡರೆ ಅರಸರ ಆಶ್ರಯ ಪಡೆದ ಇನ್ನು ಕೆಲವು ಕವಿಗಳು-ಕೃತಿಗಳು ಹಾಗೂ ಸಾಹಿತ್ಯಕ್ಕೆ ಸಂಬಂಧಿಸಿದ ನೂತನ ಸಂಗತಿಗಳು ಬೆಳಕಿಗೆ ಬರುವ ಸಂಭವವಿದೆ. ಈ ಕಾರ್ಯ ಆದಷ್ಟು ಶೀಘ್ರಗತಿಯಲ್ಲಿ ನಡೆಯಬೇಕಾಗಿದೆ.*

---

೧. ಕನ್ನಡದ ಹಸ್ತಪ್ರತಿಗಳ ಇತಿಹಾಸ: ಎಚ್.ದೇವೀರಪ್ಪ ಪು.೫೭

* [illegible] ನಡೆದ ಹಾಗಲವಾಡಿ ವೀರಶೈವ [illegible] ಸಮಾರಂಭದಲ್ಲಿ ಮಂಡಿಸಿದ ಪ್ರಬಂಧ.

ಧಾರವಾಡ ಜಿಲ್ಲೆಯಲ್ಲಿ ದೊರೆತ ರಾಷ್ಟ್ರಕೂಟರ ಕಾಲದ ದೇವಾಲಯಗಳು

● ರು. ಮ. ಷಡಕ್ಷರಯ್ಯ

ಧಾರವಾಡ ಜಿಲ್ಲೆಯಲ್ಲಿ ಬೆಳಕಿಗೆ ಬಂದ ರಾಷ್ಟ್ರಕೂಟರ ಕಾಲದ ಪ್ರಕಟಿತ ಶಿಲಾ ಶಾಸನಗಳಲ್ಲಿ ದೇವಾಲಯ-ಶಿಲ್ಪಗಳ ಉಲ್ಲೇಖಗಳಿವೆ. ಆದರೆ ಇಲ್ಲಿಯವರೆಗೆ ಬೆಳಕಿಗೆ ಬಂದ ಈ ಭಾಗದ ಈ ಕಾಲದ ವಾಸ್ತುಶಿಲ್ಪ ಸಾಹಿತ್ಯದಲ್ಲಿ ಸಮಗ್ರ ಮಾಹಿತಿಯ ಕೊರತೆಯಿದೆ.[1]

ಸುಮಾರು ಒಂದೆರಡು ವರ್ಷ ವಿವಿಧ ಕಾರಣಗಳಿಂದ ಧಾರವಾಡ ಜಿಲ್ಲೆಯ ಅನೇಕ ಹಳ್ಳಿಗಳನ್ನು ಅನ್ವೇಷಣೆ ಮಾಡಲಾಯಿತು. ಈ ಹಳ್ಳಿಗಳಲ್ಲಿ ಮಹತ್ವದ ದೇವಾಲಯ-ಶಿಲ್ಪಗಳಿರುವುದನ್ನು ಗುರುತಿಸಲಾಯಿತು. ಈ ಕುರಿತು ಧಾರವಾಡ ಜಿಲ್ಲೆಯಲ್ಲಿ ದೊರೆತ ಪ್ರಾಚೀನ ಇಟ್ಟಿಗೆ ದೇವಾಲಯಗಳು,[2] "ಗಜಲಕ್ಷ್ಮಿಯ ಗಮನಾರ್ಹ ಶಿಲ್ಪಗಳು"[3] ಎಂಬ ಲೇಖನಗಳನ್ನು ಬರೆಯಲಾಯಿತು. ತದನಂತರ ಕ್ರಿ.ಶ. ೧೦ ನೇ ಶತಮಾನದ ಶಿಲ್ಪಗಳು ಹೆಚ್ಚು ಸಂಖ್ಯೆಯಲ್ಲಿ ಕಂಡು ಬಂದಿದ್ದನ್ನು ಗಮನಿಸಿ "ಧಾರವಾಡ ಜಿಲ್ಲೆಯಲ್ಲಿ ಕಂಡು ಬಂದ ರಾಷ್ಟ್ರಕೂಟ ಮತ್ತು ಈ ಕಾಲಪೂರ್ವದ ಶಿಲ್ಪಗಳು" ಎಂಬ ಪ್ರಬಂಧವನ್ನು ತಯಾರಿಸಿ ತುಮಕೂರಿನಲ್ಲಿ ನಡೆದ ಕರ್ನಾಟಕ ಇತಿಹಾಸ ಕಾಂಗ್ರೇಸ್‌ನಲ್ಲಿ ಮಂಡಿಸಲಾಯಿತು. ಮುಂದೆ ಈ ಲೇಖನ ಕರ್ನಾಟಕ ವಿಶ್ವವಿದ್ಯಾಲಯದ ಕರ್ನಾಟಕ ಭಾರತಿ ಪತ್ರಿಕೆಯಲ್ಲಿ ಪ್ರಕಟವಾಯಿತು.[4] ಇದೊಂದು ಚಿಕ್ಕ ಉತ್ತೇಜನ ನೀಡಿತು. ಮುಂದೆ ಧಾರವಾಡ ಜಿಲ್ಲೆಯ ಸು.ಕ್ರಿ.ಶ.೧೦ ನೇ ಶತಮಾನ ಶಿಲ್ಪ-ದೇವಾಲಯಗಳ"ಅನ್ವೇಷಣೆ ಎಂಬ ಒಂದು ನಿರ್ದಿಷ್ಟ ಯೋಜನೆಯನ್ನು ಕನ್ನಡ ಸಂಶೋಧನ ಸಂಸ್ಥೆಯ ವತಿಯಿಂದ ಹಾಕಿಕೊಳ್ಳಲು ಎಡೆಮಾಡಿಕೊಟ್ಟಿತು. ಈ ಯೋಜನೆಯನ್ವಯ ಈಗ ಎರಡು ವರ್ಷಗಳಿಂದ ಈ ಕಾರ್ಯವನ್ನು ಕೈಕೊಳ್ಳಲಾಗಿದೆ. ಈ ಕಾರ್ಯ ತೃಪ್ತಿಕರ ಪ್ರಗತಿಯಲ್ಲಿ ಸಾಗಿದೆ. ಈ ಫಲಿತಾಂಶದಲ್ಲಿ ಅತ್ಯಂತ ಮಹತ್ವವೆನಿಸಿದ ಹಳೆರಿತ್ತಿಯ ಮಹಿಷಾಸುರಮರ್ದಿನಿ ಶಿಲ್ಪವನ್ನು ವರದಿ ಮಾಡಲಾಯಿತು.[5] ಮತ್ತು ದೇವಿಹೊಸೂರಿನ ಬನಶಂಕರಿ ದೇವಾಲಯ ಇವುಗಳ ಬಗ್ಗೆ ಪ್ರಬಂಧವನ್ನು ರಚಿಸಿ ಅಖಿಲಭಾರತ ಕಲಾ ಪರಿಷತ್ ಸಮ್ಮೇಳನದಲ್ಲಿ ಮಂಡಿಸಲಾಯಿತು(೧೯೯೨). ಪ್ರಕಟಿತ ಶಾಸನಗಳಲ್ಲಿ ಸೂಚಿಸಿದ ದೇವಾಲಯ-ಶಿಲ್ಪಗಳ ಕುರುಹುಗಳು ಈ ಕಾರ್ಯಕ್ಕೆ ಮುಖ್ಯ ಆಧಾರವೆನಿಸಿವೆ.

ಕೆಲವೊಮ್ಮೆ ಕೇವಲ ಈ ಕಾಲದ ಪ್ರಕಟಿತ ಶಾಸನಗಳನ್ನು ಬಳಸಲಾಗಿದೆ. ಇದಲ್ಲದೆ ಈ ಕಾರ್ಯ ಕೈಗೊಂಡಾಗ ದಾರಿಯಲ್ಲಿ ಬಂದ ಗ್ರಾಮಗಳಲ್ಲಿ ಈ ಕಾಲದ ಅವಶೇಷಗಳನ್ನು ಪರಿಶೀಲಿಸಲಾಯಿತು ಹಾಗೂ ಈ ಕಾಲದ ನಂತರದ ಶಿಲ್ಪ-ದೇವಾಲಯಗಳು ಇದ್ದರೂ ಅವುಗಳನ್ನು ಅಧ್ಯಯನಕ್ಕೆ ಕೈಗೊಂಡಿರುವುದಿಲ್ಲ. ಈ ವರೆಗೆ ಅನ್ವೇಷಣೆ ಮಾಡಿದ ಗ್ರಾಮಗಳ ಈ ಕಾಲದ ಪ್ರಕಟಿತ ಶಾಸನಗಳಲ್ಲಿ ಉಲ್ಲೇಖವಾದ ಸ್ಥೂಲ ವಿವರಗಳನ್ನು ಇಲ್ಲಿ ಸ್ಮರಿಸಲಾಗಿದೆ.

ಧಾರವಾಡ ಜಿಲ್ಲೆಯ ಕೆಲವು ಗ್ರಾಮಗಳ ಸು.ಕ್ರಿ.ಶ.೧೦ ನೆಯ ಶತಮಾನದ ವರೆಗಿನ ಪ್ರಕಟಿತ ಶಾಸನಗಳ ಸ್ಥೂಲ ವಿವರ ಪಟ್ಟಿ :

ಶಾಸನವಿರುವ ಸ್ಥಳ	ಗ್ರಾಮ	ತಾಲೂಕ	ಶಾಸನಗಳ ಸ್ಥೂಲ ವಿವರ
೧. ಚಕ್ರ ಎಂಬ ಸ್ಥಳ	ಗುಡ್ಡದ ಚನ್ನಾಪುರ	ಶಿಗ್ಗಾಂವ	ರಾ.ಅಕಾಲವರ್ಷ (ಕೃಷ್ಣ೨)ಚಂದಯ್ಯ ನಾಳ್ಗಾವುಂಡನಾಗಿದ್ದ (ಕ್ರಿ.ಶ.೮೯೬)
೨. ಗದಿಗೆಪ್ಪಗೌಡರ ಹೊಲ	ನಿಡಗುಂದಿ	ಶಿಗ್ಗಾಂವ	ಡಾ.ಅಮೋಘವರ್ಷ ೧ ಕ್ರಿ.ಶ.೮೭೪-೭೫ ಭೂದಾನ ಉಲ್ಲೇಖ
೩. ಕಾಳಮ್ಮನ ಗುಡಿ ಹಿಂದಿನ ಗೋಡೆ	ಬನ್ನಿಕೊಪ್ಪ	ಶಿಗ್ಗಾಂವ	ಬಾದಾಮಿ ಚಾಲುಕ್ಯ ವಿಜಯಾದಿತ್ಯನ ಕಾಲದಲ್ಲಿ ನಂದೀಶ್ವರ ದೇವಾಲಯ ನಿರ್ಮಾಣ
೪. ಹನುಮಂತದೇವರ ಗುಡಿ ಹತ್ತಿರ (ಈಗ ಬೇರೆ ಕಡೆ ವರ್ಗವಾಗಿದೆ)	ಮಂತ್ರವಾಡಿ	ಶಿಗ್ಗಾಂವ	ರಾಷ್ಟ್ರಕೂಟ ಅಮೋಘ ವರ್ಷ ೧, ಕ್ರಿ.ಶ.೮೬೫ ರಲ್ಲಿ ಮೂಲಸ್ಥಾನ ದೇವಂಗೆದಾನ
೫. ಶಿಗ್ಗಾಂವ ತಾಮ್ರಪಟ	ಶಿಗ್ಗಾಂವ	ಶಿಗ್ಗಾಂವ	ಬಾದಾಮಿ ಚಾಲುಕ್ಯ ವಿಜಯಾದಿತ್ಯನ ಕ್ರಿ.ಶ.೭೦೭ ರಲ್ಲಿ ಪುಲಿಗೆರೆಯಲ್ಲಿ ಕಟ್ಟಿಸಿದ ಜೈನಬಸದಿಗೆ ಗುಡ್ಡಿಗೆರೆ ಗ್ರಾಮದಾನ.
೬. ಮಾಮಲೇದಾರ ಕಛೇರಿ ಆವರಣ	ಶಿಗ್ಗಾಂವ	ಶಿಗ್ಗಾಂವ	ರಾಷ್ಟ್ರಕೂಟ ಕೃಷ್ಣ ೧(?) ಮಹಾದೇವ ದೇವಾಲಯಕ್ಕೆ ಭೂದಾನ
೭. ಊರಮಧ್ಯೆ ಓಣಿಯಲ್ಲಿ	ಹನುಮನಹಳ್ಳಿ	ಶಿಗ್ಗಾಂವ	ರೇವಡಿಉಲ್ಲೇಖ
೮. ಕಲ್ಮೇಶ್ವರ ದೇವಾಲಯದ ಹೊರಗೆ	ಹಲಸೂರ	ಶಿಗ್ಗಾಂವ	ರಾಷ್ಟ್ರಕೂಟ ಕನ್ನಡ(ಸು.ಕ್ರಿ.ಶ.೯ ನೇ ಶತಮಾನ) ಅಣ್ಣಿಗನಾಳ್ಗಾವುಂಡನಾಗಿದ್ದ
೯. ಅಳ್ಳಿಕಟ್ಟಿಯ ಹೊಲ	ಹುಲಗೂರು	ಶಿಗ್ಗಾಂವ	ರಾಷ್ಟ್ರಕೂಟ ಖೊಟ್ಟಿಗ ಕ್ರಿ.ಶ.೯೭೦ ಇದರಲ್ಲಿ ಅಂಕಬ್ಬರಸಿಯಳಿಂದ ಪುಲ್ಲುಂಗೊರಬ್ಬೆ ದೇವತೆಗೆ ಭೂದಾನ
೯ಅ. ಈಶ್ವರ ದೇವಾಲಯದ ಹತ್ತಿರ	ಮೋಟಳ್ಳಿ	ಶಿಗ್ಗಾಂವ	ರಾ.ಕನ್ನರ:ಸು.ಶ. ೯. ರೇವಸಿಂಗಣಿ ಉಲ್ಲೇಖವಿದೆ.
೧೦. ಜ್ಯೋತೆಪ್ಪಮಲ್ಲದನ ಹೊಲ	ಹೊಟ್ಟೂರ	ಶಿಗ್ಗಾಂವ	ರಾಷ್ಟ್ರಕೂಟ ನೃಪತುಂಗನ ಕಾಲದಲ್ಲಿ ಸುಂಕ ರಿಯಾಯ್ತಿ
೧೧. ಪರ್ವತದೇವರ ಗುಡಿ ಹತ್ತಿರ	ಗುಡಗೇರಿ	ಕುಂದಗೋಳ	ರಾಷ್ಟ್ರಕೂಟ ಅಮೋಘವರ್ಷ(ಸು.ಕ್ರಿ.ಶ.೮ ನೇ ಶ. ಸೋಸಾಸ ಹಾಗೂ ಶುಭಚಂದ್ರ ಪಂಡಿತರು (ಎಸ್.ಐ.ಪಿ.೨೦,ನಂ. ೧೨.)

೧೨. ಸ.ನಂ.೧೫೫	ಅಗಡಿ	ಹಾವೇರಿ	ಸು.ಕ್ರಿ.ಶ.೭೦೦ ನೀತಮು ಕುಂದೋವಜ ಮಾನಕುಶಲ ಮತ್ತು ಬುದೋವಜರು ಶಂಖಾನಿಧಿ, ಶ್ರೀಯನಿಧಿ, ಮತ್ತು ಪದ್ಮನಿಧಿ ವಿಗ್ರಗಳನ್ನು ಮಾಡಿದರು.
೧೩. ಸಂಗಮೇಶ್ವರ ಗುಡಿಯ ಹತ್ತಿರ	ಕಿತ್ತೂರ	ಹಾವೇರಿ	ಕ್ರಿ.ಶ.೯೭೧ ರಾಷ್ಟ್ರಕೂಟ ಖೊಟ್ಟಿಗ ಕಾಲದಲ್ಲಿಗೋಗ್ರಹಣ ವಿವರ ಹಾಗೂ ಕ್ರಿ.ಶ.೧೨೮೮ ರ ಶಾಸನದಲ್ಲಿ ಕಲಿನಾಥ ಮೂಲಸ್ಥಾನ ಜಕ್ಕೇಶ್ವರ ದೇವಾಲಯದ ವಿವರ.
೧೪. ಎಲ್ಲಮ್ಮನ ಗುಡಿ ಹತ್ತಿರ	ದೇವಗಿರಿ	ಹಾವೇರಿ	ಬಾದಾಮಿ ಚಾಲುಕ್ಯ ವಿಕ್ರಮಾದಿತ್ಯ೨, ಕುಲಸಿಂಧರು .
೧೫. ಬನಶಂಕರಿ ಗುಡಿ ಕಂಬ	ದೇವಗಿರಿ	ಹಾವೇರಿ	ಸು.ಕ್ರಿ.ಶ.೯ ನೇ ಶತಮಾನ ಅಮ್ಮ ಕೀರ್ತಿಯಿಂದ ಗೋಸಾಸದಾನ ಇನ್ನೊಂದು ಕಂಬದಲ್ಲಿ(ಈ ಕಾಲ) ರಾಜಾದಿತ್ಯನ ಹೆಸರು. ಇನ್ನೊಂದು ಕಂಬ ಶಾಸನದಲ್ಲಿ ಗೋವಿಂದಪ್ಪೆಯು ದೇವಂಗೇರಿಯನ್ನಾಳುವಾಗ ತಿಪುಳರ ಮಾರಮ್ಮ ಗೋಸಾಸಿ ಮೇಂಟಿ ನಿಲ್ಲಿಸಿದ.
೧೬. ಸ.ನಂ.೩೯೩	ದೇವಿಹೊಸೂರ	ಹಾವೇರಿ	ಶ್ರೀಮಾರಸು ನಾಡನ್ನಾಳುವಾಗ ನಡೆದ ಗೋಗ್ರಹಣ (ಸು.ಶ.೮)
೧೭. ಬನಶಂಕರಿ ಗುಡಿ-ವೀರಗಲ್ಲು	ದೇವಿಹೊಸೂರ	ಹಾವೇರಿ ಮಕರತೋರಣ.	ರಾಷ್ಟ್ರಕೂಟ ಅಕಾಲವರ್ಷ ಕ್ರಿ.ಶ.೯೦೭ ಯುದ್ಧದಲ್ಲಿ ವೀರನ ಮರಣ ಮತ್ತು ಕ್ರಿ.ಶ.೧೦೬೩ ರ ಶಾಸನದಲ್ಲಿ ಮಾಳಜದೇವಿಗೆ
೧೮. ಕೂಡಲ ಗದಿಗೆಪ್ಪನ ಮನೆ	ದೇವಿಹೊಸೂರ	ಹಾವೇರಿ	ರಾಷ್ಟ್ರಕೂಟ ಅಕಾಲವರ್ಷ ವಿಕ್ರಮಾದಿತ್ಯ ರಾಜ್ಯವಾಳುತ್ತಿದ್ದ.
೧೯. ಭೋಗೇಶ್ವರ ಗುಡಿ	ದೇವಿಹೊಸೂರ	ಹಾವೇರಿ	ರಾಷ್ಟ್ರಕೂಟ ಕೃಷ್ಣ ೨ ಕ್ರಿ.ಶ.೯೬೧, ಬನವಾಸಿ ಆಳುವಾಗ
೨೦. ಊರ ಅಗಸಿಕಂಬ	ಹಳೆರಿತ್ತಿ	ಹಾವೇರಿ	ರಾಷ್ಟ್ರಕೂಟ ನಿರುಪಮ ಕ್ರಿ.ಶ.೯೨೯ ಗೋಸಹಸ್ರದಾನ
೨೧. ಕಲ್ಲಗಸಿಯ ಹತ್ತಿರ	ಘಾಳಪೂಜೆ	ಬ್ಯಾಡಗಿ	ರಾಷ್ಟ್ರಕೂಟ ಇಮ್ಮಡಿ ಕೃಷ್ಣನ ಕಾಲದಲ್ಲಿ ಮಹದೇವ ದೇವಾಲಯಕ್ಕೆ ನೀಡಿದ ವಿವರ.

೨೨. ರಾಮಲಿಂಗ ದೇವಾಲಯ	ಜಡಮಲ್ಲಿ	ಬ್ಯಾಡಗಿ	ರಾಷ್ಟ್ರಕೂಟ ಮುಮ್ಮಡಿ ಕೃಷ್ಣಕ್ರಿ.ಶ.೯೪೩ ಭೀಮಪರಸ ವಿವರ.
೨೩. ಸಿದ್ಧೇಶ್ವರ ದೇವಾಲಯ	ಬ್ಯಾಡಗಿ	ಬ್ಯಾಡಗಿ	ರಾಷ್ಟ್ರಕೂಟ ಅಕಾಲವರ್ಷ ಕ್ರಿ.ಶ.೯೦೨ ಸುಂಕದಾನ
೨೪. ರಾಮೇಶ್ವರ ದೇವಾಲಯ	ಮಾಸಣಗಿ	ಬ್ಯಾಡಗಿ	ರಾ.ಅಮೋಘವರ್ಷ ಕ್ರಿ.ಶ.೯೩೫ ಅಮ್ಮರಣನ ಯುದ್ಧಮರಣ. ಇಲ್ಲಿಯ ಶಾಸನದಲ್ಲಿ (ಸು.ಕ್ರಿ.ಶ. ೧೦ ನೇ ಶತಮಾನ) ಒಬ್ಬ ವ್ಯಕ್ತಿಯಿಂದ ದೇವಾಲಯಕ್ಕೆ ದಾನವಿಷಯ.
೨೫. ಕಲ್ಲೇಶ್ವರ ಗುಡಿ ವೀರಗಲ್ಲು	ಸಿಡೇನೂರ	ಬ್ಯಾಡಗಿ	ಅಕಾಲವರ್ಷ ಮಾಸಳಿಗೆಯ ದೇವಾಲಯಕ್ಕೆ ದಾನ
೨೬. ಬಸವಣ್ಣನ ಗುಡಿ ಹತ್ತಿರ	ಸಿಡೇನೂರ	ಬ್ಯಾಡಗಿ	ಬಾದಾಮಿ ಚಾಲುಕ್ಯ ಇಮ್ಮಡಿ ವಿಕ್ರಮಾದಿತ್ಯ (ಸು.ಶ.೮) ಸಿಂಗವಡ್ಡಗಿ ಸಿರಿವಾಗಿಲ ಮಾಡಿದ
೨೭. ಕಲ್ಮೇಶ್ವರ ಗುಡಿ ವೀರಗಲ್ಲು	ಸಿಡೇನೂರ	ಬ್ಯಾಡಗಿ	ಸು.ಕ್ರಿ.ಶ. ೮ ನೇ ಶತಮಾನ ಶುಳುಕಿರಾಜ್ಯದಾ ಕೆಡುವಲ್ಲ ದೋಸಿಯ
೨೮. ಕಲ್ಮೇಶ್ವರ ಗುಡಿ ವೀರಗಲ್ಲು	ಸಿಡೇನೂರ	ಬ್ಯಾಡಗಿ	ರಾಷ್ಟ್ರಕೂಟ ಧ್ರುವ ಜಿನವತಿಯಬ್ಬೆ ಸಿಡಿಯಸೂರನ್ನಾಳುವಾಗ ನಡೆದ ಗಂಗರ ಯುದ್ಧ
೨೯. ಕಲ್ಮೇಶ್ವರ ಗುಡಿ ವೀರಗಲ್ಲು	ಸಿಡೇನೂರ	ಬ್ಯಾಡಗಿ	ರಾ.ಇಮ್ಮಡಿ ಕೃಷ್ಣ ೯೦೪-೦೫, ಲೋಕಟೆ ಇತ್ಯಾದಿ
೩೦. ಕಲ್ಮೇಶ್ವರ ಗುಡಿ	ಸಿಡೇನೂರ	ಬ್ಯಾಡಗಿ ಹೆಸರು.	ಕ.ಚಾಲುಕ್ಯ ಇಮ್ಮಡಿ ಜಯಸಿಂಹನ ಕ್ರಿ.ಶ.೧೦೧೫ ಕಲಿದೇವರ
೩೧. ವೀರಭದ್ರ ದೇವರಗುಡಿ ಎದುರು	ಸೂಡಂಬಿ	ಬ್ಯಾಡಗಿ	ರಾ.ಇಮ್ಮಡಿ ಕೃಷ್ಣ ಪ್ರಕಟಿತ
೩೨. ಸೋಮೇಶ್ವರ ಗುಡಿಯಲ್ಲಿ	ಮತ್ತಿಹಳ್ಳಿ	ಹಿರೇಕೆರೂರ	ಕ್ರಿ.ಶ.೧೦೭೪ ರಲ್ಲಿ ಮಹಾಮಂಡಳೇಶ್ವರ ಉದಯಾದಿತ್ಯನಿಂದ ಸ್ವಯಂಭು ದೇವರಿಗೆ ದಾನ
೩೩. ತೋಟದ ವೀರಣ್ಣ ಗುಡಿಯ ಹಿಂದೆ ಕಂಬ	ಹಿರೇಕೆರೂರ	ಹಿರೇಕೆರೂರ	ಕ್ರಿ.ಶ.೯೬೦ ರಲ್ಲಿ ಗೋಸಾಸವನಿತ್ತ ಸಂಗತಿ
೩೪. ದುರಗಪ್ಪನ ಗುಡಿಯ ಎದುರು	ಹಂಸಭಾವಿ	ಹಿರೇಕೆರೂರ	ಸು.ಶ.೯, ರಾಷ್ಟ್ರಕೂಟ ಅಕಾಲವರ್ಷ.ಕಲಿವಿಟ್ಟರ ಉಲ್ಲೇಖ
೩೫. ಬನದವ್ವನ ಗುಡಿ ಎದುರು	ಚಿಕ್ಕೇರೂರ	ಹಿರೇಕೆರೂರ	ಕ್ರಿ.ಶ.೯೫೫ ರಲ್ಲಿ ಬಳಾರಿದೇವತೆಯ ಪ್ರತಿಷ್ಠೆಮಾಡಿದ ವಿಷಯ.

ಈ ಮೇಲೆ ಸೂಚಿಸಿದ ಗ್ರಾಮಗಳಲ್ಲಿ ಈ ಕಾಲದ ಶಿಲ್ಪ ದೇವಾಲಯಗಳಿರುವುದನ್ನು ಕಂಡುಕೊಳ್ಳಲಾಗಿದೆ. ಈ ಅಧ್ಯಯನದ ವ್ಯಾಪ್ತಿಯಲ್ಲಿ ಮುಖ್ಯವಾಗಿ ಈ ಶಿಲ್ಪಾವಶೇಷಗಳನ್ನು ಎರಡು ರೀತಿಯಲ್ಲಿ ವಿಂಗಡಿಸಲಾಗಿದೆ. ಒಂದು ದೇವಾಲಯಗಳು. ಎರಡು ಶಿಲ್ಪಗಳು. ಶಿಲ್ಪಗಳು ಎರಡು ವಿಧ. ಒಂದು ದೇವ-ದೇವತೆಗಳ ಶಿಲ್ಪಗಳು. ಎರಡನೆಯದು ವೀರಗಲ್ಲುಗಳು ಮತ್ತು ಕೊನೆಯದು ಗೋಸಾಸ ಕಲ್ಲುಗಳು. ಈ ಶಿಲ್ಪಗಳನ್ನು ಪ್ರತ್ಯೇಕವಾಗಿ ಅಧ್ಯಯನ ಮಾಡಲಾಗಿದೆ. ಹಾಗೂ ಕ್ರಿ.ಶ.೧೧ನೇ ಶತಮಾನ ಮತ್ತು ಈ ನಂತರ ಕಾಲದ ಅವಶೇಷಗಳನ್ನು ಈ ಅಧ್ಯಯನದ ವ್ಯಾಪ್ತಿಯಲ್ಲಿ ಬಳಸಿಕೊಂಡಿರುವದಿಲ್ಲ. ಈಗಾಗಲೇ ಅಧ್ಯಯನ ಮಾಡಿದ ದೇವಾಲಯಗಳನ್ನು ಅವಶ್ಯವಿದ್ದಲ್ಲಿ ಸ್ಮರಿಸಲಾಗಿದೆ. ಈ ಕೆಳಗೆ ಬೆಳಕಿಗೆ ಬಂದ ದೇವಾಲಯಗಳ ಅಕ್ಕ ಪಕ್ಕದಲ್ಲಿ ಕ್ರಿ.ಶ. ೧೦ ನೇ ಶತಮಾನದ ವರೆಗಿನ ಪ್ರಕಟಿತ ಶಾಸನಗಳಿವೆ. ಅವುಗಳ ವಿವರಗಳನ್ನು ಈ ಮೇಲಿನ ಯಾದಿಯಲ್ಲಿ ಪ್ರತ್ಯೇಕವಾಗಿ ಕೊಡಲಾಗಿದೆ.

ದೇವಾಲಯಗಳು:

ದೇವಾಲಯಗಳಲ್ಲಿ ಮೂರು ಪ್ರಕಾರಗಳಿವೆ. ಒಂದನೆಯದು ಶಿಲೆಯ ದೇವಾಲಯ. ಎರಡನೆಯದು ಇಟ್ಟಿಗೆಯ ದೇವಾಲಯ. ಮೂರನೆಯದು ಸ್ತಂಭ ಮಂಟಪಗಳಾಗಿವೆ.

೧. ಇಟ್ಟಿಗೆ ದೇವಾಲಯಗಳು:

ಇಟ್ಟಿಗೆ ದೇವಾಲಯಗಳು (೧೯೯೧-೯೨ ಮತ್ತು ೧೯೯೨-೯೩) ಹಾವೇರಿ ತಾಲೂಕಿನ ದೇವಿಹೊಸೂರ, ಬ್ಯಾಡಗಿ ತಾಲೂಕಿನ ಘಾಳಪೂಜಿ ಮತ್ತು ಬಡಪಳ್ಳಿಗಳಲ್ಲಿವೆ. ಸಾಮಾನ್ಯವಾಗಿ ಈ ದೇವಾಲಯಗಳ ಗೋಡೆ ಮತ್ತು ಶಿಖರಗಳನ್ನು ಸಂಪೂರ್ಣವಾಗಿ ಇಟ್ಟಿಗೆಯಿಂದ ನಿರ್ಮಿಸಲಾಗಿದೆ. ಉಳಿದ ಛತ್ತು, ಬಾಗಿಲ ಚೌಕಟ್ಟು, ಅರ್ಧಗಂಬ ಹಾಗೂ ಸ್ತಂಭಗಳು ಶಿಲೆಯದ್ದಾಗಿವೆ. ಈ ದೇವಾಲಯಗಳಲ್ಲಿ ದೇವಿಹೊಸೂರಿನ ಇಟ್ಟಿಗೆಯ ಬನಶಂಕರಿ ದೇವಾಲಯ ಅತ್ಯಂತ ಮಹತ್ವದ್ದು. ಉಳಿದ ದೇವಾಲಯಗಳಲ್ಲಿ ಸಾಮಾನ್ಯವಾಗಿ ಕೇವಲ ಗರ್ಭಗೃಹ ಮತ್ತು ಅರ್ಧಮಂಟಪಗಳಿವೆ.

ಈ ಮಾದರಿಯ ಇಟ್ಟಿಗೆ ದೇವಾಲಯಗಳು ಈ ಹಿಂದೆ. ಹಿರೇಕೆರೂರ ತಾಲೂಕಿನ ಸಾತೇನಹಳ್ಳಿಯ ಮಹದೇವ ದೇವಾಲಯ, ಹಿರೇಕೆರೂರ ತಾಲೂಕಿನ ಚಿಕ್ಕೇರೂರ ಗ್ರಾಮದ ಬಳ್ಳಾರಮ್ಮ ದೇವಾಲಯ (ತಳಪಾಯ ಕಟ್ಟಿದ ಮಾತ್ರ), ಶಿಗ್ಗಾಂವ ತಾಲೂಕಿನ ಹುಲಗೂರ ಗ್ರಾಮದಲ್ಲಿ ಇತ್ತೀಚೆಗೆ ಕಂಡುಬಂದ ಶೈವ ದೇವಾಲಯ ತಳಪಾಯ, ಶಿಗ್ಗಾಂವ ತಾಲೂಕಿನ ಬನ್ನಿಕೊಪ್ಪದ ಭೀಮ ದೇವಾಲಯ, ಶಿಗ್ಗಾಂವಿಯ ಕಲ್ಮೇಶ್ವರ ದೇವಾಲಯಗಳು ಮುಖ್ಯವಾಗಿದ್ದು ಇವುಗಳನ್ನು ಈಗಾಗಲೇ ಅಧ್ಯಯನ ಮಾಡಲಾಗಿದೆ. ಇವುಗಳಲ್ಲಿ ಸಾತೇನಹಳ್ಳಿ ಮತ್ತು ಬನ್ನಿಕೊಪ್ಪ (ಜೆನ್ನಿಯೂರು)ಗ್ರಾಮಗಳ ಇಟ್ಟಿಗೆಯ ದೇವಾಲಯಗಳು ಮುಖ್ಯವಾಗಿವೆ.

ಒಟ್ಟಾರೆ ಇಟ್ಟಿಗೆ ದೇವಾಲಯಗಳಲ್ಲಿ ಹಿರೇಕೆರೂರ ತಾಲೂಕಿನ ಸಾತೇನಹಳ್ಳಿ ಹಾಗೂ ಹಾವೇರಿ ತಾಲೂಕಿನ ದೇವಿಹೊಸೂರ ಗ್ರಾಮಗಳ ದೇವಾಲಯಗಳು ಅತ್ಯಂತ ಪ್ರಮುಖವೆನಿಸಿವೆ.

ಇನ್ನೊಂದು ಮಹತ್ವದ ಸಂಗತಿಯೆಂದರೆ ಈ ಎಲ್ಲಾ ದೇವಾಲಯಗಳು ಸಾಮಾನ್ಯವಾಗಿ ಪೂರ್ವಕ್ಕೆ ಮುಖಮಾಡಿವೆ. ಹಾಗೂ ಈ ದೇವಾಲಯಗಳೆಲ್ಲ ಕೆರೆಯ ಹತ್ತಿರ ಇರುವುದು ಗಮನೀಯ. ಬಹುಶಃ ಅಲ್ಲಿ ಬೇಕಾದ ಶಿಲೆಯು ದೊರೆಯದಿದ್ದರಿಂದ ಈ ಕ್ರಮ ಕೈಗೊಂಡಿರುವ ಸಾಧ್ಯತೆಯಿದೆ. ಈ ದೇವಾಲಯಗಳ ಅಧ್ಯಯನ ಹೀಗಿದೆ:

೧. ಬನಶಂಕರಿ ದೇವಾಲಯ (ದೇವಿ ಹೊಸೂರು):

ದೇವಿಹೊಸೂರು ಗ್ರಾಮದಲ್ಲಿ ಕ್ರಿ.ಶ. ೯, ೧೦ ನೇ ಶತಮಾನದ ಎರಡು ದೇವಾಲಯಗಳಿವೆ. ಒಂದು ಬನಶಂಕರಿ ದೇವಾಲಯ. ಇನ್ನೊಂದು ಬಾಗೇಶ್ವರ ದೇವಾಲಯ.

ಬನಶಂಕರಿ ದೇವಾಲಯ :

ಈ ಗ್ರಾಮದ ಅಗ್ನೇಯ ದಿಕ್ಕಿನಲ್ಲಿ ಬನಶಂಕರಿ ದೇವಾಲಯವಿದೆ. (ಚಿತ್ರ ನಂ.೧) ಈ ದೇವಾಲಯದ ಮುಖಮಂಟಪದ ಬಲಬದಿಗೆ ಒಂದು ಇಟ್ಟಿಗೆಯ ಗುಡಿ. ಇದರಲ್ಲಿ ಒಂದು ಶಿವಲಿಂಗ. ಇದನ್ನು ಈಶ್ವರಗುಡಿ ಎನ್ನುವರು. ಅದರ ಹಿಂಬದಿಗೆ ಎರಡು ಮಂಟಪಗಳಿದ್ದು ಅವುಗಳು ಶಿಥಿಲಗೊಂಡಿವೆ. ಒಂದರಲ್ಲಿ ಒಡೆದ ಭೈರವನ ಶಿಲ್ಪವಿದ್ದು ಇನ್ನೊಂದರ ಕಟ್ಟಡ ಇಟ್ಟಿಗೆಯದಲ್ಲ. ಮತ್ತು ಯಾವ ಶಿಲ್ಪಗಳಿಲ್ಲ. ಇದೇ ರೀತಿ ಬನಶಂಕರಿ ಗುಡಿ ಎಡಬದಿಗೆ ಎರಡು ಇಟ್ಟಿಗೆಯ ಚಿಕ್ಕ ದೇವಾಲಯಗಳಿವೆ. ಒಂದಕ್ಕೆ ತೆರೆದ ಚಿಕ್ಕ ಮಂಟಪವಿದ್ದು ಅದರಲ್ಲಿ ನಂದಿ ವಿಗ್ರಹವಿದೆ. ಅದರ ಹಿಂಬದಿಯಲ್ಲಿ(ಹತ್ತಿರ) ಶಿಥಿಲಗೊಂಡ ಮಂಟಪವಿದ್ದು ಇದರಲ್ಲಿ ಯೋಗ ನಾರಾಯಣ ಶಿಲ್ಪ(?)ವಿದೆ. ಈ ದೇವರಿಗೆ ನಾಲ್ಕು ಕೈಗಳು. ಮೇಲಿನ ಎರಡು ಕೈಗಳಲ್ಲಿ ಚಕ್ರ, ಶಂಖಗಳಿದ್ದಂತೆ ಕಾಣುತ್ತವೆ. ಕೆಳಗಿನ ಕೈಗಳು ಯೋಗಮುದ್ರೆಯಲ್ಲಿವೆ. ಈತನಿಗೆ ಗಡ್ಡವಿದ್ದಂತೆ ಭಾಸವಾಗುತ್ತದೆ. ಈ ಶಿಲ್ಪದ ಪೀಠದಲ್ಲಿ ಗರುಡನ ಚಿತ್ರವಿದೆ.

ಬನಶಂಕರಿ ದೇವಾಲಯ ಎದುರಿಗೆ ಎತ್ತರದ ಒಂದು ಸ್ತಂಭ ತೋರಣವಿದೆ. ಹಾಗೂ ದಾರಿ ಉದ್ದಕ್ಕೂ ಅಲ್ಲಲ್ಲಿ ಪಾದಫಲಕಗಳಿವೆ. ಸ್ತಂಭ ತೋರಣದ ಎದುರು ಸ್ವಲ್ಪ ದೂರದಲ್ಲಿ ಒಂದು ಚಿಕ್ಕ ಹೊಂಡವಿದೆ. ಇದನ್ನು ಓಕಳಿ ಹೊಂಡವೆನ್ನುವರು. ಈ ಹೊಂಡದಿಂದ ಮುಂದೆ ಸುಮಾರು ದೂರದ ವರೆಗೆ ಅಲ್ಲಲ್ಲಿ ಒಟ್ಟು ಹತ್ತು ಪಾದಪೀಠಗಳನ್ನಿಟ್ಟಿರುವುದು ವಿಶೇಷವಾಗಿದೆ. ಬನಶಂಕರಿ ದೇವಾಲಯ ಪೂರ್ವಕ್ಕೆ ಒಂದು ಕೆರೆಯಿದೆ. ಈ ದೇವಸ್ಥಾನಕ್ಕೆ ಸುಮಾರು ೧೮ ಗುಂಠೆ ಭೂಮಿ ಇರುವುದೆಂದು ಅಲ್ಲಿಯ ಜನರು ಹೇಳುವರು.

ಬನಶಂಕರಿ ದೇವಾಲಯಕ್ಕೆ ಗರ್ಭಗೃಹ, ಅಂತರಾಳ, ನವರಂಗ ಮತ್ತು ಮುಖಮಂಟಪಗಳಿವೆ. ಗರ್ಭಗೃಹದಲ್ಲಿ ಮೂಲ ವಿಗ್ರಹವಿರುವುದಿಲ್ಲ. ಇದರ ಬದಲು ಚಿಕ್ಕ ಗಣೇಶನ ಶಿಲ್ಪವೊಂದು ಮೂಲ ಪೀಠದ ಮೇಲಿದೆ. ಅಂತರಾಳ ದ್ವಾರಗಳ ಬದಿಯಲ್ಲಿ ಜಲಾಂಧ್ರಗಳಿವೆ. ಹಾಗೂ ಅದರ ಬಾಗಿಲು ಫಲಕದ ಲಲಾಟದಲ್ಲಿ ಸರಳ ಶಾಖೆಗಳ ಮಧ್ಯ ಗಜಲಕ್ಷ್ಮಿ ಶಿಲ್ಪ ಇರುವುದು. ನವರಂಗದ ಮಧ್ಯದಲ್ಲಿ ಎತ್ತರದ ಪೀಠವಿದೆ. ಈ ಪೀಠದಲ್ಲಿ

ನಾಲ್ಕು ಕಂಬಗಳಿವೆ. ಅದರ ದ್ವಾರಗಳಲ್ಲಿ ಜಲಾಂಧ್ರಗಳಿವೆ. ದ್ವಾರ ಫಲಕಗಳಿಗೆ ಶಾಖೆಗಳುಂಟು. ಈ ಶಾಖೆಗಳು ಲಲಾಟದಲ್ಲಿ ಹರಿದಿದ್ದು ಅದರ ಮಧ್ಯ ಗಜಲಕ್ಷ್ಮೀ ಶಿಲ್ಪವಿದೆ. ಈ ದೇವಾಲಯವನ್ನು ಗರ್ಭಗೃಹದಿಂದ ನವರಂಗದವರೆಗೆ ಇಟ್ಟಿಗೆಯಿಂದ ಕಟ್ಟಲಾಗಿದೆ. ಇಟ್ಟಿಗೆ ಗೋಡೆಯ ಹೊರಮೈಯಲ್ಲಿ ತೆಳುವಾದ ಉದ್ದನೆಯ ಅರ್ಧಗಂಬಗಳಿವೆ. (ಚಿತ್ರ ನಂ ೩) ನವರಂಗ ಭಿತ್ತಿನಲ್ಲಿ ಅರಳಿದ ಪದ್ಮ ಅಲಂಕಾರವಿದೆ. ನವರಂಗ ಗೋಡೆಯ ಹೊರಮೈಯಲ್ಲಿ ಎರಡು ಮತ್ತು ಮುಖಮಂಟಪದಲ್ಲಿ ಆರು ಕಂಬಗಳಿವೆ. ಇಲ್ಲಿಯ ಕಂಬಗಳು ಎರಡು ಮಾದರಿಯಲ್ಲಿವೆ. ಗರ್ಭಗೃಹದ ಮೇಲೆ ವೇಸರ ಶೈಲಿಯ ಶಿಖರವಿದೆ. ಈ ಶಿಖರ ಇಟ್ಟಿಗೆಯಿಂದ ನಿರ್ಮಿಸಲಾಗಿದ್ದು ಅದು ಅಲ್ಲಲ್ಲಿ ಶಿಥಿಲಗೊಂಡಿದೆ.

ಈ ದೇವಾಲಯದ ಎದುರು ಸುಂದರ ಮಕರ ತೋರಣವಿದ್ದು ಅದರ ಫಲಕದಲ್ಲಿ ವೈವಿಧ್ಯಮಯ ಶಿಲ್ಪಗಳಿವೆ. ಈ ತೋರಣ ಶಿಲ್ಪವು ಎರಡು ಸ್ತಂಭಗಳ ಮೇಲಿದೆ. ಇದರಲ್ಲಿ ಐದು ಅರ್ಧ ವೃತ್ತಾಕಾರದ ಲತಾ ಸುರುಳಿಯ ಅಲಂಕರಣ ಎರಡು ಮಕರಗಳ ಮಧ್ಯವಿರುತ್ತವೆ. ಲತಾಸುರುಳಿಯ ಮೇಲೆ ವಾಹನಗಳ ಮೇಲೆ ಕುಳಿತ ಅಷ್ಟದಿಕ್‌ಪಾಲಕರಿದ್ದಾರೆ. ಈ ದಿಕ್‌ಪಾಲಕರ ಮಧ್ಯೆ ಕುಳಿತ ಮೂವರು ದೇವತೆಯರಿರುವುದು ಗಮನೀಯ. (ಚಿತ್ರ ನಂ ೨). ಈ ತೋರಣದ ಹಿಂಬದಿಯಲ್ಲಿ ಎರಡು ಆನೆ ಒಂದಕ್ಕೊಂದು ಮುಖಮಾಡಿ ನಿಂತಿವೆ. ಈ ಮಕರ ತೋರಣದ ಒಂದು ಕಂಬದಲ್ಲಿ ಕ್ರಿ.ಶ.೧೦೬೩ ರ ಒಂದು ಶಾಸನವಿದೆ. ಕಲ್ಯಾಣ ಚಾಲುಕ್ಯ ದೊರೆ ಮೊದಲನೇ ಸೋಮೇಶ್ವರನ ಕಾಲದಲ್ಲಿ ಅಂಘುರಕ ಇಂದಪ್ಪಯ್ಯ ನಾಯಕ ಎಂಬವನು ದಯ್ಯದ ಪೊಸವೂರಿನಲ್ಲಿಯ ಮಾಳಜದೇವಿಗೆ ಮಕರತೋರಣ ಮಾಡಿಸಿದನೆಂದು ಶಾಸನದಲ್ಲಿ ಉಲ್ಲೇಖಿಸಿದೆ. ಇದನ್ನು ಇಲ್ಲಿ ಸ್ಮರಿಸಬಹುದಾಗಿದೆ.

ಹಾಗೂ ಈ ದೇವಿಗೆ ಮಾಳಾಜಾದೇವಿ ಎಂದು ಹಾಗೂ ಈಕೆಯನ್ನು ಕಾಳಿಗೆ, ಕಾಳ ರಾಕ್ಷಸಿಗೆ ರೌದ್ರೆಗೆ, ಭೈರವಿಗೆ ಎಂದು ಹಾಗೂ ಮಹಾಕಾಳಿಗೆ, ಕಾಳಯೋಗಿನಿಗೆ ಮಾಳದೇವತೆ ಎಂತಾಗಿ ವರ್ಣಿಸಲಾಗಿದೆ. ಇವರು ಮಕರ ತೋರಣದಲ್ಲಿ ತೋರಿಸಿದ ದೇವತೆಗಳೇ ? ಆದರೆ ಅಲ್ಲಿ ಮೂವರು ದೇವತೆಯರಿದ್ದಾರೆ. ಬಹುಶ: ಅವರು ಬ್ರಹ್ಮೀ, ಪಾರ್ವತಿ ಮತ್ತು ವೈಷ್ಣವಿಯರೇ ? ಈ ಶಾಸನ ರಚಿಸಿದವನು ದೇವನಾಗಯ್ಯ, ಬರೆದವನು ವಿದ್ಯಾಧರ ಮತ್ತು ಕಲ್ಲುಟಿಗ ಬಮ್ಮೋಜರೆಂದು ಹೇಳಲಾಗಿದೆ. ಇದರಿಂದ ಈ ದೇವಾಲಯದ ಮೂಲ ಹೆಸರು ಹಾಗೂ ವಾಸ್ತುಶಿಲ್ಪ ವಿಶಿಷ್ಟವಾದದ್ದು.

ಈ ದೇವಾಲಯದ ಸುತ್ತ ಶಿಥಿಲಗೊಂಡ ವಿವಿಧ ನಾಲ್ಕು ಚಿಕ್ಕ ದೇವಾಲಯ-ಮಂಟಪಗಳಿವೆ. ಎರಡು ಮಾತ್ರ ಶಂಕರ, ವಿಷ್ಣುವಿಗೆ ಸೇರಿದವೆಂದು ಈ ಮೇಲೆ ಹೇಳಿದೆ. ಹಾಗೂ ಇನ್ನೆರಡರಲ್ಲಿ (ಒಂದು ಮಂಟಪ ಇನ್ನೊಂದು ಕೊಠಡಿ) ಯಾವ ಶಿಲ್ಪಗಳಿಲ್ಲ ಮತ್ತು ಮಂಟಪ ಹೆಚ್ಚು ಮಾರ್ಪಾಡಾಗಿದೆ. ಬಹುಶ: ಇವು ಪಂಚಾಯತನ ಪ್ರಕಾರಕ್ಕೆ ಸೇರಿದ ದೇವಾಲಯವಾಗಿರಬಹುದೇ ಎಂಬ ಸಂಶಯ. ಏಕೆಂದರೆ ಈ ಸಮೂಹದಲ್ಲಿ ಮಧ್ಯದ ಮುಖ್ಯ

ದೇವಾಲಯ ದೇವಿದಾಗಿದೆ ಅದು ಮಾಜಳಾದೇವಿ. ಪಂಚಾಯತನ ಪ್ರಕಾರ ದೇವಿ ದೇವಾಲಯದ ಸುತ್ತ ಶಂಕರ, ಗಣೇಶ, ಸೂರ್ಯ ಮತ್ತು ವಿಷ್ಣುವಿನ ದೇಗುಲಗಳಿರಬೇಕಾಗುತ್ತದೆ. ಈ ನಾಲ್ಕರಲ್ಲಿ ಶಂಕರ ಮತ್ತು ವಿಷ್ಣುವಿನ ಎರಡು ದೇವಾಲಯಗಳಿವೆ. ಉಳಿದವುಗಳು ಇನ್ನಿತರ ದೇಗುಲಗಳೇ ? ಆದರೂ ಸ್ಪಷ್ಟವಾಗಿ ಹೇಳುವುದು ಸುಲಭವಿಲ್ಲ.

ಈ ಮಾಜಳಾದೇವಿಯನ್ನು ಇಂದು ಬನಶಂಕರಿ ಎಂದು ಕರೆಯುವರು. ಈ ದೇವತೆಯ ಅನೇಕ ಭಕ್ತರು ವೀರಶೈವರ ಪಂಚಮಸಾಲಿಗೆ ಸೇರಿದವರಂತೆ. ಈ ಜನಾಂಗಕ್ಕೆ ಸೇರಿದ ಶ್ರೀ ತಿಪ್ಪಣ್ಣ ಪಾಣಿಗಟ್ಟಿ ಈ ದೇವಿಯ ಅರ್ಚಕರು. ಆದರೆ ಇವರ ಮನೆ ದೇವರು ಮೈಲಾರಲಿಂಗ. ಪ್ರತಿ ಹುಣ್ಣಿಮೆ, ಅಮವಾಸ್ಯೆ ಮುಂತಾದ ಶುಭದಿನಗಳಂದು ಶ್ರೀ ಪಾಣಿಗಟ್ಟಿ ಮನೆಯವರು ಮೈಲಾರಕ್ಕೆ ಹೋಗಿ ಮೈಲಾರಲಿಂಗ ದರ್ಶನ ಪಡೆದು ಅಲ್ಲಿಂದ ಭಂಡಾರವನ್ನು ತಮ್ಮ ಮನೆಗಳಿಗೆ ತರುವರಂತೆ. ಈ ದೇವಿಯನ್ನು ಪೂಜಿಸುವ ಸಂದರ್ಭದಲ್ಲಿ ಈ ದೇವಿಗೆ ಮೈಲಾರಲಿಂಗದ ಭಂಡಾರವನ್ನು ಧರಿಸುವರಂತೆ. ಇದೊಂದು ವಿಶಿಷ್ಟ ಸಂಪ್ರದಾಯ. ಈ ಪಂಚಗಟ್ಟಿ ವಂಶಸ್ಥರು ವೀರಶೈವರ ಪಂಚ ಪೀಠಗಳಲ್ಲಿ ಒಂದಾದ ಕಾಶೀ ಪೀಠಕ್ಕೆ ಸೇರಿದವರಂತೆ. ಈ ಅಧ್ಯಯನದಿಂದ ಬನಶಂಕರಿ ದೇವಾಲಯದ ಮೂಲ ಹೆಸರು ಅದರ ವಾಸ್ತು ಶಿಲ್ಪದ, ಹಾಗೂ ಭಕ್ತ ಸಮೂಹ ಮತ್ತು ಅರ್ಚಕರ ಸಂಪ್ರದಾಯ ಕೊನೆಗೆ ಈ ದೇವಿ ಹಾಗೂ ಮೈಲಾರಲಿಂಗಕ್ಕೆ ಹೊಂದಿದ ಧಾರ್ಮಿಕ ಸಂಬಂಧಗಳು ಕಂಡುಬರುತ್ತವೆ.

ವಾಸ್ತುಶಿಲ್ಪದ ದೃಷ್ಟಿಯಿಂದ ಅದರ ಗರ್ಭಗೃಹದಿಂದ ಸಭಾಮಂಟಪದವರೆಗಿನ ಇಟ್ಟಿಗೆಯ ಕಟ್ಟಡ ಸು.ಕ್ರಿ.ಶ.೯ ನೇ ಶತಮಾನದ್ದೆಂದು ಹೇಳಬಹುದು. ಈ ಗ್ರಾಮದಲ್ಲಿ ಹೊಸದಾಗಿ ಶಾಸನಗಳಿರುವ ಎರಡು ಗೋಸಾಸ ಕಂಬಗಳು ಕಂಡುಬಂದಿವೆ. ಇವು ಸು.ಕ್ರಿ.ಶ. ೯ ನೇ ಶತಮಾನ.

ಈಶ್ವರ ದೇವಾಲಯ (ಘಾಳಪೂಜಿ):

ಬ್ಯಾಡಗಿ ತಾಲೂಕಿನ ಘಾಳಪೂಜಿ ಗ್ರಾಮದ ಹೊರಗಡೆ ಚಿಕ್ಕ ಈಶ್ವರ ದೇವಾಲಯವಿದೆ.

ಇದನ್ನು ಇಟ್ಟಿಗೆಯಿಂದ ಕಟ್ಟಲಾಗಿದೆ. (ಚಿತ್ರ ನಂ ೪) ಅಲ್ಲಲ್ಲಿ ಇಟ್ಟಿಗೆಯ ಗೋಡೆ ಶಿಥಿಲಗೊಂಡಿದೆ. ಚಚೌಕ ಗರ್ಭಗೃಹ ಮತ್ತು ಅರ್ಧ ಮಂಟಪವಿದೆ. (ಈ ಭಾಗ ಶಿಥಿಲವಾಗಿದೆ.) ಗರ್ಭಗೃಹದಲ್ಲಿ ಶಿವಲಿಂಗ (ತದನಂತರ ಕಾಲ) ಮಾತ್ರವಿದೆ. ಗರ್ಭಗೃಹ ಬಾಗಿಲು ಚೌಕಟ್ಟಿನಲ್ಲಿ ವಿವಿಧ ನಾಲ್ಕು ಸರಳ ಶಾಖೆಗಳಿದ್ದು ಅವುಗಳಲ್ಲಿ ಬಳ್ಳಿಗಳು, ರತ್ನಪಟ್ಟಿಕೆಗಳು, ಎದ್ದು ಕಾಣುವ ಸಿಂಹಗಳು ಮತ್ತು ಲತಾಸುರಳಿಗಳ ವಿವಿಧ ಅಲಂಕಾರಗಳಿವೆ. ಈ ಶಾಖೆಗಳ ಬುಡದಲ್ಲಿ ತುಂಬಿದ ಪೂರ್ಣಕುಂಭಗಳಿವೆ. ಈ ಶಾಖೆಗಳು ಲಲಾಟದಲ್ಲೂ ಹರಿದಿದ್ದು ಅವುಗಳ ಮಧ್ಯ

ಗಜಲಕ್ಷ್ಮಿಯ ಉಬ್ಬು ಶಿಲ್ಪವಿದೆ. ಎರಡು ಆನೆಗಳು ಕುಂಭವನ್ನು ಸೊಂಡಿಲಲ್ಲಿ ಹೊತ್ತು ನಿಂತು ಲಕ್ಷ್ಮೀಯನ್ನು ಅಭಿಷೇಕ ಮಾಡುತ್ತಿವೆ. ಈ ದೇವಾಲಯದ ಹತ್ತಿರ ಕೆರೆಯಿದೆ. ಶೈಲಿಯ ದೃಷ್ಟಿಯಿಂದ ಇದು ಸುಮಾರು ಕ್ರಿ. ಶ. ೧೦ ನೇ ಶತಮಾನ ಇಲ್ಲಿಯ ಒಂದು ಶಾಸನದಲ್ಲಿ ರಾಷ್ಟ್ರಕೂಟ ಅಮ್ಮಡಿ ಕೃಷ್ಣನ ಕಾಲದಲ್ಲಿ ಮಹದೇವ ದೇವಾಲಯಕ್ಕೆ ನೀಡಿದ ದತ್ತಿ ವಿವರವಿದೆ. ಇದರಿಂದ ಈ ದೇವಾಲಯದ ಮೂಲ ಹೆಸರು ಮಹಾದೇವ ಎಂದು ತಿಳಿಯುತ್ತದೆ.

ಇಲ್ಲಿಯ ಮಾರುತಿ ಮಂದಿರದ ಹಿಂಬದಿಗೆ ಒಂದು ಸ್ತಂಭದ ಮೇಲೆ ಗರುಡನ ದುಂಡು ಶಿಲ್ಪವಿರುವುದು ಗಮನೀಯ. ಅಂಜಲಿ ಮುದ್ರೆಯಲ್ಲಿ ಕುಳಿತ ಗರುಡನಿಗೆ ರೆಕ್ಕೆಗಳಿವೆ. ಸ್ತಂಭಕ್ಕೆ ಚತುರ್ಮುಖಿಗಳಿದ್ದು ಅದು ಸರಳವಾಗಿದೆ. ಅದರಲ್ಲಿ ಯಾವ ಶಾಸನಗಳಿಲ್ಲ. ಇದು ಸುಮಾರು ಕ್ರಿ.ಶ.೧೦ ನೇ ಶತಮಾನ.

ರಾಮೇಶ್ವರ ದೇವಾಲಯ (ಬಡಮಳ್ಳಿ)

ಬಡಮಳ್ಳಿ (ಬ್ಯಾಡಗಿ ತಾಲೂಕ) ಗ್ರಾಮದ ಉತ್ತರಕ್ಕೆ ರಾಮೇಶ್ವರ ದೇವಾಲಯವಿದ್ದು ಇದು ಪೂರ್ವಕ್ಕೆ ಮುಖಮಾಡಿದೆ. (ಚಿತ್ರ ಸಂ. ೫) ಇದನ್ನು ಇಟ್ಟಿಗೆಯಿಂದ ಕಟ್ಟಲಾಗಿದೆ. ಇದರ ಪಕ್ಕದಲ್ಲಿ ಒಂದು ಚಿಕ್ಕ ಕೆರೆಯಿದೆ. ಈ ದೇವಾಲಯಕ್ಕೆ ಒಂದು ಚಚೌಕ ಗರ್ಭಗೃಹವಿದೆ. ಇದರ ಅರ್ಧ ಮಂಟಪ ಭಾಗ ಸಂಪೂರ್ಣ ಜೀರ್ಣೋದ್ಧಾರವಾಗಿದೆ. ಇದರಲ್ಲಿ ತದನಂತರ ಕಾಲದ ಶಿವಲಿಂಗವಿದೆ. ಇಟ್ಟಿಗೆಯ ಗರ್ಭಗೃಹದ ಗೋಡೆಯಲ್ಲಿ ಅರ್ಧಗಂಬಗಳಿವೆ. ಶೈಲಿಯ ದೃಷ್ಟಿಯಿಂದ ಇದೊಂದು ಸು.ಕ್ರಿ.ಶ. ೧೦ ನೇ ಶತಮಾನ.

ಇಲ್ಲಿಯ ಕ್ರಿ.ಶ.೯೪೩ ರ ರಾಷ್ಟ್ರಕೂಟ ದೊರೆ ಮುಮ್ಮಡಿ ಕೃಷ್ಣನ ಒಂದು ಶಾಸನವಿದ್ದು ಅದರಲ್ಲಿ ಭೀಮರಸನ ಉಲ್ಲೇಖವಿದೆ. ಈ ಶಾಸನದ ಮೇಲೆ ಮಂಗಳ ಚಿಹ್ನೆಗಳಾದ ಹಸು-ಕರು, ಸೂರ್ಯ-ಚಂದ್ರ, ಧ್ವಜ, ಪೂರ್ಣಕುಂಭ, ಚಕ್ರ, ಮೀನು, ಅಗ್ನಿ, ಖಡ್ಗ ಶಿವಲಿಂಗಗಳಿರುವುದು ಗಮನೀಯ. (ಚಿತ್ರ ಸಂ. ೫ ಎ)

ಶಿಲೆಯ ದೇವಾಲಯಗಳು:

ಈ ಕಾಲದ ಶಿಲೆಯ ದೇವಾಲಯಗಳು ಹಾವೇರಿ ತಾಲೂಕಿನ ಕಿತ್ತೂರ, ದೇವಿಹೊಸೂರ, ಬ್ಯಾಡಗಿ ತಾಲೂಕಿನ ಮೋಟೆಬೆನ್ನೂರು ಮತ್ತು ಹಿರೇಕೆರೂರ (ಹಿರೇಕೆರೂರ ತಾಲೂಕ) ಶಿಗ್ಗಾಂವ ತಾಲೂಕಿನ ಹೋಟಳ್ಳಿಗಳಲ್ಲಿ ಕಂಡಿವೆ. ಸಾಮಾನ್ಯವಾಗಿ ಇವುಗಳಿಗೆ ಚಚೌಕ ಗರ್ಭಗೃಹ, ಅರ್ಧ ಮಂಟಪ ಮತ್ತು ನವರಂಗಗಳಿವೆ.

ಮಾರುತಿ ಮಂದಿರ (ಚಿಕ್ಕೇರೂರು):

ಚಿಕ್ಕೇರೂರು ಗ್ರಾಮ ಹೊರಗಡೆ ಮಾರುತಿ ಮಂದಿರವಿದೆ. ಒಳಗಡೆ ಬೃಹದಾಕಾರದ ಮಾರುತಿ ವಿಗ್ರಹ. ಈ ದೇವಾಲಯಕ್ಕೆ ಗರ್ಭಗೃಹ, ಅಂತರಾಳ ನವರಂಗಗಳಿವೆ. ಗರ್ಭಗೃಹ ಚೌಕಾಗಿದೆ. ಮಾರುತಿ ವಿಗ್ರಹ ತದನಂತರ ಕಾಲದ್ದು. ಅಂತರಾಳ ಛತ್ತಿನಲ್ಲಿ ಹಲವಾರು ಕಮಲ ಚಿತ್ರಗಳಿವೆ.(Multi lotuses) (ಚಿತ್ರ ನಂ. ೬) ಇದರ ದ್ವಾರಬಾಗಿಲ ಚೌಕಟ್ಟಿನಲ್ಲಿಸರಳ ಎಂಟು ಶಾಖೆಗಳಿವೆ. ಈ ಶಾಖೆಗಳು ಲಲಾಟದಲ್ಲಿ ಹರಿದಿದ್ದು ಇವುಗಳ ಮಧ್ಯ ಗಜಲಕ್ಷ್ಮೀ ಪದ್ಮಾಸನದಲ್ಲಿ ಕುಳಿತಿರುವಳು. ಬದಿಗಳಲ್ಲಿ ಎರಡು ಆನೆಗಳು ನಿಂತು ಪೂರ್ಣಕುಂಭಗಳಿಂದ ಈ ದೇವಿಯ ತಲೆಯ ಮೇಲಿಂದ ನೀರನ್ನು ಹಾಕಿ ಅಭಿಷೇಕ ಮಾಡಿಸುತ್ತಿವೆ . ಲಕ್ಷ್ಮಿಯ ದ್ವಿಭುಜಗಳಲ್ಲಿ ಕಮಲಗಳಿವೆ. (ಚಿತ್ರ ನಂ. ೬ ಎ) ಬಾಗಿಲು ಫಲಕಗಳ ಕೆಳಗಡೆ ಯಾವ ಚಿತ್ರಗಳಿಲ್ಲ. ಆದರೆ ಈ ದ್ವಾರಗಳ ಬದಿಗೆ ಜಲಾಂಧರಗಳಿವೆ. ನವರಂಗದ ಮಧ್ಯೆ ಎತ್ತರದ ಕಟ್ಟೆಯಿದ್ದು ಇದರ ಮೇಲೆ ನಾಲ್ಕು ಅಲಂಕೃತ ದುಂಡು ಕಂಬಗಳಿವೆ. (ಚಿತ್ರ ನಂ.೭) ಕಂಬಗಳನ್ನು ಚೌಕಾದ ಪೀಠಗಳ ಮೇಲೆ ನಿಲ್ಲಿಸಲಾಗಿದೆ. ಕಂಬಗಳ ಕೆಳಗಿನ ಕಾಂಡ ಭಾಗ ಚೌಕಾಗಿ ಅದರ ಮೇಲೆ ಗಂಟೆ ನಮೂನೆಗಳಿವೆ. ಮಧ್ಯ ಭಾಗ ಗಂಟೆಯಂತಿದ್ದು ಅದಕ್ಕೆ ಅಷ್ಟಮುಖಗಳಿವೆ. ಇದರ ಮೇಲೆ ರತ್ನಪಟ್ಟಿಕೆ ಸ್ತರವಿದೆ. ಇದರ ಕೆಳಗಡೆ ಸುತ್ತಲೂ ಕೀರ್ತಿಮುಖಗಳಿವೆ. ಇವುಗಳ ಬಾಯಿಂದ ಇಳಿಬಿದ್ದ ಎರಡು ಎಳೆಯ ಉದ್ದನೆಯ ಮುತ್ತಿನ ಹಾರಗಳ ಅಲಂಕಾರವಿದೆ. ಈ ರೀತಿಯ ರತ್ನಪಟ್ಟಿಕೆ ಇನ್ನೆರಡು ಕಂಬಗಳಿಗಿಲ್ಲ. ಅದರ ಮೇಲೆ. ದುಂಡಾದ ಪಟ್ಟಿವಿದೆ. ಈ ಉದ್ದವಾದ ಕಾಂಡ ಪಟ್ಟಿ ಮೇಲೆ ದುಂಡಾಕಾರದ ಪೀಠವಿದೆ. ಅದರ ಮೇಲೆ ೪೫° ಯಲ್ಲಿ ಕೊರೆದ ಚಾಚುಪೀಠವಿದ್ದು ಅದರ ನಾಲ್ಕು ಬಾಹುಗಳಲ್ಲಿ ಸರಳ ಪಟ್ಟಿಗಳಿವೆ. ಈ ಕಂಬಗಳ ಮಧ್ಯ ಛತ್ತಿನಲ್ಲಿ ಅರಳಿದ ಪದ್ಮವನ್ನು ವಿಸ್ತಾರವಾಗಿ ಅಲಂಕರಿಸಲಾಗಿದೆ. ಈ ದೇವಾಲಯದ (ತದನಂತರ ಕಾಲದಲ್ಲಿ) ಗೋಡೆಗಳು ಮತ್ತು ಹೊರಗಿನ ಭಾಗ ಜೀರ್ಣೋದ್ಧಾರವಾಗಿದೆ. ಇದರಿಂದ ಹೊರಗೋಡೆಯಲ್ಲಿ ಎರಡು ಕಡೆ ಉಬ್ಬು ಚಿತ್ರ ಫಲಕಗಳಿವೆ. ನವರಂಗದ ಮುಂದಿನ ಭಾಗ ಹಾಗೂ ಶಿಖರದ ಮೂಲಸ್ವರೂಪ ಈಗ ಕಾಣದಾಗಿದೆ. ಈ ದೇವಾಲಯದ ಕಾಲಮಾನ ಸು.ಕ್ರಿ.ಶ.೧೦ ನೇ ಶತಮಾನ. ಈ ದೇವಾಲಯದ ಹೊರಬದಿಯಲ್ಲಿರುವ ಸು.ಕ್ರಿ.ಶ. ೨,೩ ನೇ ಶತಮಾನದ ಬಾಣದ ಚಿಹ್ನೆಯಿರುವ ಶಿವಲಿಂಗವನ್ನು ಇಲ್ಲಿ ಸ್ಮರಿಸಲಾಗಿದ್ದು ಇದನ್ನು ಈ ಹಿಂದೆ ಅಭ್ಯಾಸ ಮಾಡಲಾಗಿದೆ.[೧೦] ಈ ಮೊದಲು ಈ ಗ್ರಾಮದಲ್ಲಿ ಬೆಳಕಿಗೆ ಬಂದ ಕ್ರಿ.ಶ.೯೬೭ ರ ಒಂದು ಶಾಸನ ಅತ್ಯಂತ ಪ್ರಾಚೀನದಾಗಿತ್ತು[೧೧] ಎಂಬುದನ್ನು ಇಲ್ಲಿ ಸ್ಮರಿಸಲಾಗಿದೆ ಹಾಗೂ ಹೊಸದಾಗಿ ಈ ದೇವಾಲಯ ಹತ್ತಿರದ ಕಾಲುವೆಯಲ್ಲಿ ಸು.ಕ್ರಿ.ಶ. ೬ ನೇ ಶತಮಾನದ ಒಂದು ಶಾಸನ ದೊರೆತಿದೆ.

ಸೋಮೇಶ್ವರ ದೇವಾಲಯ (ಮತ್ತೀಹಳ್ಳಿ)

ಹಿರೇಕೆರೂರ ತಾಲೂಕಿನ ಮತ್ತೀಹಳ್ಳಿಯ ಸೋಮೇಶ್ವರ ದೇವಾಲಯದ ಒಂದು ಬಾಗಿಲ ಚೌಕಟ್ಟು ಈ ಕಾಲದ್ದಾಗಿದೆ. ಈಗಿನ ದೇವಾಲಯ ತದನಂತರ ಕಾಲದ್ದು. ಈ ದ್ವಾರದ ಚೌಕಟ್ಟಿನ ಲಲಾಟದಲ್ಲಿ ಗಜಲಕ್ಷ್ಮೀ, ಬಾಗಿಲ ಫಲಕಗಳಲ್ಲಿ ಐದು ಶಾಖೆಗಳಿವೆ. ಈ ಶಾಖೆಗಳಲ್ಲಿ ರತ್ನಪಟ್ಟಿಕೆ, ವಿಸ್ತಾರವಾದ ಲತಾಬಳ್ಳಿ, ಅರ್ಧಗಂಬ (ಹಗ್ಗದಂತೆ), ಸುರುಳಿಗಳಲ್ಲಿ ನೃತ್ಯಗಾರರು ಮತ್ತು ಬಳ್ಳಿಗಳ ಸುರುಳಿ ಅಲಂಕಾರಗಳಿವೆ. ಗಜಲಕ್ಷ್ಮೀ ಬದಿಗಳಲ್ಲಿ ಈ ಶಾಖೆಗಳು ಹರಿದಿವೆ. ಬಾಗಿಲ ಫಲಕಗಳ ಕೆಳಭಾಗದಲ್ಲಿ ಶೈವ ದ್ವಾರಪಾಲಕರು ತ್ರಿಭಂಗಿಯಲ್ಲಿ ನಿಂತಿರುವರು. ಚತುರ್ಭುಜಧಾರಿಗಳಾದ ಇವರ ಕೈಗಳಲ್ಲಿ ಅಭಯ, ಡಮರು, ತ್ರಿಶೂಲ ಮತ್ತು ಗಧೆಗಳಿವೆ. ಇವರ ಬದಿಗಳಲ್ಲಿ ಅರ್ಧ ಗಂಬಗಳಿವೆ. (ಚಿತ್ರ ನಂ ೧೫ ಮತ್ತು ೧೬) ಕ್ರಿ.ಶ.೧೧, ೧೨ ನೇ ಶತಮಾನದ ಶಾಸನಗಳಲ್ಲಿ ಈ ದೇವಾಲಯದ ಹೆಸರು ಸ್ವಯಂಭುದೇವರೆಂದು ಉಲ್ಲೇಖವಾಗಿದೆ.[೧೩]

ದೇವಿ ದೇವಾಲಯ (ಹಂಸಭಾವಿ):

ಹಿರೇಕೆರೂರು ತಾಲೂಕಿನ ಹಂಸಭಾವಿ ಗ್ರಾಮದಿಂದ ಸಾತೇನಹಳ್ಳಿಗೆ ಕೆರೆಯ ದಂಡೆಯ ಮೇಲೆ ಹೋಗುವ ದಾರಿಯ ಬದಿಯಲ್ಲಿ ಹಾಳಾದ ಒಂದು ಸ್ಥಳವಿದೆ. ಇದನ್ನು ದುರಗವ್ವನ ಗುಡಿ ಎಂದೂ ಕರೆಯುತ್ತಾರೆ. ಈ ತಳಪಾಯದಲ್ಲಿ ಚಚೌಕ ಗರ್ಭಗೃಹ ಮಾತ್ರ ಉಳಿದಿದೆ.(ಚಿತ್ರ ಸಂ.೮) ಇದರ ಮಧ್ಯೆ ನಿಲ್ಲಿಸಿದ ಮಹಿಷಾಸುರಮರ್ಧಿನಿಯ ಶಿಲ್ಪ ಎರಡು ತುಂಡುಗಳಾಗಿವೆ. ಕೈಗಳೂ ಮುರಿದಿವೆ. ಇವುಗಳನ್ನು ಪಕ್ಕದ ಅರಳೀಗಿಡ ಕೆಳಗಡೆ ನಿಲ್ಲಿಸಲಾಗಿದೆ. (ಚಿತ್ರ ನಂ.೯ ಮತ್ತು ೯ಎ) ಮುರಿದ ಎರಡು ಕೈಗಳಲ್ಲಿ ಒಂದರಲ್ಲಿ ಶಂಖ ಇನ್ನೊಂದರಲ್ಲಿ ಚಕ್ರಗಳಿವೆ. ಈ ಶಿಲ್ಪದಲ್ಲಿ ದೇವಿಯ ಅಲಂಕಾರವನ್ನು ಎರಡೂ ಬದಿಗೆ ಚಿತ್ರಿಸಲಾಗಿದೆ. ಮುಂಭಾಗದಲ್ಲಿ ದೇವಿಯ ಮುಖ (ಸ್ವಲ್ಪ ಮುಕ್ಕಾಗಿದೆ) ಎದ್ದು ಕಾಣುವ ಕುಚ ಹಾಗೂ ಕಿರಿದಾದ ನಡಗಳಿವೆ. ಹಾಗೂ ಕೆಳಭಾಗದಲ್ಲಿ ಈಕೆಯ ಪಾದದ ಮುಂದೆ ಮಹಿಷಾಸುರನಿದ್ದು ಇವನು ಮನುಷ್ಯ-ಪ್ರಾಣಿಯ ರೂಪದಲ್ಲಿರುವನು. ಈತನು ಬಲಗೈಯಲ್ಲಿ ಉದ್ದವಾದ ಕತ್ತಿಯನ್ನು ಹಿಡಿದಿರುವನು. ದೇವಿಯು ಕರಂಡ ಮಕುಟ, ಕರ್ಣಕುಂಡಲ, ಕೊರಳಹಾರ, ಸೊಂಟದಲ್ಲಿ ವಸ್ತ್ರ ಇತ್ಯಾದಿ ಆಭರಣಗಳನ್ನು ಧರಿಸಿ ಭೂಷಿತಳಾಗಿದ್ದಾಳೆ. ಈಕೆಗೆ ಅರ್ಧ ವೃತ್ತಾಕಾರದ ಪ್ರಭಾವಂಡಳವಿದೆ. ದೇವಿಯ ಹಿಂಬದಿಯನ್ನೂ ಬಹು ಆಕರ್ಷಣೀಯವಾಗಿ ಅಲಂಕರಿಸಲಾಗಿದೆ. ತಲೆಯ ಹಿಂಬದಿಯ ತುರುಬಿನಲ್ಲಿ ಒಂದು ವೃತ್ತದೊಳಗೆ

ಕಮಲದಳಗಳನಿಟ್ಟು ಅದನ್ನು ಅಲಂಕರಿಸಿರುವುದು ಬಹು ಆಕರ್ಷಣೀಯವಾಗಿ ಕಾಣುತ್ತದೆ. ಮಧ್ಯದಲ್ಲಿ ಮಣಿಯಾಕಾರದಲ್ಲಿ ಕಟ್ಟಿದ ಜಡೆಯ ಚುಂಗನ್ನು ತೂಗು ಬಿಡಲಾಗಿದೆ. ಇದಲ್ಲದೆ ಸೊಂಟಕ್ಕೆ ಕಟ್ಟಿದ ಅಲಂಕಾರ ಸೀರೆಯನ್ನು ಬಿಗಿಯಾಗಿ ಎಳೆದು ಧರಿಸಿಕೊಂಡಿರುವಳು. ಈ ಶಿಲ್ಪದ ಕಾಲಮಾನ ಸು.ಕ್ರಿ.ಶ.೯ ನೇ ಶತಮಾನ. ಈ ಶಿಲ್ಪದ ಬದಿಗೆ ಸು.ಕ್ರಿ.ಶ. ೯ ನೇ ಶತಮಾನದ ವೀರಗಲ್ಲಿದ್ದು ಅದರಲ್ಲಿ ಕಲಿವಿಟ್ಟ ಇತ್ಯಾದಿ ಉಲ್ಲೇಖಿಸಿದೆ.[೧೪]

ರಾಮೇಶ್ವರ ದೇವಾಲಯ (ಮಾಸಣಗಿ)

ಮಾಸಣಗಿ (ಬ್ಯಾಡಗಿ ತಾಲೂಕ) ಗ್ರಾಮದ ವೀರಭದ್ರ ಗುಡಿ ಮತ್ತು ಕೆರೆಯ ದಂಡೆಯ ಬದಿಗೆ ಒಂದು ರಾಮೇಶ್ವರ ದೇವಾಲಯವಿದೆ. (ಚಿತ್ರ ನಂ ೧೦) ಈ ದೇವಾಲಯಕ್ಕೆ ದ್ವಿಕೂಟಗಳಿದ್ದು ಇದು ಪೂರ್ವಕ್ಕೆ ಮುಖ ಮಾಡಿದೆ. ಇದರ ಎರಡು ಗರ್ಭಗೃಹಗಳಿಗೆ ತಲಾ ಒಂದು ಅಂತರಾಳಗಳಿದ್ದು ಎರಡಕ್ಕೂ ಒಂದೇ ನವರಂಗವಿದೆ. ಪೂರ್ವಕ್ಕೆ ಮುಖಮಾಡಿದ ಗರ್ಭ ಗೃಹಗಳಲ್ಲಿ ಶಿವಲಿಂಗ ಮತ್ತು ದಕ್ಷಿಣಕ್ಕೆ ಮುಖಮಾಡಿದ ಗರ್ಭಗೃಹದಲ್ಲಿ ವಿಷ್ಣು ವಿಗ್ರಹಗಳಿವೆ. ಶಿವಲಿಂಗವಿರುವ ಅಂತರಾಳದ ಹೊರಗೋಡೆಗಳಲ್ಲಿ ಎರಡು ಚಿಕ್ಕ ದೇವಕೋಷ್ಟಗಳಿವೆ. ಇವುಗಳಲ್ಲಿ ಒಂದರ ಗೂಡಿನಲ್ಲಿ ಮಾತ್ರ ಸುಂದರ ಮಹಿಷಮರ್ಧಿನಿ ಶಿಲ್ಪವಿದೆ. ನವರಂಗ ಮಧ್ಯೆ ಎತ್ತರ ಕಟ್ಟೆ ಅದರ ನಾಲ್ಕು ಕಡೆಗಳಲ್ಲಿ ಕಂಬಗಳಿವೆ. ಅದರ ದ್ವಾರದ ಬಾಗಿಲು ಚೌಕಟ್ಟು, ಅಲಂಕಾರವಿಲ್ಲದೆ ಸರಳವಾಗಿದೆ. ಬಾಗಿಲ ಫಲಕಗಳಿಗೆ ನಾಲ್ಕು ಸರಳ ಶಾಖೆಗಳಿದ್ದು ಅವು ಲಲಾಟದಲ್ಲೂ ಹರಡಿವೆ. ಅದರ ಮಧ್ಯೆ ಯಾವ ಚಿತ್ರಗಳಿಲ್ಲ. ನವರಂಗದ ಗೋಡೆ ಭಾಗಗಳು ತದನಂತರ ಕಾಲದಲ್ಲಿ ಜೀರ್ಣೋದ್ಧಾರವಾಗಿವೆ.

ಈ ದೇವಾಲಯದ ಎದುರಿಗೆ ಒಂದು ನಂದಿ ಶಿಲ್ಪವಿದೆ. ಉದ್ದ ಗಂಟೆಗಳನ್ನು ಹೊಂದಿದ ಗಂಟೆಹಾರವನ್ನು ಕೊರಳಲ್ಲಿ ಸರಳ ಹಾರಗಳನ್ನು ಕೋಡುಗಳಲ್ಲಿ ಧರಿಸಲಾಗಿದೆ. (ಚಿತ್ರ ನಂ.೧೦ಎ) ಈ ದೇವಾಲಯದ ಬಾಗಿಲು ಚೌಕಟ್ಟು, ಕಂಬಗಳು, ಗರ್ಭಗೃಹ, ನಂದಿ, ಮಹಿಷಮರ್ಧಿನಿ ಶಿಲ್ಪಗಳು ಶೈಲಿಯ ದೃಷ್ಟಿಯಿಂದ ಇವು ಸು.ಕ್ರಿ.ಶ. ೧೦ ನೇ ಶತಮಾನದ್ದಾಗಿವೆ.

ಈ ದೇವಾಲಯದ ಬದಿಗಿನ ಒಂದು ಶಾಸನ[೧೫] ರಾಷ್ಟ್ರಕೂಟ ಅಕಾಲವರ್ಷನದು. ಇದು ಸು.ಕ್ರಿ.ಶ. ೯ ನೇ ಶತಮಾನ. ಈ ಶಾಸನದ ಮೇಲ್ಭಾಗದಲ್ಲಿ ಗಜಲಕ್ಷ್ಮೀ, ಹಸು-ಕರು, ನೇಗಿಲು, ಪೂರ್ಣಕುಂಭ, ಮೀನು, ಸೂರ್ಯ, ಚಂದ್ರರ ಮಂಗಳ ಚಿಹ್ನೆಗಳಿವೆ. ಲಕ್ಷ್ಮಿಯು ಪದ್ಮಾಸನದಲ್ಲಿ ಕುಳಿತಿದ್ದು ತನ್ನ ದ್ವಿಭುಜ ಕೈಗಳಲ್ಲಿ ಕಮಲಗಳನ್ನು ಹಿಡಿದಿರುವಳು. ದೇವಿಯು ನಾಲ್ಕು ಆನೆಗಳಿವೆ. ಕೆಳಗಡೆ ಎರಡು ಮೇಲ್ಗಡೆ ಎರಡು ಆನೆಗಳಿದ್ದು ಅವುಗಳಲ್ಲಿ ಮೇಲಿನವು ನಿಂತು ಬದಿಗೆ ಕುಂಭದಿಂದ ನೀರನ್ನು ಸುರಿಸಿ ದೇವಿಗೆ ಅಭಿಷೇಕ ಮಾಡುತ್ತಿವೆ. (ಚಿತ್ರ ನಂ.೧೦ ಬಿ) ಈ ಶಾಸನದಲ್ಲಿ ಚೋಕವೆ ಬನವಾಸಿಯನ್ನು ಆಳುವಾಗ ಬಾಸಪ್ಪುರ ನಾಡ್ಗಾವುಂಡ ನೆಲ್ಲಿಗುಂದದ ಮಾಸಳಗೆಯು ದೇವಾಲಯಕ್ಕೆ ದಾನ ನೀಡಿದ ವಿವರವಿದೆ.

ಕೋಟೇಶ್ವರ ದೇವಾಲಯ (ಹಿರೇಹಳ್ಳಿ)

ಹಿರೇಹಳ್ಳಿ ಗ್ರಾಮ (ಬ್ಯಾಡಗಿ ತಾಲೂಕ)ದ ಕೆರೆ ದಂಡೆಯ ಮೇಲೆ ವಿಶಾಲವಾದ ಕೋಟೇಶ್ವರ ದೇವಾಲಯವಿದೆ. ಈ ದೇವಾಲಯಕ್ಕೆ ದ್ವಿಕೂಟಗಳಿವೆ. ಇದು ಮುಖ್ಯವಾಗಿ ಪೂರ್ವಕ್ಕೆ ಮುಖ ಮಾಡಿದೆ. ಈ ದೇವಾಲಯವು ಶಿಲೆಯಿಂದ ನಿರ್ಮಿಸಲಾಗಿದೆ. ಒಂದೊಂದು ಕೂಟಕ್ಕೆ ಗರ್ಭಗೃಹ ಮತ್ತು ಅಂತರಾಳಗಳಿವೆ. ಈ ಎರಡು ಗರ್ಭಗೃಹಗಳಲ್ಲಿ ಕ್ರಮವಾಗಿ ಶಿವಲಿಂಗ ಮತ್ತು ವಿಷ್ಣು ವಿಗ್ರಹಗಳಿವೆ. ಇವುಗಳಿಗೆ ಒಂದೇ ಸಭಾಮಂಟಪವಿದೆ. ಇದರ ದ್ವಾರ ಬದಿಯ ಗೋಡೆಗಳಲ್ಲಿ ಚಿಕ್ಕ ಚಿಕ್ಕ ಗೂಡುಗಳಿವೆ. ಶಿವಲಿಂಗವಿರುವ ಅಂತರಾಳದ ಬಾಗಿಲು ಚೌಕಟ್ಟಿನ ಉತ್ತರಾಂಗದಲ್ಲಿ ಮಕರತೋರಣದಲ್ಲಿ ತ್ರಿಮೂರ್ತಿಗಳ ಶಿಲ್ಪಗಳಿರುವುದು ಗಮನೀಯ. ಈ ದೇವಾಲಯ ಹಾಗೂ ಈ ತ್ರಿಮೂರ್ತಿಗಳ ಶಿಲ್ಪ ಶೈಲಿ ಸು.ಕ್ರಿ.ಶ.೧೧ ನೇ ಶತಮಾನ.

ಈ ದೇವಾಲಯದಲ್ಲಿ ಕಾರ್ತಿಕೇಯ, ನಾಗ, ಸಪ್ತಮಾತ್ರಿಕ, ಷೈವಿಧ್ಯಮಯ ಸತಿಕಲ್ಲು ಇತ್ಯಾದಿ ಶಿಲ್ಪಗಳಿವೆ. ಈ ದೇವಾಲಯದ ಪೂರ್ವಮುಖ ಗರ್ಭಗೃಹದಲ್ಲಿರುವ ಶಿವಲಿಂಗ ಮಹತ್ವದ್ದು. ಈ ಶಿವಲಿಂಗದ ಮೇಲಿನ ಬ್ರಹ್ಮಸೂತ್ರ ಸು.ಕ್ರಿ.ಶ.೯ ನೇ ಶತಮಾನದ ಶೈಲಿಯಲ್ಲಿರುವುದು ಗಮನೀಯ. ಆದರೆ ಅಲ್ಲಿ ಕ್ರಿ.ಶ.೧೧ ನೇ ಶತಮಾನ ನಂತರದ ಶಾಸನಗಳಿವೆ. ಅಲ್ಲಿಯ ಕ್ರಿ.ಶ.೧೧೨೧ ರ ಒಂದು ಶಾಸನದಲ್ಲಿ ಗೊಟ್ಟಿಗಡಿ ಗ್ರಾಮದಲ್ಲಿ ಲಿಂಗಜೇಶ್ವರನ ಪ್ರತಿಷ್ಠಾಪನೆಯ[೨] ಉಲ್ಲೇಖವಿದೆ.

ಸಂಗಮೇಶ್ವರ ದೇವಾಲಯ(ಕಿತ್ತೂರ)

ಹಾವೇರಿ ತಾಲೂಕಿನ ಕಿತ್ತೂರ ಗ್ರಾಮ ಪೂರ್ವಕ್ಕೆ ಸು. ಅರ್ಧ ಕಿ. ಮೀ. ದೂರದಲ್ಲಿ ಮತ್ತು ವರಾಹ ನದಿ ದಂಡೆಯಲ್ಲಿ ಸಂಗಮೇಶ್ವರ ದೇವಾಲಯವಿದೆ. ಈ ದೇವಾಲಯ ಪೂರ್ವಕ್ಕೆ ಮುಖಮಾಡಿದ್ದು ಇದರ ಮುಂದಿನ ಭಾಗ ಹಾಗೂ ಗೋಡೆ-ಛತ್ತುಗಳು ಜೀರ್ಣೋದ್ಧಾರವಾಗಿವೆ ಈ ದೇವಾಲಯಕ್ಕೆ ಚೌಕಾಕಾರದ ಗರ್ಭಗೃಹ, ಅರ್ಧ ಮಂಟಪ ಮತ್ತು ನವರಂಗಗಳಿವೆ. ಅದರ ಗೋಡೆ ಭಾಗ ನಂತರ ಕಾಲದ್ದಾಗಿವೆ.

ಗರ್ಭಗೃಹದ ಮಧ್ಯ ಶಿವಲಿಂಗವಿದೆ. ಇದರ ಬಾಗಿಲು ಚೌಕಟ್ಟಿನ ಬಾಗಿಲು ಫಲಕಕ್ಕೆ ನಾಲ್ಕು ಶಾಖೆಗಳಿದ್ದು ಇದರ ಲಲಾಟಬಿಂಬದಲ್ಲಿ ಗಜಲಕ್ಷ್ಮೀ ಇರುವಳು. ದೇವಿಯು ಪದ್ಮಾಸನದಲ್ಲಿ ಕುಳಿತಿದ್ದು, ತನ್ನ ಎರಡೂ ಕೈಗಳಲ್ಲಿ ಕಮಲಮೊಗ್ಗುಗಳನ್ನು ಹಿಡಿದಿದ್ದಾಳೆ. ಬದಿಗಳಲ್ಲಿ ನಿಂತ ಎರಡು ಆನೆಗಳು ಸೊಂಡಿಲಲ್ಲಿ ಪೂರ್ಣಕುಂಭಗಳನ್ನು ಹೊತ್ತು ದೇವಿಗೆ ಅಭಿಷೇಕ ಮಾಡಿಸುತ್ತಿವೆ. ಬಾಗಿಲು ಫಲಕದಲ್ಲಿ ಕ್ರಮವಾಗಿ ಲಂಬಕೋನದಲ್ಲಿ ರತ್ನಪಟ್ಟಿಕೆ,

ಲತಾಬಳ್ಳಿಯ ಸುರುಳಿಗಳು, ಕಬ್ಬಿನ ಕಾಂಡದಂತಿರುವ ಅರ್ಧಗಂಬ ಒಂದರ ಮೇಲೆ ಒಂದು ನಿಂತ ಆನೆಗಳು ಮತ್ತು ಹಗ್ಗದ ಅಲಂಕಾರ ಪಟ್ಟಿಯ ಶಾಖೆಗಳಿವೆ. ಮೂರು ಶಾಖೆಗಳು ಮಾತ್ರ ಲಲಾಟ ಬಿಂಬದಲ್ಲಿ ಹರಡಿವೆ. (ಚಿತ್ರ ಸಂ.೧೧ ಮತ್ತು೧೧ಎ)ಇದರಿಂದ ಈ ಭಾಗದ ಛತ್ತು ಜೀರ್ಣೋದ್ಧಾರವಾಗಿರುವುದೆಂದು ತರ್ಕಿಸಬಹುದು. ಗರ್ಭಗೃಹದ ಮುಂದಿನ ಅರ್ಧಮಂಟಪದ ಮಕರ ತೋರಣ ಗಮನೀಯ. (ಚಿತ್ರ ಸಂ.೧೨)ಈ ತೋರಣದ ಎರಡು ಸ್ತಂಭಗಳ ಕೆಳ ಭಾಗದಲ್ಲಿ ಶೈವ ದ್ವಾರಪಾಲಕರಿದ್ದು ಇವರು ತ್ರಿಭಂಗಿಯಲ್ಲಿ ಹಾಗೂ ಚತುರ್ಭುಜಧಾರಿಗಳಾಗಿದ್ದಾರೆ. ಈ ದ್ವಾರಪಾಲಕರ (ಬಲಗಡೆ ಕಂಬ) ಕೈಗಳಲ್ಲಿ ಕ್ರಮವಾಗಿ ಗದೆ, ಡಮರು, ತ್ರಿಶೂಲ ಮತ್ತು ಅಭಯವಿದ್ದು, ಇನ್ನೊಂದು ಕಂಬದ ದ್ವಾರಪಾಲಕನ ಕೈಗಳಲ್ಲಿ ಅಭಯ (ಜಪಮಾಲೆ), ಡಮರು, ನಾಗ ಮತ್ತು ಗದೆಗಳಿವೆ. ಈ ದ್ವಾರಪಾಲ ಚಿತ್ರಗಳು ಅಂಚುಗಳಲ್ಲಿ ಪಟ್ಟಿಕೆಗಳಿಂದ ಅವೃತಗೊಂಡಿವೆ. ಹಾಗೂ ಕಂಬದ ತಳಕಾಂಡದ ಇನ್ನೊಂದು ಮುಖದಲ್ಲಿ ಪೂರ್ಣಕುಂಭಚಿತ್ರಗಳಿವೆ. ಈ ಕಂಬಗಳ ಮೇಲಿನ ಕಾಂಡಭಾಗ ದುಂಡಾಗಿ ಹಾಗೂ ಅಷ್ಟಮುಖದ ರತ್ನಪಟ್ಟಿಯ ಸ್ತರ ಮತ್ತು ದುಂಡಾದ ಗಂಟೆಯ ನಮೂನೆಗಳಿವೆ. ಅದರ ಮೇಲೆ ದುಂಡಾಕಾರದ ಪೀಠವಿದೆ. ಈ ಎರಡು ಕಂಬಗಳ ಪೀಠಗಳ ಮುಂಭಾಗದಲ್ಲಿ ಮಕರಗಳ ಅಲಂಕರಣವಿದೆ. ಹಾಗೂ ಇದರ ಮೇಲೆ ಉದ್ದ ಪಟ್ಟಿಯ ತೋರಣವನ್ನು ಕೂಡಿಸಲಾಗಿದೆ. ಈ ತೋರಣದ ತಳಭಾಗದಲ್ಲಿರುವ ಎರಡು ಮಕರಗಳ ಬಾಯಿಂದ ದುಂಡಾಕಾರದ ಹಗ್ಗದ ಅಲಂಕಾರ ಸುರುಳಿಯು ಹೊರಬಂದಿದೆ. ಈ ಹಗ್ಗವು ನಾಲ್ಕು ಅರ್ಧ ವೃತ್ತಾಕಾರಗಳಲ್ಲಿ ಬಾಗಿದೆ. ಎರಡು ಅರ್ಧ ವೃತ್ತಗಳು ಸಂಧಿಸುವ ಜಾಗದ ತುದಿಗಳು ಒಡೆದಿವೆ. ಹಾಗೂ ಅಲ್ಲಿ ಪುಷ್ಪಗಳನ್ನು ತೋರಿಸಲಾಗಿದೆ. ಮಕರಗಳ ಮೇಲೆ ಸವಾರರು ಕುಳಿತಿದ್ದು, ಇವುಗಳ ಬಾಲಗಳು ವಿಸ್ತಾರವಾಗಿ ಅಲಂಕಾರಗೊಂಡಿವೆ. ಈ ಪಟ್ಟಿಕೆಯ ಮೇಲೆ ಉದ್ದ ಪಟ್ಟಿಕೆಯಿದೆ. ಅದರಲ್ಲಿ ಗಜಗಳ ಮಧ್ಯೆ ನಾಲ್ಕು ಅರ್ಧಗಂಬಗಳಿದ್ದು ಅವು ಚಿಕ್ಕ ಗೂಡುಗಳನ್ನಾಗಿ ನಿರ್ಮಿಸಿವೆ. ಈ ಗೂಡುಗಳಲ್ಲಿ (ಬಲಗಡೆಯಿಂದ) ಕ್ರಮವಾಗಿ ರುಮಾಲಿನಂತೆ ತಲೆಕೂದಲನ್ನು ಕಟ್ಟಿಕೊಂಡು ಒಬ್ಬ ಶೈವ ಯತಿ ಕುಳಿತಿರುವನು. ಇವನ ಬಲಗಡೆ ಒಬ್ಬ ಸೇವಕ ಆನೆ ಮುಂದಿನ ಹಗ್ಗವಿಡಿದು ಎಳೆಯುತ್ತ ಓರೆಯಾಗಿ ನಿಂತಿದ್ದಾನೆ. ಇವನ ಎಡಗಡೆಗೆ ಮೂರು ಅರ್ಧಗಂಬ ಪಟ್ಟಿಕೆಗಳ ಗೂಡುಗಳಿದ್ದು ಇವುಗಳಲ್ಲಿಕ್ರಮವಾಗಿ ಬ್ರಹ್ಮ, ಮಹೇಶ್ವರ ಮತ್ತು ವಿಷ್ಣು. ತ್ರಿಮೂರ್ತಿಗಳಿರುವರು. ಇವರು ಕುಳಿತ ಭಂಗಿಯಲ್ಲಿರುವರು. ಚತುರ್ಭುಜಧಾರಿಗಳಾಗಿದ್ದಾರೆ. ಕೈಗಳಲ್ಲಿ ಅವರ ವಿವಿಧ ಆಯುಧ ಉಪಕರಣಗಳಿವೆ. ಮೂರು ಮುಖ ಬ್ರಹ್ಮನು ಜಪಮಾಲೆ (ಅಭಯ), ಸೌಟು, ಪಾಶ ಮತ್ತು ಪುಸ್ತಕ, ಶಿವನು ಅಭಯ. ಡಮರು. ತ್ರಿಶೂಲ ಮತ್ತು ಗದೆಯನ್ನು ಹಾಗೂ ವಿಷ್ಣು ಅಭಯ, ಪದ್ಮ, ಶಂಖ, ಚಕ್ರ ಮತ್ತು ಗದೆಗಳನ್ನು ಹಿಡಿದಿರುವರು. ವಿಷ್ಣುವಿನ ಎಡಕ್ಕೆ ಗರುಡ ಕೈಮುಗಿದು ಕುಳಿತಿರುವನು. ಹಾಗೂ ವಿಷ್ಣುವಿನ ಗೂಡಿನ ಬಲಬದಿಗೆ ಒಬ್ಬ ಮಹಿಳೆಯು ಖಡ್ಗವಿಡಿದು ನಿಂತಿದ್ದಾಳೆ. ಇವಳ ಎಡಕ್ಕೆ ಒಬ್ಬ ಕುದುರೆ ಸವಾರನಿರುವನು.

ಈ ಸವಾರನ ಎಡಕ್ಕೆ ಸಾಲಾಗಿ ಮೂರು ಆನೆಗಳಿವೆ. ಈ ತೋರಣದಲ್ಲಿ ತ್ರಿಮೂರ್ತಿಗಳಿಗೆ ಪ್ರಾಧಾನ್ಯತೆಯನ್ನು ನೀಡಲಾಗಿದೆ. ತ್ರಿಮೂರ್ತಿಗಳಲ್ಲಿ ಇಲ್ಲಿ ಮಹೇಶ್ವರನಿಗೆ ಮಧ್ಯ ಸ್ಥಾನ ದೊರೆತಿದೆ.

ರಾಷ್ಟ್ರಕೂಟರ ಕಾಲದ ಮಕರ ತೋರಣಗಳಲ್ಲಿ ತ್ರಿಮೂರ್ತಿಗಳನ್ನು ತೋರಿಸುವ ಪದ್ಧತಿಯಿತ್ತು. ರಾಯಚೂರು ಜಿಲ್ಲೆಯ ಕುಕ್ಕನೂರು, ಬೆಳಗಾಂವ ಜಿಲ್ಲೆಯ ಸೂಡಿ ಇನ್ನಿತರ ಕಡೆಗಳಲ್ಲಿವೆ. ಆದರೆ ಈ ಕಿತ್ತೂರಿನ ಸಂಗಮೇಶ್ವರ ದೇವಾಲಯದ ಮಕರ ತೋರಣ ತೋರಿಸಿದ ತ್ರಿಮೂರ್ತಿ ಇತ್ಯಾದಿ ಚಿತ್ರಗಳು ಪೌರಾಣಿಕ ಕಥೆಯನ್ನು ನಿರೂಪಿಸಿದಂತೆ ಕಾಣುತ್ತದೆ. ಹಾಗೂ ತೋರಿಸಿದ ವಿಧಾನದಲ್ಲಿ ವ್ಯತ್ಯಾಸವನ್ನು ಕಾಣಬಹುದು.

ನವರಂಗದ ಮಧ್ಯೆ ಎತ್ತರ ಕಟ್ಟೆಯಲ್ಲಿ ನಾಲ್ಕು ಕಂಬಗಳುಂಟು. ಗರ್ಭಗೃಹ, ಅರ್ಧ ಮಂಟಪ, ಮಕರ ತೋರಣ, ಬಾಗಿಲ ಚೌಕಟ್ಟು, ಕಂಬಗಳು ಇತ್ಯಾದಿ ಸು. ಕ್ರಿ. ಶ.೧೦ ನೇ ಶತಮಾನ ಶೈಲಿಯನ್ನು ಹೋಲುತ್ತವೆ. ಅಲ್ಲಿ ಒಂದು ಸೂರ್ಯ ವಿಗ್ರಹ (ಸು.ಕ್ರಿ.ಶ ೮ ನೇ ಶತಮಾನ) ಎರಡು ಶೈವ ದ್ವಾರಪಾಲಕರ ಶಿಲ್ಪಗಳು (ಸು.ಕ್ರಿ.ಶ. ೧೦ ನೇ ಶತಮಾನ) ಮುಖ್ಯವಾಗಿ ಬೆಳಕಿಗೆ ಬಂದಿದೆ. ಈ ದೇವಾಲಯದ ಕ್ರಿ.ಶ.೧೨೮೮ ರ ಒಂದು ಶಾಸನದಲ್ಲಿ ಮಾತ್ರ ಕಲಿನಾಥ ಮೂಲಸ್ಥಾನ ಜಕ್ಕೇಶ್ವರ ದೇವಾಲಯಗಳ ವಿವರಗಳಿವೆ.

ಬಾಗೇಶ್ವರ ದೇವಾಲಯ (ದೇವಿಹೊಸೂರು)

ದೇವಿಹೊಸೂರು ಗ್ರಾಮದಲ್ಲಿ ಬಾಗೇಶ್ವರ ದೇವಾಲಯವಿದೆ. ಇದರ ಮೂಲ ಹೆಸರು ಮೂಲಸ್ಥಾನ ಭೋಗೇಶ್ವರ ಎಂದು ಅಲ್ಲಿಯ ಕ್ರಿ.ಶ.೧೧೬೧ ನೇ ಹಾಗೂ ಇನ್ನೊಂದು ಕ್ರಿ.ಶ.೯೬೧ ನೇ ಕಾಲದ ಶಾಸನಗಳು ಉಲ್ಲೇಖಿಸಿವೆ. ಈ ದೇವಸ್ಥಾನ ತಕ್ಕ ಮಟ್ಟಿಗೆ ಜೀರ್ಣೋದ್ಧಾರವಾಗಿದೆ. ಈ ದೇವಾಲಯಕ್ಕೆ ಗರ್ಭಗೃಹ, ಅರ್ಧಮಂಟಪ ಮತ್ತು ನವರಂಗವಿದೆ. ಸು.ಕ್ರಿ.ಶ.೧೨ ನೇ ಶತಮಾನದ ಒಂದು ಶಿವಲಿಂಗ ಗರ್ಭಗೃಹದಲ್ಲಿದೆ. ಸು.ಕ್ರಿ.ಶ.೯ ನೇ ಶತಮಾನದ ಒಂದು ಮಹಿಷಮರ್ಧಿನಿ ಶಿಲ್ಪ, ಸು.ಕ್ರಿ.ಶ. ೧೦ ನೇ ಶತಮಾನದ ಒಂದು ಶಿವಲಿಂಗಪೀಠ ಮತ್ತು ಒಂದು ನಂದಿ ನವರಂಗದಲ್ಲಿವೆ. ನವರಂಗ ಮಧ್ಯದಲ್ಲಿ ನಾಲ್ಕು ಕಂಬಗಳಿವೆ (ಚಿತ್ರ ಸಂ.೧೩ ಎ). ಈ ಕಂಬಗಳಿಗೆ ತಳದಲ್ಲಿ ಪೀಠ, ಅದರ ಕಾಂಡದ ತಳಅಡಿ ಮತ್ತು ಮೇಲೆ ಚೌಕಾದ ಭಾಗಗಳಿವೆ. ಅದರ ಮಧ್ಯೆ ತ್ರಿಕೋನಕ್ಕೆ ಹೊಂದಿದ ಪಟ್ಟಿಗಳಿವೆ. ಹಾಗೂ ಇದರ ಮೇಲಿನ ಚೌಕಾದ ಭಾಗಕ್ಕೆ ಹೊಂದಿ ತ್ರಿಕೋನಪಟ್ಟಿ, ಅದರ ಮೇಲೆ ಚಚೌಕ ಪೀಠವಿದೆ. ಅದರ ಮೇಲೆ ಎರಡು ಬಾಹುಗಳುಳ್ಳ ಬಾಚುಪೀಠವಿದೆ. ಈ ಪೀಠದ ಕೆಳಬದಿಗಳು ಸರಳವಾಗಿವೆ ಮತ್ತು ತ್ರಿಕೋನದಲ್ಲಿವೆ. ಅಂತರಾಳದ ಬಾಗಿಲು ಚೌಕಟ್ಟಿನ ಲಲಾಟದಲ್ಲಿ

ಗಜಲಕ್ಷ್ಮಿಯ ಉಬ್ಬು ಶಿಲ್ಪ. ನವರಂಗದ ದ್ವಾರದಲ್ಲಿ ಮಕರ ತೋರಣ. ಈ ತೋರಣದಲ್ಲಿ ಗಜಲಕ್ಷ್ಮಿ ಶಿಲ್ಪ. ಈ ದೇವಿಯು ಪದ್ಮಾಸನದಲ್ಲಿ ಎತ್ತರದ ಪೀಠದ ಮೇಲೆ ಕುಳಿತಿದ್ದು ಬದಿಯಲ್ಲಿ ನಾಲ್ಕು ಆನೆಗಳು ನಿಂತು ಅಭಿಷೇಕ ಮಾಡುತ್ತಿವೆ.(ಚಿತ್ರ ಸಂ.೧೬.) ಕುಂಭಗಳನ್ನು ಆನೆಗಳು ಸೊಂಡಿಲಲ್ಲಿ ಹೊತ್ತಿವೆ. (ಬಲಗಡೆ ಎರಡು ಮತ್ತು ಎಡಗಡೆಗೆ ಎರಡು) ಬದಿಗಳಲ್ಲಿ ಮಕರಗಳಿವೆ. ಇಂತಹ ಈ ಶಿಲ್ಪ ಶಿಗ್ಗಾಂವಿಯಿಂದ ಕನ್ನಡ ಸಂಶೋಧನ ಸಂಸ್ಥೆಗೆ ತಂದ ಮಕರತೋರಣ ಶಿಲ್ಪಗಳನ್ನು ಹೋಲುತ್ತದೆ.[೨೦] ಶೈಲಿಯ ದೃಷ್ಟಿಯಿಂದ ಈ ದೇವಾಲಯವು ಸು.ಕ್ರಿ.ಶ.೯ ನೇ ಶತಮಾನದ್ದೆಂದು ತರ್ಕಿಸಬಹುದು.

ಈಶ್ವರ ದೇವಾಲಯ (ಮೋಟಳ್ಳಿ) :

ಶಿಗ್ಗಾಂವ ತಾಲೂಕಿನ ಮೋಟಳ್ಳಿ ಗ್ರಾಮ ಪಶ್ಚಿಮಕ್ಕೆ ಪ್ರಾಚೀನ ಹಾಳು ಜನವಸತಿಯಿದೆ. ಈ ನೆಲೆಯ ಹತ್ತಿರ ಈಶ್ವರ ದೇವಾಲಯವಿದೆ. ಈ ದೇವಾಲಯ ಶಿಥಿಲಗೊಂಡಿದ್ದು ಕಾಲಾಂತರದಲ್ಲಿ ಜೀರ್ಣೋದ್ಧಾರ ಮಾಡಲಾಗಿದೆ. ಈ ದೇವಾಲಯಕ್ಕೆ ಚಚೌಕ ಗರ್ಭಗೃಹವಿದೆ. ಇದರ ಬಾಗಿಲು ಚೌಕಟ್ಟಿಗೆ ಅರ್ಧ ದುಂಡಾಕೃತಿಯ ಅರ್ಧಕಂಭಗಳನ್ನು ಉಪಯೋಗಿಸಲಾಗಿದೆ. ಅರ್ಧಕಂಬಗಳ ಶೈಲಿ ಸು.ಕ್ರಿ.ಶ. ೧೦ ನೇ ಶತಮಾನ. ಇಲ್ಲಿಯ ಪ್ರಾಚೀನ ಜನವಸತಿಯಲ್ಲಿ ಶಾತವಾಹನರ ಹಾಗೂ ಮಧ್ಯಕಾಲೀನ ಅವಶೇಷಗಳು ದೊರೆತಿವೆ. ಇಲ್ಲಿಯ ಈಶ್ವರ[೨೧] ದೇವಾಲಯದ ಒಂದು ಶಾಸನವು ರಾಷ್ಟ್ರಕೂಟ ಕನ್ನರನ ಕಾಲದ್ದಾಗಿದ್ದು ರೇವಸಿಂಗಣಿಯ ವಿಷಯವಿದೆ.

ಸ್ತಂಭ ಮಂಟಪ:

ಶಿಗ್ಗಾಂವ ತಾಲೂಕಿನ ಗುಡ್ಡದ ಚನ್ನಾಪುರ ಗ್ರಾಮದ ದಾರಿಯಲ್ಲಿ ಕೆರೆಯಿದೆ. ಇದರ ಮಧ್ಯೆ ಎತ್ತರದಲ್ಲಿ ಒಂದು ತೆರೆದ ಚಚೌಕಾದ ಸ್ತಂಭ ಮಂಟಪವಿದೆ. (ಚಿತ್ರ ನಂ. ೧೪)ಇದರ ಅಧಿಷ್ಠಾನ ಹಾಗೂ ಛತ್ತಿಗೆ ತಕ್ಕಮಟ್ಟಿಗೆ ಧಕ್ಕೆ ತಗುಲಿದೆ. ಚೌಕಾದ ಎತ್ತರ ಅಧಿಷ್ಠಾನದ ಮಧ್ಯೆ ನಾಲ್ಕು ಚಿಕ್ಕ ದುಂಡಾಕೃತಿಯ ಅಲಂಕೃತ ಕಂಬಗಳನ್ನು ನಿಲ್ಲಿಸಲಾಗಿದೆ. ಅದರ ಮೇಲೆ ಛತ್ತಿದೆ. ಹೀಗೆ ಒಂದು ಮಂಟಪವನ್ನು ನಿರ್ಮಿಸಲಾಗಿದೆ. ಈ ಮಂಟಪದ ಮಧ್ಯೆ ಶಿವಲಿಂಗವಿದೆ. ಶೈಲಿಯ ದೃಷ್ಟಿಯಿಂದ ಇದೊಂದು ಸು.ಕ್ರಿ.ಶ. ೧೦ ನೇ ಶತಮಾನದ್ದು.

ಹಿರೇಕೆರೂರು ತಾಲೂಕಿನ ಮಾಸೂರು ಗ್ರಾಮದಲ್ಲಿ ಎರಡು ಚಿಕ್ಕ ಕಂಬಗಳನ್ನು ಮಾರುತಿ ದೇವಸ್ಥಾನ ಹತ್ತಿರದ ಒಂದು ಗೂಡಿನ ಮುಂದಿವೆ. ಶೈಲಿಯಿಂದ ಇವು ಸು.ಕ್ರಿ.ಶ. ೧೦ ನೇ ಶತಮಾನ. ಹಾಗೂ ಬ್ಯಾಡಗಿ ತಾಲೂಕಿನ ಸಿಡೇನೂರಿನ ಬಸವಣ್ಣ ಗುಡಿಯಲ್ಲಿ ನಾಲ್ಕು ಚಿಕ್ಕ ಕಂಬಗಳಿದ್ದು ಇವುಗಳು ಈ ಮೇಲೆ ಹೇಳಿದ ಕಂಬಗಳನ್ನು ಹೋಲುತ್ತವೆ.

ದೇವಾಲಯ ಅವಶೇಷಗಳು:

ಅಗಡಿ (ಹಾವೇರಿ ತಾಲೂಕ) ಗ್ರಾಮದಲ್ಲಿ ಒಂದು ಚಿಕ್ಕ ಅಂಬಾಭವಾನಿ ಗುಡಿಯಿದೆ. ಶಿಥಿಲಗೊಂಡ ಈ ಗುಡಿ ಛತ್ತಿನಲ್ಲಿ ಕಮಲಫಲಕ ಹಾಗೂ ಬಾಗಿಲ ಚೌಕಟ್ಟಿನಲ್ಲಿ ಗಜಲಕ್ಷ್ಮಿಯ ಶಿಲ್ಪವಿದೆ. ಇದಲ್ಲದೆ ಇಲ್ಲಿಯ ಒಂದು ಫಲಕದಲ್ಲಿ ತೀರ್ಥಂಕರನ ಚಿತ್ರವಿದೆ. ಶೈಲಿಯ ದೃಷ್ಟಿಯಿಂದ ಇಲ್ಲಿಯ ಕಮಲ, ಗಜಲಕ್ಷ್ಮಿ ಶಿಲ್ಪ ಇವುಗಳು ಸುಮಾರು ಕ್ರಿ.ಶ.೧೦ ನೇ ಶತಮಾನಕ್ಕೆ ಸೇರಿವೆ. ಚಿಕ್ಕೇರೂರಿನ ಮಾರುತಿ ಮಂದಿರ ಹೊರಗೆ ಎರಡು ದ್ವಾರದ ಲಲಾಟ ಪಟ್ಟಿಗಳಿವೆ. ಒಂದರಲ್ಲಿ ನಾಲ್ಕು ಶಾಖೆಗಳಿವೆ. ಅವು ಸರಳ ಅಲಂಕಾರದ ಹಗ್ಗ, ಸರಳ ಮತ್ತು ಬಳ್ಳಿಗಳ ಅಲಂಕಾರಗಳಿಂದ ಕೂಡಿವೆ. ಲಲಾಟದ ಶಾಖೆಗಳ ಮಧ್ಯೆ ಗಜಲಕ್ಷ್ಮಿಯ ಉಬ್ಬು ಶಿಲ್ಪವಿದೆ. ಇನ್ನೊಂದರಲ್ಲಿ ಸರಳ ಶಾಖೆಗಳು ಮತ್ತು ಗಜಲಕ್ಷ್ಮಿ ಶಿಲ್ಪವಿದೆ. (ಚಿತ್ರ ನಂ.೧೮ ಮತ್ತು ೧೮ಅ).

ಹಳೆರಿತ್ತಿ (ಹಾವೇರಿ ತಾಲೂಕ) ಗ್ರಾಮದಲ್ಲಿ ಬಾಣತೆಮ್ಮ ಗುಡಿಯ ಹಿಂದೆ ಗಜಲಕ್ಷ್ಮಿಯ ತೋರಣಫಲಕವಿದೆ. ಶೈಲಿಯ ದೃಷ್ಟಿಯಿಂದ ಇದು ಸು.ಕ್ರಿ.ಶ. ೧೦ ನೇ ಶತಮಾನ. ಇಲ್ಲಿಯ ಆದಿಶಕ್ತಿ ಗುಡಿಯಲ್ಲಿರುವ ಸುಂದರ ಮಹಿಷಮರ್ಧಿನಿ ಶಿಲ್ಪ ಅಪರೂಪವಾದ್ದು. ಇದನ್ನು ಪ್ರತ್ಯೇಕವಾಗಿ ಅಧ್ಯಯನ ಮಾಡಿ[೨೫] ಪ್ರಕಟಿಸಲಾಗಿದೆ. ಈ ಶಿಲ್ಪ ಸುಮಾರು ಕ್ರಿ.ಶ. ೮ ನೇ ಶತಮಾನ. ಈ ಗ್ರಾಮದಲ್ಲಿ ಸು.ಕ್ರಿ.ಶ.೧೦ ನೇ ಶತಮಾನದ ರಾಷ್ಟ್ರಕೂಟದ ದೊರೆ ನಿರುಪಮನ ಗೋಸಾಸ ಸ್ತಂಭಶಾಸನ ಪ್ರಕಟವಾಗಿದೆ. ಇಲ್ಲಿ ಒಟ್ಟು ಮೂರು ಗೋಸಾಸ ಸ್ತಂಭಗಳು ಅಲ್ಲಿಯ ಕೆರೆಯ ಪಕ್ಕದಲ್ಲಿ ಕಂಡಿವೆ. ಮಂತ್ರವಾಡಿಯ ಮಾರುತಿ ಮಂದಿರದ ಛತ್ತಿನ ಫಲಕದಲ್ಲಿ ಹಲವಾರು ಕಮಲ ಚಿತ್ರಗಳಿವೆ. ಇದು ಚಿಕ್ಕೇರೂರಿನ ಮಾರುತಿ ಮಂದಿರದ ಅಂತರಾಳ ಛತ್ತಿನ ಕಮಲಗಳನ್ನು ಹೋಲುವುದು. ದೇವಗಿರಿ ಎಲ್ಲಮ್ಮ ದೇವಾಲಯ ಮುಂದಿನ ಕಟ್ಟೆಯಲ್ಲಿ ಎರಡು ಮಕರ ತೋರಣಗಳನ್ನು ಇಡಲಾಗಿದೆ. ಎರಡರಲ್ಲೂ ಮಕರಗಳ ಮಧ್ಯೆ ಕುಳಿತ ತ್ರಿಮೂರ್ತಿಗಳಿರುವರು. (ಚಿತ್ರ ನಂ. ೧೭) ಒಂದರ ಸ್ತಂಭಗಳು ಹಾಗೆ ಅಲ್ಲಿ ನಿಂತಿವೆ. ಈ ಮಕರ ತೋರಣದ ಮಾದರಿ ಇನ್ನೊಂದು ರೀತಿಯದಾಗಿದೆ. ಇಲ್ಲಿ ತಲಾ ಒಬ್ಬರ ಸುತ್ತ ದುಂಡಾದ ಅಲಂಕೃತ ಪ್ರಭಾವಳಿಯಿದ್ದು, ಮೇಲೆ ಮಧ್ಯದಲ್ಲಿ ಕೀರ್ತಿಮುಖಗಳಿವೆ.

ಚಿಕ್ಕೇರೂರಿನ ವೀರಭದ್ರ ಮತ್ತು ಮಾರುತಿ ಗುಡಿಯಲ್ಲಿ ಇನ್ನೊಂದು ರೀತಿಯ ಚೌಕಾಕಾರದ ಹಲವಾರು ಕಂಬಗಳಿವೆ. ಇವು ದೇವಿಹೊಸೂರಿನ ಬಾಗೇಶ್ವರ ದೇವಾಲಯದ ಕಂಬಗಳನ್ನು ಹೆಚ್ಚಾಗಿ ಹೋಲುತ್ತವೆ. ಹಾಗೂ ಗಜಲಕ್ಷ್ಮಿ ಫಲಕಗಳಿವೆ. ಇವುಗಳು ಸು.ಕ್ರಿ.ಶ. ೯ ನೇ ಶತಮಾನ.

ಮಕರತೋರಣಗಳು:

ಮಕರತೋರಣಗಳು ಮೂರು ಪ್ರಕಾರಗಳಲ್ಲಿ ಕಂಡುಬಂದಿವೆ. ಮೊದಲನೇ ಪ್ರಕಾರದಲ್ಲಿ ಮಕರತೋರಣಗಳನ್ನು ಹೆಚ್ಚಾಗಿ ಅರ್ಧ ಮಂಟಪದಲ್ಲಿ ಎರಡು ಕಂಬಗಳ ಮೇಲೆ ಕೂಡಿಸಿದ್ದನ್ನು ಕಾಣಲಾಗಿದೆ. ಈ ರೀತಿಯ ತೋರಣಗಳಲ್ಲಿ ತ್ರಿಮೂರ್ತಿಗಳನ್ನು ಸಾಲಾಗಿ ಮಕರಗಳ ಮಧ್ಯೆ ಅಥವಾ ಮೇಲೆ ತೋರಿಸಲಾಗಿದೆ. ಈ ಮಾದರಿಯ ಶಿಲ್ಪಗಳು ರಾಷ್ಟ್ರಕೂಟರ ಕಾಲದಲ್ಲಿ ಸಾಮಾನ್ಯವಾಗಿ ಕಾಣುತ್ತವೆ. ಈ ಅಧ್ಯಯನದಲ್ಲಿ ಮಕರತೋರಣದಲ್ಲಿ ತ್ರಿಮೂರ್ತಿಗಳನ್ನು ಎರಡು ರೀತಿಯಲ್ಲಿ ತೋರಿಸಿರುವುದನ್ನು ಗಮನಿಸಲಾಗಿದೆ. ಒಂದನೆಯ ಪ್ರಕಾರದಲ್ಲಿ ಆನೆಗಳ ಮಧ್ಯೆ ತ್ರಿಮೂರ್ತಿ ಇತ್ಯಾದಿ ಸಾಲಾಗಿ ತೋರಿಸಿದ್ದು, ಇದರಲ್ಲಿ ಮಕರಗಳನ್ನು ತೋರಣದ ಅಂಚಿನಲ್ಲಿ ಅಥವಾ ಈ ಅಂಚುಗಳ ತಳಭಾಗ ಕಂಬಗಳ ಶಿರೋಪೀಠದಲ್ಲಿರುವುದನ್ನು ಗಮನಿಸಲಾಗಿದೆ. ಈ ತೋರಣದಲ್ಲಿ ತ್ರಿಮೂರ್ತಿಗಳ ಬದಿಗಳಲ್ಲಿ ಒಬ್ಬ ಶೈವ ಯತಿ (ಎಡಗಡೆ) ಮಹಿಷಮರ್ಧಿನಿ (ಖಡ್ಗ ಹಿಡಿದ ಹೆಂಗಸು) (ಬಲಗಡೆ) ಮತ್ತು ಆನೆಗಳಿರುವುದು ಗಮನೀಯ. ಉದಾಹರಣೆಗೆ ಕಿತ್ತೂರಿನ ಸಂಗಮೇಶ್ವರ ದೇವಾಲಯದ ಅರ್ಧ ಮಂಟಪದಲ್ಲಿರುವುದನ್ನು ಕಾಣಬಹುದು. ಇನ್ನೊಂದು ಮಾದರಿಯಲ್ಲಿ ಎರಡು ಮಕರಗಳ ಮಧ್ಯೆ ಸಾಲಾಗಿ ತ್ರಿಮೂರ್ತಿಗಳು ಪದ್ಮಾಸನದಲ್ಲಿ ಕುಳಿತಿರುವರು. ತಲಾ ಒಬ್ಬರ ಸುತ್ತಲೂ ಅರ್ಧ ವೃತ್ತಾಕಾರದ ಪ್ರಭಾವಳಿಗಳ ಉಬ್ಬು ಪಟ್ಟಿಯಿವೆ. ಶಿವನ ಪ್ರಭಾವಳಿ ಮೇಲೆ ಮಧ್ಯದಲ್ಲಿ ಕೀರ್ತಿಮುಖವಿದೆ. ಈ ಮಾದರಿಯ ಎರಡು ಶಿಲ್ಪಗಳನ್ನು ದೇವಗಿರಿಯ ಎಲ್ಲಮ್ಮ ಗುಡಿ ಮುಂದಿನ ಕಟ್ಟೆ ಗೋಡೆಯಲ್ಲಿ ಕೂಡಿಸಲಾಗಿದೆ. ಇದರ ಮುಂದೆ ಪ್ರತ್ಯೇಕ ತೋರಣದ ಎರಡು ಕಂಬಗಳು ನಿಂತಿವೆ. ಬಹುಶಃ ಮೂಲತಃ ಇವುಗಳಲ್ಲಿ ಒಂದು ಶಿಲ್ಪವನ್ನು ಈ ಕಂಬಗಳ ಮೇಲೆ ಕೂಡಿಸಿರುವ ಸಾಧ್ಯತೆ ಹೆಚ್ಚು.

ಎರಡನೇ ಪ್ರಕಾರದಲ್ಲಿ ಕೇವಲ ಗಜಲಕ್ಷ್ಮಿಯನ್ನು ಎರಡು ಮಕರಗಳ ಮಧ್ಯ ತೋರಿಸಲಾಗಿದೆ. ಈ ಶಿಲ್ಪಗಳ ತಳಭಾಗದಲ್ಲಿ ಎರಡು ಚಚೌಕ ರಂಧ್ರಗಳಿವೆ. ಎರಡು ಕಂಬಗಳ ಮೇಲೆ ಕೂಡಿಸುವ ಉದ್ದೇಶದಿಂದ ಈ ರಂಧ್ರಗಳನ್ನು ಕೊರೆದಿರುವುದು ಸ್ಪಷ್ಟ. ಈ ತೋರಣಗಳಲ್ಲಿ ಸಾಮಾನ್ಯವಾಗಿ ಗಜಲಕ್ಷ್ಮಿಯನ್ನು ವೈವಿಧ್ಯಮಯವಾಗಿ ತೋರಿಸಿರುವುದುಂಟು. ಗಜಲಕ್ಷ್ಮಿಯ ಸುತ್ತ ಅಂಚಿನಲ್ಲಿ ತಳಭಾಗ ಬಿಟ್ಟು ಅರ್ಧವೃತ್ತಾಕಾರದ ಉಬ್ಬು ಪಟ್ಟಿಇರುತ್ತವೆ. ಗಜಲಕ್ಷ್ಮಿ ತಳಭಾಗದ ಅಂಚಿನಲ್ಲಿ ಎರಡು ಮಕರಗಳಿವೆ. ಎರಡು ಅಥವಾ ನಾಲ್ಕು ಆನೆಗಳ ಮಧ್ಯೆ ಲಕ್ಷ್ಮಿಯು ಕಮಲಗಳನ್ನು ಹಿಡಿದು ಪದ್ಮಾಸನದಲ್ಲಿ ಕೆಲವೊಮ್ಮೆ ಎತ್ತರದ ಪೀಠದ ಮೇಲೆ ಕುಳಿತಿರುವಳು. ಬದಿಯಲ್ಲಿ ಆನೆಗಳು ಸೊಂಡಿಲಲ್ಲಿ ಕುಂಭಗಳನ್ನು ಹೊತ್ತು ನಿಂತು

ಲಕ್ಷ್ಮಿಯ ಕಿರೀಟದ ಮೇಲಿಂದ ಅಥವಾ ಕಿರೀಟದ ಬದಿಯಿಂದ ನೀರನ್ನು ಸುರಿದು ಅಭಿಷೇಕ ಮಾಡುವುದನ್ನು ಕಾಣಬಹುದು. ನಾಲ್ಕು ಆನೆಗಳಿದ್ದರೆ ಲಕ್ಷ್ಮಿಯ ಬದಿಗೆ ಎರಡು ಆನೆಗಳು ನಿಂತು ಈ ಮೇಲಿನಂತೆ ಕುಂಭದಿಂದ ಅಭಿಷೇಕ ಮಾಡಿಸುವುದನ್ನು ತೋರಿಸಲಾಗಿದೆ. ಈ ಎರಡು ಆನೆಗಳ ಕೆಳಗೆ ಇನ್ನೆರಡು ಆನೆಗಳು ನಿಂತು ಕುಂಭಗಳನ್ನು ಮೇಲಕ್ಕೆ ಎತ್ತಿಹಿಡಿದಿರುವುದನ್ನು ಹಾಗೂ ಇವುಗಳ ದೇಹಾಂಗವನ್ನು ಕೆಲವೊಮ್ಮೆ ಕೇವಲ ಅಪೂರ್ಣವಾಗಿ ತೋರಿಸುವುದನ್ನು ಕಾಣಬಹುದು. ಈ ಮಾದರಿಯ ಗಜಲಕ್ಷ್ಮಿಯ ಶಿಲ್ಪಗಳು ಶಿಗ್ಗಾಂವಿಯ ಎರಡು ಶಿಲ್ಪಗಳು ಮತ್ತು ದೇವಿಹೊಸೂರಿನ ಭೋಗೇಶ್ವರ ದೇವಾಲಯ ದ್ವಾರದ ಮೇಲೆ (ನಾಲ್ಕು ಆನೆಗಳು ಲಕ್ಷ್ಮೀಬದಿಗೆ), ಹಳೆರಿತ್ತಿಯ ಬಾಣತೆಮ್ಮಗುಡಿ ಹಿಂದೆ ಮತ್ತು ಹನುಮನಹಳ್ಳಿ ಗ್ರಾಮ ಮಧ್ಯದ ಕಟ್ಟೆಯಲ್ಲಿ (ಎರಡು ಆನೆಗಳು ಲಕ್ಷ್ಮೀಯ ಬದಿಗೆ) ಕಂಡುಬಂದಿವೆ. ಈ ಅನ್ವೇಷಣೆಯಲ್ಲಿ ಇಂತಹ ಯಾವ ಶಿಲ್ಪಗಳನ್ನು ಪ್ರತ್ಯೇಕ ಕಂಬಗಳ ಮೇಲೆ ನಿಲ್ಲಿಸಿರುವುದು ಕಂಡುಬಂದಿಲ್ಲ. ಈ ರೀತಿಯ ಮಕರ ತೋರಣ ಅಧ್ಯಯನದಿಂದ ಇವುಗಳನ್ನು ಹೆಚ್ಚಾಗಿ ಪ್ರತ್ಯೇಕ ಕಂಬಗಳ ಮೇಲೆ ನಿಲ್ಲಿಸಲು ನಿರ್ಮಿಸಿದ ಶಿಲ್ಪಗಳೆಂದು ತರ್ಕಿಸಬಹುದು. ಹಾಗೂ ಇವುಗಳ ದೇಹಾಂಗದ ರಚನೆ, ವಸ್ತ್ರಾಭರಣ ಮತ್ತು ಆನೆಗಳು ಸೊಂಡಿಲಲ್ಲಿ ಹೊತ್ತು ನಿಂತು ಕುಂಭಗಳಿಂದ ಲಕ್ಷ್ಮೀಯ ತಲೆಯಮೇಲೆ ಅಥವಾ ತಲೆಯ ಬದಿಗಳಿಂದ ನೀರನ್ನು ಸುರಿಸುವ ವಿಧಾನ ಮತ್ತು ಶೈಲಿಯಿಂದ ಹಾಗೂ ಈ ರೀತಿ ಗಜಲಕ್ಷ್ಮೀ ಚಿತ್ರಗಳು ರಾಷ್ಟ್ರಕೂಟರ ಕಾಲದ ಶಿಲಾಶಾಸನಗಳ ಮೇಲೆ ಇರುವುದರಿಂದ ಇವುಗಳ ತುಲನಾತ್ಮಕ ಅಧ್ಯಯನದಿಂದ ಈ ಮಾದರಿಯ ಗಜಲಕ್ಷ್ಮೀ ಶಿಲ್ಪಗಳ ಕಾಲಮಾನವನ್ನು ನಿರ್ಧರಿಸಲು ಸಾಧ್ಯವಾಗುವುದು. ಹಾಗೂ ಇಂತಹ ಶಿಲ್ಪಗಳು ಸು.ಕ್ರಿ.ಶ.೧೦ ನೇ ಶತಮಾನದ ನಂತರ ಕಾಣುವುದು ಅಪರೂಪವೆನ್ನಬಹುದು. ಮತ್ತು ಈ ಮಾದರಿಯನ್ನು ಹೆಚ್ಚಾಗಿ ಕರ್ನಾಟಕದಲ್ಲಿ ರಾಷ್ಟ್ರಕೂಟ ಮತ್ತು ಬಾದಾಮಿ ಚಾಲುಕ್ಯರ ಕಾಲಗಳಲ್ಲಿ ಕಾಣಸಿಗುತ್ತವೆಂದು ಸ್ಪಷ್ಟವಾಗಿ ಹೇಳಬಹುದು.

ಇನ್ನೊಂದು ಮಾದರಿಯ ತೋರಣದಲ್ಲಿ ಮಕರಗಳ ಮಧ್ಯೆ ಸಾಲಾಗಿ ಅಷ್ಟದಿಕ್‌ಪಾಲಕರು ಇವರ ಮಧ್ಯೆ ಮೂವರು ದೇವತೆಯರನ್ನು ತೋರಿಸಿದ ಶಿಲ್ಪಗಳಿವೆ. ಇಂತಹ ಮಕರ ತೋರಣ ಕ್ರಿ. ಶ. ೧೦೫೭ ರಲ್ಲಿ ನಿರ್ಮಿಸಲಾಗಿದೆ. ಈ ವಿಷಯ ದೇವೀಹೊಸೂರಿನ ಬನಶಂಕರಿ ದೇವಾಲಯದ ಎದುರಿಗೆ ಮಕರ ತೋರಣದ ಒಂದು ಕಂಬದಲ್ಲಿ ಉಲ್ಲೇಖವಾಗಿದೆ ಎಂದು ಈ ಮೇಲೆ ಹೇಳಿದೆ.

ಗಜಲಕ್ಷ್ಮಿಯನ್ನು (ಕಲ್ಯಾಣ ಚಾಲುಕ್ಯರ ಕಾಲದಿಂದ) ದೇವಾಲಯಗಳ ಲಲಾಟಬಿಂಬದ ಮಧ್ಯೆ ತೋರಿಸುವ ಸಂಪ್ರದಾಯ ಸಾಮಾನ್ಯ. ಈ ಸಂಪ್ರದಾಯ ರಾಷ್ಟ್ರಕೂಟರ ಕಾಲದಲ್ಲೂ ಹೆಚ್ಚು ಪ್ರಚಲಿತವಿದ್ದು ಇವುಗಳ ಹಲವಾರು ಉದಾಹರಣೆಗಳು ಈ ಅಧ್ಯಯನದಲ್ಲಿ ಕಾಣಲಾಗಿದೆ.

ಸಾಮಾನ್ಯವಾಗಿ ದೇವಾಲಯಗಳಲ್ಲಿ ದ್ವಾರದ ಲಲಾಟ ಪಟ್ಟಿಕೆಯ ಮಧ್ಯೆ ಗಜಲಕ್ಷ್ಮಿ ಇರುವಳು. ಹಾಗೂ ಬಾಗಿಲ ಫಲಕಗಳಲ್ಲಿ ತೋರಿಸಿದ ಶಾಖೆಗಳನ್ನು (ಅಲಂಕಾರ ಅಥವಾ ಸರಳ) ಲಲಾಟದಲ್ಲೂ ತೋರಿಸುವುದು ಸಾಮಾನ್ಯ. ದ್ವಿಭುಜಲಕ್ಷ್ಮಿ ಕೈಗಳಲ್ಲಿ ಕಮಲಗಳನ್ನು ಹಿಡಿದು ಪದ್ಮಾಸನದಲ್ಲಿ ಕುಳಿತಿರುತ್ತಾಳೆ. ಬದಿಗಳಲ್ಲಿ ನಿಂತ ಎರಡು ಆನೆಗಳು ತಮ್ಮ ಸೊಂಡಿಲಲ್ಲಿ ಪೂರ್ಣ ಕುಂಭಗಳನ್ನು ಹಿಡಿದುಕೊಂಡು ದೇವಿಯ ಕಿರೀಟದ ಮೇಲಿಂದ ನೀರನ್ನು ಹಾಕಿ ಅಭಿಷೇಕ ಮಾಡಿಸುವ ವಿಧಾನದಲ್ಲಿ ಕೆಲವು ಅಂಶಗಳನ್ನು ಗಮನಿಸಬಹುದು. ೧) ಕೆಲವು ಶಿಲ್ಪಗಳಲ್ಲಿ ಆನೆಗಳು ನಿಂತುಕೊಂಡು ಕೇವಲ ಸೊಂಡಿಲನ್ನು ಮೇಲಕ್ಕೆತ್ತಿ ದೇವಿಯನ್ನು ಅಭಿಷೇಕ ಮಾಡುವುದು. ಉದಾಹರಣೆಗೆ ಇಂತಹ ಶಿಲ್ಪಗಳು ಚಿಕ್ಕೇರೂರಿನ ಮಾರುತಿ ಮಂದಿರದ ಹೊರಗಡೆ, ಮತ್ತೀಹಳ್ಳಿಯ ಸೋಮೇಶ್ವರ ದೇವಾಲಯದ ಬಲಗಡೆಯ ದ್ವಾರದಲ್ಲಿ, ಕಿತ್ತೂರಿನ ಸಂಗಮೇಶ್ವರ ದೇವಾಲಯದ ಗರ್ಭಗೃಹದ ದ್ವಾರದಲ್ಲಿ, ಘಾಳಪೂಜೆಯ ಈಶ್ವರ ದೇವಾಲಯದ ದ್ವಾರದಲ್ಲಿ ಇವೆ. ೨) ಕೆಲವು ಕಡೆಗಳಲ್ಲಿ ಆನೆಗಳು ತಮ್ಮ ಮುಂದಿನ ಕಾಲುಗಳನ್ನು ಮೇಲಕ್ಕೆ ಎತ್ತಿಹಿಡಿದು ನಿಂತು ದೇವಿಯನ್ನು ಅಭಿಷೇಕ ಮಾಡುತ್ತಿವೆ. ಚಿಕ್ಕೇರೂರಿನ ಮಾರುತಿ ಮಂದಿರದ ಹೊರಗಡೆಯ ಶಿಲ್ಪವನ್ನು ಇಲ್ಲಿ ಉದಾಹರಿಸಬಹುದು. ೩) ಕೆಲವು ಶಿಲ್ಪಗಳಲ್ಲಿ ಆನೆಗಳು ತಮ್ಮ ಮುಂದಿನ ಎರಡೂ ಕಾಲುಗಳನ್ನು ದೇವಿಯ ತೊಡೆಯ ಪಕ್ಕದ ಪೀಠದ ಮೇಲೆ ಊರಿ ಅಭಿಷೇಕ ಮಾಡುವುದನ್ನು ತೋರಿಸಲಾಗಿದೆ. ಚಿಕ್ಕೇರೂರಿನ ಮಾರುತಿ ಮಂದಿರದ ಗರ್ಭಗೃಹ ದ್ವಾರದಲ್ಲಿ ಈ ಮಾದರಿಯನ್ನು ಕಾಣಬಹುದು. ೪) ಕೆಲವು ಶಿಲ್ಪಗಳಲ್ಲಿ ದೇವಿಯು ಪೀಠದ ಮೇಲೆ ಕುಳಿತಿರುವುದನ್ನು ತೋರಿಸಲಾಗಿದೆ. ಉದಾಹರಣೆಗೆ ಮತ್ತೀಹಳ್ಳಿಯ ಸೋಮೇಶ್ವರ ದೇವಾಲಯದ ಬಲಬದಿಯ ದ್ವಾರದ ಶಿಲ್ಪವನ್ನು ಕೊಡಬಹುದು.

ಲಕ್ಷ್ಮೀಯು ಸಾಮಾನ್ಯವಾಗಿ ಕಿರೀಟ ಮಕುಟ, ಕುಂಡಲ, ಕೊರಳ ಮತ್ತು ಕುಚಹಾರ, ವಸ್ತ್ರ, ಬಳೆ, ಕಡಗ ಇತ್ಯಾದಿ ವಸ್ತ್ರಾಭರಣಗಳನ್ನು ಧರಿಸಿರುವಳು.

ಮುಖ್ಯ ಅಂಶಗಳು :

೧) ವಸ್ತು (Material) : ದೇವಾಲಯಗಳನ್ನು ಎರಡು ರೀತಿಯಲ್ಲಿ ಕಟ್ಟಲಾಗಿದೆ. ಒಂದನೆಯದು ಇಟ್ಟಿಗೆ ದೇವಾಲಯ (ಬನಶಂಕರಿ ದೇವಾಲಯ , ದೇವಿಹೊಸೂರು ರಾಮೇಶ್ವರ ದೇವಾಲಯ, ಬಡಮಳ್ಳಿ ಮತ್ತು ಈಶ್ವರ ದೇವಾಲಯ ಘಾಳಪೂಜೆ) ಎರಡನೆಯದು ಶಿಲೆಯ ದೇವಾಲಯ (ಭೋಗೇಶ್ವರ, ದೇವಿಹೊಸೂರು ; ಮಾರುತಿ ದೇವಾಲಯ, ಚಿಕ್ಕೇರೂರು; ಸಂಗಮೇಶ್ವರ ದೇವಾಲಯ, ಕಿತ್ತೂರ ; ಮತ್ತು ರಾಮೇಶ್ವರ ದೇವಾಲಯ, ಮಾಸಣಗಿ).

೨) ತಳಪಾಯ (ground plan) : ಈ ಅಭ್ಯಾಸದಿಂದ ದೇವಾಲಯಗಳ ತಳಪಾಯಗಳು ಮೂರು ರೀತಿಯಲ್ಲಿರುವುದು ಗೊತ್ತಾಗುತ್ತದೆ.

ಅ) ಗರ್ಭಗೃಹ, ಅಂತರಾಳ ಮತ್ತು ನವರಂಗ ಭಾಗಗಳು ದೇವಿಹೊಸೂರಿನ ಬನಶಂಕರಿ ಮತ್ತು ಭೋಗೇಶ್ವರ ; ಚಿಕ್ಕೇರೂರಿನ ಮಾರುತಿ ದೇವಾಲಯಗಳಿಗಿವೆ.

ಆ) ಗರ್ಭಗೃಹ, ಅರ್ಧಮಂಟಪ ಭಾಗಗಳು ಭಾಳಪ್ಪೂಜೆಯ ಈಶ್ವರ ದೇವಾಲಯ, ಬಡಮಲ್ಲಿಯ ರಾಮಲಿಂಗ ದೇವಾಲಯಗಳಲ್ಲಿ ಕಾಣಬಹುದು.

ಇ) ಗರ್ಭಗೃಹ, ಅರ್ಧಮಂಟಪ ಮತ್ತು ನವರಂಗ ಭಾಗಗಳು ಕಿತ್ತೂರಿನ ಸಂಗಮೇಶ್ವರ ದೇವಾಲಯಕ್ಕಿವೆ.

೩) **ಶಿಖರ :** ದೇವಿಹೊಸೂರಿನ ಬನಶಂಕರಿ ದೇವಾಲಯದ ಗರ್ಭಗೃಹದ ಮೇಲೆ ಶಿಖರವಿದೆ. ಉಳಿದವುಗಳು ಕಂಡು ಬಂದಿಲ್ಲ.

೪) **ಮಕರ ತೋರಣಗಳು :** ಮಕರ ತೋರಣಗಳಲ್ಲಿ ಎರಡು ಪ್ರಕಾರಗಳನ್ನು ಗುರುತಿಸಲಾಗಿದೆ. ಒಂದರಲ್ಲಿ ತ್ರಿಮೂರ್ತಿಗಳು ಇನ್ನೊಂದರಲ್ಲಿ ಗಜಲಕ್ಷ್ಮಿ. ತ್ರಿಮೂರ್ತಿಗಳಿರುವ ಮಕರ ತೋರಣಗಳು ಹೆಚ್ಚಾಗಿ ದೇವಾಲಯಗಳ ಅರ್ಧಮಂಟಪದಲ್ಲಿ ನಿಲ್ಲಿಸುವ ಸಂಪ್ರದಾಯ ಹೆಚ್ಚು ಖ್ಯಾತಿಗೊಂಡಿರಬಹುದು. ಇನ್ನೊಂದು ಸಂಪ್ರದಾಯದಲ್ಲಿ ಗಜಲಕ್ಷ್ಮಿಯನ್ನು ದೇವಾಲಯದ ದ್ವಾರದ ಲಲಾಟದಲ್ಲಿ ತೋರಿಸುವುದು ಸಾಮಾನ್ಯವಾಗಿದೆ. ಇವುಗಳಲ್ಲಿ ವೈವಿಧ್ಯತೆಗಳನ್ನು ಗಮನಿಸಲಾಗಿದೆ ಹಾಗೂ ತುಲನಾತ್ಮಕ ಅಧ್ಯಯನದಿಂದ ಈ ಮಕರತೋರಣ ಶಿಲ್ಪಗಳನ್ನು ಎರಡು ರೀತಿಯಲ್ಲಿ ಕಾಲನಿರ್ಣಯ ಮಾಡಬಹುದಾಗಿದೆ. ಒಂದನೆಯದು ಕೇವಲ ಶೈಲಿ. ಎರಡನೆಯದು ಸಾಂದರ್ಭಿಕ ಚಿತ್ರ ಮತ್ತು ಉಲ್ಲೇಖಗಳು.

೫) **ಲಲಾಟಪಟ್ಟ :** ಹೆಚ್ಚಾಗಿ ದೇವಾಲಯಗಳ ದ್ವಾರದ ಲಲಾಟಗಳಲ್ಲಿ ವಿವಿಧ ಶಾಖೆಗಳ ಮಧ್ಯೆ ಗಜಲಕ್ಷ್ಮಿಯನ್ನು ತೋರಿಸುವ ಸಂಪ್ರದಾಯ ಹೆಚ್ಚು ಪ್ರಚಲಿತ.

೬) **ಕಂಬಗಳು :** ಈ ಅನ್ವೇಷಣೆಯಲ್ಲಿ ಎರಡು ನಮೂನೆಯ ಕಂಬಗಳನ್ನು ಗುರುತಿಸಲಾಗಿದೆ. ಒಂದನೆಯದು ಚೌಕಾಕಾರ. ಎರಡನೆಯದು ದುಂಡಾಕಾರ. ಒಂದನೆಯ ಮಾದರಿಯಲ್ಲಿ ವಿವಿಧತೆಗಳಿವೆ. ಕಿತ್ತೂರಿನ ಸಂಗಮೇಶ್ವರ ದೇವಾಲಯದ ನವರಂಗ ಕಂಬಗಳು; ಚಿಕ್ಕೇರೂರಿನ ಮಾರುತಿ ಮಂದಿರದ ಕಂಬಗಳು ಎರಡನೆಯ ಮಾದರಿಯಲ್ಲಿವೆ. ದೇವೀಹೊಸೂರಿನ ಭೋಗೇಶ್ವರ ದೇವಾಲಯದ ಕಂಬಗಳು , ಚಿಕ್ಕೇರೂರಿನ ವೀರಭದ್ರ ದೇವಾಲಯದ ಬದಿಯಲ್ಲಿ ನಿಲ್ಲಿಸಿದ ಕಂಬಗಳು ಒಂದನೆಯ ಮಾದರಿಯಲ್ಲಿವೆ. ಕಡಿಮೆ ಎತ್ತರದ ದುಂಡಾದ ಕಂಬಗಳು ಎರಡನೆಯ ಮಾದರಿಯನ್ನು ಹೊಂದಿವೆ.

೭) **ದೇವಾಲಯಗಳು :** ಈ ಮೇಲೆ ಹೇಳಿದಂತೆ ಈ ಅಧ್ಯಯನದಲ್ಲಿ ಎರಡು ರೀತಿಯ ದೇವಾಲಯಗಳನ್ನು ಗುರುತಿಸಲಾಗಿದೆ. ಒಂದು ಇಟ್ಟಿಗೆ ಮತ್ತು ಶಿಲೆಯ ದೇವಾಲಯಗಳು. ಎರಡನೆಯದು ತೆರೆದ ಸ್ತಂಭ ಮಂಟಪ.

೮) **ಗೋಡೆ :** ಸರಳ ಗೋಡೆಗಳಲ್ಲಿ ಉದ್ದನೆಯ ಅರ್ಧಕಂಬಗಳು ಇಲ್ಲಿ ಮುಖ್ಯವೆನಿಸಿವೆ.

ಉದಾಹರಣೆಗೆ ದೇವೀಹೊಸೂರಿನ ಬನಶಂಕರಿ ದೇವಾಲಯ.

೯) **ಬಾಗಿಲ ಫಲಕಗಳು :** ಬಾಗಿಲ ಫಲಕಗಳಲ್ಲಿ ಸರಳ ಅಥವಾ ವಿವಿಧ ಅಲಂಕಾರ (ರತ್ನಪಟ್ಟಿಕೆ, ಲತಾಸುರುಳಿ, ಹಗ್ಗದ ಅಲಂಕಾರ, ಬಳ್ಳಿಗಳು, ಸುರುಳಿಯಲ್ಲಿ ವಾದ್ಯಗಾರರು ಇತ್ಯಾದಿ. ಈ ಫಲಕಗಳ ಬುಡದಲ್ಲಿ ದ್ವಾರಪಾಲಕರು ಅಥವಾ ಪೂರ್ಣಕುಂಭ ಮಾದರಿ ಮತ್ತು ಈ ಫಲಕಗಳ ಬದಿಗೆ ಜಲಾಂಧರಗಳನ್ನು ಕೂಡಿಸಲಾಗಿದೆ.

೧೦) **ಛತ್ತು :** ದೇವಾಲಯಗಳ ಅಂತರಾಳ, ನವರಂಗಗಳ ಛತ್ತುಗಳಲ್ಲಿ ಪದ್ಮಗಳ ವೈವಿಧ್ಯಮಯ ಚಿತ್ರಗಳಿವೆ. ಕೆಲವೊಮ್ಮೆ ಒಂದೇ ಛತ್ತಿನಲ್ಲಿ ಹಲವಾರು ಪದ್ಮಗಳ ಅಲಂಕಾರಗಳಿವೆ. ಉದಾಹರಣೆಗೆ ಚಿಕ್ಕೇರೂರಿನ ಮಾರುತಿ ಮಂದಿರದ ಅಂತರಾಳ ಮತ್ತು ಮಂತ್ರವಾಡಿಯ ಮಾರುತಿ ಮಂದಿರ.

೧೧) **ಶಾಸನಗಳು :** ಪ್ರಕಟಿತ ಕ್ರಿ. ಶ. ೧೦ ನೇ ಶತಮಾನದ ವರೆಗಿನ ಶಾಸನಗಳು ಈ ಮೇಲೆ ಅಧ್ಯಯನ ಮಾಡಿದ ಹಲವಾರು ಸ್ಥಳಗಳಲ್ಲಿ ಇದ್ದರೂ ಕೆಲವುಗಳಲ್ಲಿ ಮಾತ್ರ ದೇವಾಲಯಗಳ ಹೆಸರುಗಳು ಉಲ್ಲೇಖಿವಾಗಿವೆ. ಬೆಳಕಿಗೆ ಬಂದ ಕೆಲವು ದೇವಾಲಯಗಳ ಸ್ಥಳಗಳಲ್ಲಿ ಕ್ರಿ. ಶ. ೧೦ನೇ ಶತಮಾನದ ನಂತರದ ಪ್ರಕಟಿತ ಕೆಲವು ಶಾಸನಗಳಲ್ಲಿ ದೇವಾಲಯಗಳ ಯಾವ ಉಲ್ಲೇಖಿಗಳೂ ಇರುವುದಿಲ್ಲ. ಇದಲ್ಲದೆ ಈ ಅನ್ವೇಷಣೆಯಲ್ಲಿ ಹೊಸದಾಗಿ ಕೆಲವು ಶಾಸನಗಳು ಕಂಡುಬಂದಿವೆ.

ಈ ಅನ್ವೇಷಣೆ ಮತ್ತು ಅಧ್ಯಯನದಿಂದ ಧಾರವಾಡ ಜಿಲ್ಲೆಯಲ್ಲಿ ಇನ್ನೂ ಹೆಚ್ಚಿನ ರಾಷ್ಟ್ರಕೂಟರ ಕಾಲದ ಹೊಸ ವಾಸ್ತುಶಿಲ್ಪ ಸಂಗತಿಗಳು ತಿಳಿದುಬಂದಿವೆ. ಅವುಗಳು ಹೀಗಿವೆ.

೧೨) **ಮಂಗಳ ಚಿಹ್ನೆ :** ರಾಷ್ಟ್ರಕೂಟರ ಕಾಲದ ಹಲವಾರು ಶಾಸನಗಳ ಮೇಲೆ ಮಂಗಳ ಚಿಹ್ನೆಗಳಿರುವುದನ್ನು ಗಮನಿಸಲಾಗಿದೆ. ಅವು ಹಸು ಕರು, ಕುಂಡಲಲ್ಲಿ ಅಗ್ನಿ, ಸೂರ್ಯ-ಚಂದ್ರ, ನೇಗಿಲು, ಪೂರ್ಣಕುಂಭ, ಚಕ್ರ, ಧ್ವಜ- ಮತ್ತು ಮೀನಗಳಾಗಿವೆ.

ಇದಲ್ಲದೆ ಧಾರವಾಡ ಜಿಲ್ಲೆಯ ಹಾವೇರಿ ತಾಲೂಕಿನ ಹತ್ತಿಮತ್ತೂರು ; ಬ್ಯಾಡಗಿ ತಾಲೂಕಿನ ಸೀಡೆನೂರ ; ರಾಣೇಬೆನ್ನೂರ ತಾಲೂಕಿನ ಹಿರೇಬಿದರಿ, ಇಟಗಿ, ಬೆನಕನಕೊಂಡ, ಹೂಲಿಹಳ್ಳಿ, ಹಿರೇಮಾಗನೂರ, ಯಲವದಹಳ್ಳಿ ; ಹಿರೇಕೆರೂರ ತಾಲೂಕಿನ ಅರಳೀಕಟ್ಟಿ, ಶಿರಗುಂಬಿ ಮತ್ತು ಮೇದೂರು ಗ್ರಾಮಗಳಲ್ಲಿ ಈ ಕಾಲದ ದೇವಾಲಯ - ಶಿಲ್ಪಗಳು ಕಂಡು ಬಂದಿವೆ. (೧೯೯೪-೯೫).

ಇವುಗಳಲ್ಲಿ ಹಿರೇಬಿದರಿಯ ರಾಮೇಶ್ವರ ಗುಡಿಯಲ್ಲಿ ಗರ್ಭಗೃಹ - ಅಂತರಾಳ ಮಾತ್ರ (ಮೂಲ ಹೆಸರು ಕಲ್ಲಿನಾಥ) ಮತ್ತು ಕಲ್ಲಪ್ಪನಗುಡಿ ಶಿಲ್ಪಾವಶೇಷ ಕಂಬ ದ್ವಾರ ಸೇರಿ ; ಇಟಗಿಯ ಬಸವಣ್ಣನ ಗುಡಿಗೆ ಶಿವಲಿಂಗವುಳ್ಳ ಗರ್ಭಗೃಹ, ಅಂತರಾಳ ಮತ್ತು ನವರಂಗ, ಮಹಿಷಾಸುರಮರ್ಧಿನಿ, ಎರಡು ಕಾರ್ತಿಕೇಯ ಶಿಲ್ಪಗಳು ಮತ್ತು ಎರಡು ವೀರಗಲ್ಲುಗಳು -

ಸು. ೯-೧೦ನೇ ಶತಮಾನ, ಕಲ್ಲೇಶ್ವರ ಗುಡಿಯ ಶಿವಲಿಂಗವುಳ್ಳ ಗರ್ಭಗೃಹ, ತೆರೆದ ಅರ್ಧಮಂಟಪ; ಬೆನಕನ ಕೊಂಡದ ಕಲ್ಲೇಶ್ವರ ಗುಡಿಗೆ ಗರ್ಭಗೃಹ, ಅಂತರಾಳ ಭಾಗ, ಸು. ಕ್ರಿ. ಶ. ೮ನೇ ಶತಮಾನದ ಒಂದು ವೀರಗಲ್ಲು, ಸು. ಕ್ರಿ. ಶ. ೧೩ನೇ ಶತಮಾನದ ಒಂದು ವಿಶಿಷ್ಟ ವೀರಸತಿಗಲ್ಲು ; ಹೂಲಿಹಳ್ಳಿಯ ರಾಮಲಿಂಗ ದೇವಾಲಯದ ಗರ್ಭಗೃಹ, ಅರ್ಧಮಂಟಪ ಭಾಗ ಹಾಗೂ ಹನ್ನೆರಡು ಗೋಸಾಸ ಕಂಬಗಳ ಸಾಲುಗಳು ; ಹಿರೇಮಾಗೂರಿನ ಕಲ್ಲೇಶ್ವರ ಗುಡಿ (ದ್ವಿಕೂಟ ಮಾದರಿ) - ಎರಡು ಗರ್ಭಗೃಹಗಳು, ಎರಡು ಅಂತರಾಳ ಮತ್ತು ಒಂದು (ನವರಂಗ ನಟರಾಜ ಸುತ್ತಲು ಅಷ್ಟದಿಕ್‌ಪಾಲಕರು), ಹಾಗೂ ಒಂಬತ್ತು ಗೋಸಾಸ ಕಂಬಗಳು - ೩ X ೩ ಸಾಲುಗಳು ; ಯಲವದಹಳ್ಳಿಯ ಮಹಿಷಾಸುರ ಮರ್ಧಿನಿ, ಶಿವಲಿಂಗ ಶಿಲ್ಪಗಳು ; ಅರಳಿಕಟ್ಟೆಯ ಕಲ್ಲೇಶ್ವರ ಗುಡಿಯ ಗರ್ಭಗೃಹ - ಅರ್ಧಮಂಟಪ, ಹಾಗೂ ಐದು ವೀರಗಲ್ಲುಗಳು ; ಮೇದೂರಿನ ದೊಡ್ಡಬಸವೇಶ್ವರ ದೇವಾಲಯದ ಗರ್ಭಗೃಹ-ಅರ್ಧಮಂಟಪ ಭಾಗ, ಸಣ್ಣಬಸವೇಶ್ವರ ದೇವಾಲಯದ ತ್ರಿಕೂಟಮಾದರಿ, ಹುತ್ತೇಶ್ವರ ಗುಡಿಗೆ ಗರ್ಭಗೃಹ - ಅರ್ಧಮಂಟಪ ಹಾಗೂ ಹತ್ತಿಮತ್ತೂರ ಗ್ರಾಮದ ಕಲ್ಲೇಶ್ವರ ದೇವಾಲಯ ತ್ರಿಕೂಟಮಾದರಿ, ಒಂದು ವೀರಗಲ್ಲು ಮುಖ್ಯವಾಗಿವೆ. ಈ ಅವಶೇಷಗಳನ್ನು ಪ್ರತ್ಯೇಕವಾಗಿ ಅಧ್ಯಯನ ಮಾಡಲಾಗಿದೆ.

ಅಡಿಟಿಪ್ಪಣಿಗಳು :

೧. ರಾಜಶೇಖರ ಎಸ್ : ೧೯೯೧ : ರಾಷ್ಟ್ರಕೂಟ ಆರ್ಟ್ ಇನ್ ಕರ್ನಾಟಕ

೨. ಷಡಕ್ಷರಯ್ಯ ರು.ಮ. : ೧೯೯೦ : "ಧಾರವಾಡ ಜಿಲ್ಲೆಯಲ್ಲಿ ದೊರೆತ ಪ್ರಾಚೀನ ಇಟ್ಟಿಗೆ ದೇವಾಲಯಗಳು" ಕರ್ನಾಟಕ ಭಾರತಿ, ಸಂ.೨೩ಸಂ.೧ ಪು.೧೨೩-೨೭, ಕ.ವಿ.ವಿ. ಧಾರವಾಡ

೩. ಷಡಕ್ಷರಯ್ಯ ರು.ಮ. : ೧೯೯೨ : "ಗಜಲಕ್ಷ್ಮಿಯ ಗಮನಾರ್ಹ ಶಿಲ್ಪಗಳು" ಕರ್ನಾಟಕ ಭಾರತಿ, ಸಂ.೨೪ ಸಂ.೨೪ ಪು.೯೬-೧೦೪, ಕ.ವಿ.ವಿ. ಧಾರವಾಡ

೪. ಷಡಕ್ಷರಯ್ಯ ರು.ಮ. : ೧೯೯೦ : "ಧಾರವಾಡ ಜಿಲ್ಲೆಯಲ್ಲಿ ಕಂಡ ಬಂದ ರಾಷ್ಟ್ರಕೂಟ ಮತ್ತು ಈ ಕಾಲಪೂರ್ವದ ಶಿಲ್ಪಗಳು" ಕರ್ನಾಟಕ ಭಾರತಿ" ಸಂ.೨೩ಸಂ.೨ ಪು.೧೪-೨೪, ಕ.ವಿ.ವಿ. ಧಾರವಾಡ

೫. ಷಡಕ್ಷರಯ್ಯ ರು.ಮ. : ೧೯೯೨ : "ಸಂಯುಕ್ತ ಕರ್ನಾಟಕ" ದಿನಪತ್ರಿಕೆ

೬. ಡಾ. ಎಂ.ಎಂ. ಕಲಬುರ್ಗಿ:೧೯೭೫ : ಧಾರವಾಡ ಜಿಲ್ಲೆಯಲ್ಲಿ ದೊರೆತ ಶಾಸನಸೂಚಿ, ಪು.೨೭-೩೩,೪೩- ೪೯, ೫೦- ೫೫,೭೦-೮೦
೭. ಷಡಕ್ಷರಯ್ಯ ರು.ಮ. : ೧೯೯೦ : "ಧಾರವಾಡ ಜಿಲ್ಲೆಯಲ್ಲಿ ದೊರೆತ ಪ್ರಾಚೀನ ಇಟ್ಟಿಗೆ ದೇವಾಲಯಗಳು " ಕರ್ನಾಟಕ ಭಾರತಿ, ಸಂ.೨೩ಸಂ.೧ ಪು.೧೨೩-೧೨೭ ಕ.ವಿ.ವಿ. ಧಾರವಾಡ
೮. ಎಸ್.ಐ.ಐ.ನಂ. ೧೯ ಶಾಸನ ನಂ.೬೯
೯. ಕೆ.ಆರ್.ಐ ಪ್ರೊ.ರಿ. : ೧೯೫೩-೫೭ : ಪು. ೫೭
೧೦. ಎ.ರಿ.ಇ.ಎ. ೧೯೬೦-೬೧ ನಂ.೩೩೯
೧೧. ಷಡಕ್ಷರಯ್ಯ ರು.ಮ. : ೧೯೯೦ : ಕರ್ನಾಟಕ ಭಾರತಿ, ಸಂ.೨೩ಸಂ.೨ ಪು.೧೪ ೨೪,ಕ.ವಿ.ವಿ. ಧಾರವಾಡ
೧೨. ಎ.ಇ. ೩೩ ಪು. ೧೩೧-೩೩
೧೩. ಕೆ.ಐ. ೬, ನಂ.೧೨
೧೪. ಎ.ರಿ.ಇ.ಎ. ೧೯೫೭-೫೮, ನಂ.೨೫೯
೧೫. ಎ.ರಿ.ಇ.ಎ. ೧೯೬೦-೬೧, ನಂ.೪೩೯
೧೬. ಕೆ.ಐ. ೪,ನಂ.೧೦
೧೭. ರಾಜಶೇಖರ ಎಸ್. : ೧೯೯೧ : ಅದೇ, ಪು.೪೪
೧೮. ಅದೇ
೧೯. ಎಸ್.ಪಿ.ಪಿ. ೧೯,ಪು.೨೬೪
೨೦. ಷಡಕ್ಷರಯ್ಯ ರು.ಮ. :೧೯೯೦ ಅದೇ : ಕರ್ನಾಟಕ ಭಾರತಿ, ಸಂ. ೨೩ ಸಂ.೧ ಪು.೧೪-೨೪,ಕ.ವಿ.ವಿ.ಧಾರವಾಡ
೨೧. ಎ.ಆರ್.ಐ.ಇ. ೧೯೩೨ -೩೩, ನಂ. ೩೭
೨೨. ಎ.ಆರ್.ಐ.ಇ. ೧೯೪೫-೪೬, ನಂ. ೩೧೮
೨೩. ಷಡಕ್ಷರಯ್ಯ ರು.ಮ. :೧೯೯೦ : ಸಂಯುಕ್ತ ಕರ್ನಾಟಕ, ದಿನಪತ್ರಿಕೆ

ಕೃತಜ್ಞತೆಗಳು :

ಕನ್ನಡ ಸಂಶೋಧನ ಸಂಸ್ಥೆಯ ವತಿಯಿಂದ ಈ ಯೋಜನೆ ಅಡಿಯಲ್ಲಿ ಅನ್ವೇಷಣೆ ಮತ್ತು ಅಧ್ಯಯನ ಮಾಡಲು ಅನುಮತಿ ನೀಡಿದ ಕರ್ನಾಟಕ ವಿಶ್ವವಿದ್ಯಾಲಯದ ಕುಲಪತಿಗಳಾದ ಡಾ. ಎಸ್.ರಾಮೇಗೌಡ ಅವರಿಗೆ ಅನಂತ ಕೃತಜ್ಞತೆಗಳು.



೧. [illegible] ದೇವಾಲಯ ಚಿತ್ರ.



೨. ದೇವಾಲಯದ [illegible]











೭.



೮. ದೇವಿ (ಮುಂಭಾಗ)   ದೇವಿ (ಹಿಂಭಾಗ)

ಮಹಿಷಾಸುರ ಮರ್ದಿನಿ



೯



೧೧



೧೦





೧೫




೧೬






೧೮




೧೯




೨೦



೨೧





೨೬



೨೭

ಬಹು ಉಪಯೋಗಿ ಬಳಪದ ಕಲ್ಲು

● ಎಂ. ಮುನಿಸ್ವಾಮಯ್ಯ

ಬಳಪದ ಕಲ್ಲು ಸಾಮಾನ್ಯವಾಗಿ ಹಾಲು ಬಿಳುಪು, ತಿಳಿಬೂದು, ಕಂದು ಮಿಶ್ರಿತ ಬೂದು, ಬೂದು ಮತ್ತು ಹಸಿರು ಬೂದು ಬಣ್ಣಗಳಿಂದ ಕೂಡಿದ್ದು, ಬಂಡೆಯರೂಪದಲ್ಲಿ ದೊರೆಯುತ್ತದೆ. ಉತ್ತಮ ದರ್ಜೆಯ ಬಳಪದ ಕಲ್ಲನ್ನು ಮುಖ ಮೈಗೆ ಹಚ್ಚುವ ಪುಡಿ (ಟಾಲ್ಕಂ ಪೌಡರ್) ತಯಾರಿಸಲು ಉಪಯೋಗಿಸುತ್ತಾರೆ. ಇದು ಸೋಪಿನಂತೆ ಕಂದು ಮಿಶ್ರಿತ ಬಣ್ಣ ಹೊಂದಿದ್ದು, ಮೃದುವಾಗಿ ನುಣುಪಾಗಿ ಇರುವುದರಿಂದ ಸೋಪ್ ಸ್ಟೋನ್ ಎಂದು ಕರೆಯುತ್ತಾರೆ. ಬಳಪದಕಲ್ಲು ಕೆಳದರ್ಜೆಯದಾಗಿದ್ದರೆ "ಪಾಟ್ ಸ್ಟೋನ್" ಎಂದು ಕರೆಯುತ್ತಾರೆ. ಇದು ಉತ್ತಮ ದರ್ಜೆಯ ಬಳಪದ ಕಲ್ಲಿಗಿಂತ ಗಡುಸಾಗಿರುತ್ತದೆ. ಇದರಲ್ಲಿ ಮೈಕಾಪೈರೈಟ್ ಮತ್ತು ಗಾರ್ನೆಟ್ ಹರಳುಗಳಿಂದ ಕೂಡಿರುತ್ತದೆ.

ಬಳಪದ ಕಲ್ಲು ಸಾಮಾನ್ಯವಾಗಿ ಹೈಡ್ರಸ್ ಮ್ಯಾಗ್ನೀಸಿಯಂ ಸಿಲಿಕೇಟ್ ರಸಾಯನ ಲವಣಗಳಿಂದ ಕೂಡಿದೆ. ಇದು ಸಾಮಾನ್ಯವಾಗಿ ಅಗ್ನಿಶಿಲೆ ಮತ್ತು ರೂಪಾಂತರ ಶಿಲೆಗಳಲ್ಲಿರುವ ಹೈಪರ್‌ಸ್ತಿನ, ಅಲವಿನ್, ಕ್ರೈಸೋಟೈಲ್,ಅಂಫಿಬೋಲ್,ಪೈರಾಕ್ಸಿನ್ ಮುಂತಾದ ಖನಿಜಗಳಲ್ಲಿನ ಮೂಲಕ್ಷಾರೀಯ ಲವಣಗಳ ಮ್ಯಾಗ್ನಿಸಿಯಂ ಸಿಲಿಕೇಟ್ ಲವಣಾಂಶಗಳು ೧೩೦೦ ಡಿಗ್ರಿ ಸೆಂಟಿಗ್ರೇಡನಿಂದ ೧೪೦೦ ಡಿಗ್ರಿ ಸೆಂಟಿಗ್ರೇಡ್‌ನಲ್ಲಿ ಕಾದಾಗ ಕರಗಿ ಜಲ ಉಷ್ಣತೆಯ ಕ್ರಿಯೆಯಿಂದ ಬೇರ್ಪಟ್ಟು ಘನೀಕರಿಸಿ ಬಳಪದ ಕಲ್ಲು ರೂಪಾಂತರಗೊಳ್ಳುತ್ತದೆ. ಈ ಶಿಲೆಯು ಕೆಲವು ಪ್ರದೇಶದಲ್ಲಿ ಇಂಗಾಲಾವ್ಲ ಲವಣಗಳನ್ನೊಳಗೊಂಡ ಖನಿಜವಾದ ಡಾಲೋಮೈಟ್,ಬ್ರೂನರೈಟ್, ಅಕ್ಟಿನೋಲೈಟ್, ಕನ್ನಾರು, ಮ್ಯಾಗ್ನಸೈಟ್'ಮುಂತಾದವುಗಳಲ್ಲಿರುವ ಮ್ಯಾಗ್ನಿಸಿಯಂ ಸಿಲಿಕೇಟ್ ಲವಣಾಂಶಗಳು ಜಲ ಉಷ್ಣತೆಯ ಕ್ರಿಯೆಯಿಂದ ಕರಗಿ ಬೇರ್ಪಟ್ಟು ಬಳಪದ ಕಲ್ಲು ರೂಪಗೊಳ್ಳುತ್ತದೆ.

ಬಳಪದ ಕಲ್ಲಿನ ಉಪಯೋಗಗಳು

ಪೃಥ್ವಿಯಲ್ಲಿ ದೊರೆಯುವ ಖನಿಜಗಳಲ್ಲಿ ಬಳಪದ ಕಲ್ಲು ಮೆದು ಹಾಗೂ ಮೃದು. ಆದ್ದರಿಂದ ಕರ್ನಾಟಕಗಲ್ಲಿ ಬಳಪದ ಕಲ್ಲನ್ನು ವಿಶೇಷವಾಗಿ ಕರಕುಶಲ ಕಲೆಗೆ ಮತ್ತು

ಶಿಲ್ಪಕಲೆಗೆ ಉಪಯೋಗಿಸುತ್ತಿದ್ದಾರೆ. ಇದಕ್ಕೆ ಸಾಕ್ಷಿಯಾಗಿ ಹೊಯ್ಸಳರ ಕಾಲದ ಜಗತ್ಪ್ರಸಿದ್ಧ ದೇವಾಲಯಗಳಾದ ಹಾಸನ ಜಿಲ್ಲೆಯ ಬೇಲೂರು, ಹಳೇಬಿಡು, ಮೈಸೂರು ಸಮೀಪವಿರುವ ಸೋಮನಾಥ ದೇವಾಲಯಗಳಲ್ಲಿ ಬಳಪದ ಕಲ್ಲಿನಲ್ಲಿ ಕೆತ್ತಿರುವ ಸುಂದರ ಮೂರ್ತಿಗಳು, ಚಿತ್ತಾಕರ್ಷಕ ಕಂಬಗಳು ಹಾಗೂ ಈ ದೇವಾಲಯಗಳಿಗೆ ಅಡಿಯಿಂದ ಮುಡಿಯವರೆಗೆ ಆಮೂಲಾಗ್ರವಾಗಿ ಉಪಯೋಗಿಸಿರುವ ಕಟ್ಟಡದ ಸಾಮಗ್ರಿಗಳೆಲ್ಲಾ ಬಳಪದ ಕಲ್ಲಿನವು. ಆದ್ದರಿಂದ ಈ ದೇವಾಲಯಗಳು ನಿರಂತರವಾಗಿ ದೇಶ ವಿದೇಶದ ಯಾತ್ರಿಕರನ್ನು " ಬಾಗಿಲಲಿ ಕೈ ಮುಗಿದು ಒಳಗೆ ಬಾ ಯಾತ್ರಿಕರೆ ಇದು ಶಿಲೆಯಲ್ಲ ಕಲೆಯ ಬಲೆ " ಎಂದು ಕರೆಯುತ್ತಿವೆ.

ಈ ದೇವಾಲಯಗಳಲ್ಲಿ ಕಾಣಬರುವ ಶಿಲ್ಪಗಳಲ್ಲಿನ ಕೆತ್ತನೆಗಳಲ್ಲಿನ ಕೌಶಲ, ವಿಗ್ರಹಗಳ ರೂಪ ರಚನೆ, ಪ್ರಮಾಣ ಮುಂತಾದವು ಅಂದಿನ ಸುಂದರ ಕಲಾಕೃತಿಯ ಸ್ಮಾರಕಗಳಾಗಿವೆ. ಶಿಲ್ಪದ ಪರಾಕಾಷ್ಠೆಯನ್ನು ದೇಗುಲದ ಮುಖ್ಯದ್ವಾರ, ದೇಗುಲದ ಸುತ್ತಲಿರುವ ಗೋಡೆಗಳಲ್ಲಿ, ಕಂಬಗಳಲ್ಲಿ ಮತ್ತೆ ದೇಗುಲದ ಮೇಲ್ಛಾವಣೆಯಲ್ಲಿ ಕಾಣಬಹುದು.

ಬಳಪದ ಕಲ್ಲನ್ನು ಶಿಲ್ಪಕಲೆಗಳಿಗಲ್ಲದೆ, ಅಡಿಗೆ ಮನೆಗಳಲ್ಲಿ ಸಿಂಕ್‌ಗಳಿಗೆ, ತೊಟ್ಟಿಗಳನ್ನು ನಿರ್ಮಿಸಲು, ಪೆನ್ನು ಮತ್ತು ಪೆನ್ಸಿಲ್ಲು ಸ್ಟ್ಯಾಂಡ್‌ಗೆ, ಹೂವಿನ ಕುಂಡ, ಸ್ವಿಚ್‌ಬೋರ್ಡಗಳಿಗೆ, ರಾಸಾಯನಿಕ ಪ್ರಯೋಗಾಲಯಗಳಲ್ಲಿ ಟೇಬಲ್‌ಗಳ ಮೇಲೆ ಆಮ್ಲ ನಿರೋಧಕ ಕಲ್ಲು ಹಲಗೆಗೆ ಉಪಯೋಗಿಸುತ್ತಾರೆ. ಅಲ್ಲದೆ, ಈ ಕಲ್ಲನ್ನು ೧೨೦೦ ಡಿಗ್ರಿ ಸೆಂಟಿಗ್ರೇಡ್‌ವರೆಗೆ ಕಾಯಿಸಿದರೂ ಕರಗದ ಕಾರಣ ವಿದ್ಯುತ್ ನಿರೋಧಕವಾಗಿ, ದೊಡ್ಡ ಫೌಂಡರಿಗಳ ಕುಲುಮೆಗಳ ಒಳ ಲೈನಿಂಗಿಗೆ ಅಗ್ನಿ ನಿರೋಧಕ ಇಟ್ಟಿಗೆಯಾಗಿ ಉಪಯೋಗಿಸುತ್ತಾರೆ. ಈ ಬಳಪದ ಕಲ್ಲಿಗೆ ಹೀರಿಕೊಳ್ಳುವ ವಿಶೇಷಗುಣ ಇರುವುದರಿಂದ, ಎಣ್ಣೆ ಮತ್ತು ಗ್ರೀಸನ್ನು ಹೊರಗೆ ತೆಗೆಯಲು ಜವಳಿ ಕಾರ್ಖಾನೆಗಳಲ್ಲಿ ಉಪಯೋಗಿಸುತ್ತಾರೆ. ಇದರ ಪುಡಿ ಬಹಳ ಮೃದುವಾಗಿರುವದರಿಂದ ಪ್ಲಾಸ್ಟಿಕ್ ಮತ್ತು ಲಿನೋಲಿಯಂ ಕೈಗಾರಿಕೆಯಲ್ಲಿ, ಕಲ್ನಾರಿನಿಂದ ಸಿದ್ಧಪಡಿಸಿದ ವಸ್ತುಗಳಿಗೆ, ಸೋಪು ತಯಾರಿಕೆಗೆ, ಮುಲಾಮು ತಯಾರಿಕೆಗೆ, ಸುಗಂಧಗೊಳಿಸಿದ ಪುಡಿಯನ್ನು ಮುಖ ಮೈಗೆ ಹಚ್ಚಿಕೊಳ್ಳಲು, ಟಾಲ್ಕಂ ಪೌಡರ್ ಆಗಿ ಉಪಯೋಗಿಸುತ್ತಾರೆ. ಅಲ್ಲದೆ ಇದನ್ನು ರಬ್ಬರ್ ತಯಾರಿಕೆಗೆ, ಬಣ್ಣ ತಯಾರಿಕೆಗೆ, ಕೀಟನಾಶಕ ಔಷಧಿಗಳಿಗೆ, ಕಳೇನಾಶಕ ಔಷಧಿಗಳಿಗೆ, ಕಾಗದ ತಯಾರಿಕೆಗೆ, ರೇಡಿಯೋ, ರೇಡಾರ್, ದೂರದರ್ಶನದ ಸಾಧನಗಳಿಗೆ, ಪಿಂಗಾಣಿ ಹಾಗೂ ಅಲಂಕಾರಿಕ ವಸ್ತುಗಳ ತಯಾರಿಕೆಯಲ್ಲಿ ಇದರ ಬಳಕೆಯು ವಿಶೇಷವಾಗಿದೆ.

ಭಾರತದಲ್ಲಿ ಬಳಪದ ಕಲ್ಲು ದೊರೆಯುವ ರಾಜ್ಯಗಳು

ಭಾರತದಲ್ಲಿ ಮುಖ್ಯವಾಗಿ ಆಂಧ್ರಪ್ರದೇಶ, ಬಿಹಾರ, ಗುಜರಾತ್, ಮಧ್ಯಪ್ರದೇಶ, ಮಹಾರಾಷ್ಟ್ರ, ರಾಜಸ್ಥಾನ, ತಮಿಳನಾಡು ಹಾಗೂ ಕರ್ನಾಟಕ ರಾಜ್ಯಗಳಲ್ಲಿ ಈ ಬಳಪದ ಕಲ್ಲುಗಳು ದೊರೆಯುತ್ತವೆ.

ಕರ್ನಾಟಕದಲ್ಲಿ ದೊರೆಯುವ ಪ್ರದೇಶಗಳು

ಕರ್ನಾಟಕದಲ್ಲಿ ಹೇಳಿಕೊಳ್ಳುವಂತಹ ಬಿಳಿ ಬಣ್ಣದ ಉತ್ತಮ ದರ್ಜೆಯ ಬಳಪದ ಕಲ್ಲಿನ ನಿಕ್ಷೇಪಗಳು ಇಲ್ಲದಿದ್ದರೂ ಕಂದು ಬೂದು ಮಿಶ್ರಿತ, ಬೂದು ಬಣ್ಣದ ಬಳಪದ ಕಲ್ಲಿನ ನಿಕ್ಷೇಪಗಳಿಗೆ ಕೊರತೆಯಂತೂ ಇಲ್ಲ. ಸಾಮಾನ್ಯವಾಗಿ ಕರ್ನಾಟಕದಲ್ಲಿ ಬಳಪದ ಕಲ್ಲು ಎಳೆ ಎಳೆಯಾಗಿ (ವೈನ್ಸ್)ರೂಪದಲ್ಲಿ ಮತ್ತು ಪಟ್ಟೆ ಪಟ್ಟೆಯಾಗಿ ಹಾಗೂ ಅಂಡಾಕೃತಿಯ ರೂಪದಲ್ಲಿ ಅತಿಕ್ಷಾರೀಯ ಲವಣಾಂಶವುಳ್ಳ ಮೂಲ ಶಿಲೆಗಳಲ್ಲಿ ಮತ್ತು ಅಗ್ನಿ ಶಿಲೆಗಳ ಪ್ರದೇಶದಲ್ಲಿ ದೊರೆಯುತ್ತವೆ. ಕರ್ನಾಟಕದಲ್ಲಿ ಇವು ಸಣ್ಣ ಪ್ರಮಾಣದ ನಿಕ್ಷೇಪಗಳೇ ವಿನಃ ದೊಡ್ಡ ಪ್ರಮಾಣದ ನಿಕ್ಷೇಪಗಳಲ್ಲ.


ಬಳಪದ ಕಲ್ಲು ರಾಜ್ಯದಲ್ಲಿ ದೊರೆಯುವ ಪ್ರದೇಶಗಳನ್ನು ಈ ಕೆಳಗಿನ ಪಟ್ಟಿಯಲ್ಲಿ ವಿವರಿಸಿದೆ.

ಕ್ರ. ಸಂ.	ಜಿಲ್ಲೆಯ ಹೆಸರು	ತಾಲೂಕು	ದೊರೆಯುವ ಸ್ಥಳ	ಶರಾ
೧	ಬೆಂಗಳೂರು	೧. ಬೆಂಗಳೂರು ದಕ್ಷಿಣ	ಬಡೆ ಮನವರ್ತಿ ಕಾವಲು, ಗುಂಡ್ಲು,	
		೨. ದೊಡ್ಡ ಬಳ್ಳಾಪುರ	ಹಣಬೆ, ಅರೂಡಿ.	
೨.	ಬಳ್ಳಾರಿ	೧. ಹರಪನಹಳ್ಳಿ	ನರಸಿಂಹ ದೇವರ ಬೆಟ್ಟ ಪ್ರದೇಶ, ಅರ್ಸಾಪೂರದ ಬೆಟ್ಟದ ಪ್ರದೇಶ, ನೀಲಗುಂದದ ಬೆಟ್ಟದ ಪ್ರದೇಶ,	ಈ ಪ್ರದೇಶದಲ್ಲಿ ದೊರೆಯುವ ಬಳಪದ ಕಲ್ಲು ಹವಾಮಾನಕ್ಕೆ ಕಡದೆ ದೀರ್ಘಕಾಲ ತನ್ನ ಗುಣಮಟ್ಟ ಉಳಿಸಿಕೊಂಡಿರುವುದರಿಂದ ಕುಮದ್ವತಿ, ನೀಲಗುಂದ, ಬಗಲಿ, ಮತ್ತು ನಾಗಡಗವಿ ದೇವಸ್ಥಾನಗಳಲ್ಲಿನ ಮೂರ್ತಿಗಳನ್ನು ಕೆತ್ತಲು ಬಳಸಿದ್ದಾರೆ. ಕೆಲವು ಗೃಹ ಉಪಯೋಗಿ ವಸ್ತುಗಳನ್ನು ಅಲ್ಲದೆ ತಯಾರಿಸಲು ಉಪಯೋಗಿಸುತ್ತಿದ್ದಾರೆ.
೩.	ಚಿತ್ರದುರ್ಗ	೧. ಹೊಳಲ್ಕೆರೆ	ಲೋಕದ್ಹಳ್ಳಿ, ಅಂದನೂರು, ಕುಡಿನೀರಕಟ್ಟೆ	
		೨. ಹಿರಿಯೂರು	ಕಂಬದಹಳ್ಳಿ, ಗೊಲ್ಲರಟ್ಟಿ ಮಧ್ಯೆ.	
೪.	ಧಾರವಾಡ	೧. ಶಿರಹಟ್ಟಿ	ಬೆಳಗಟ್ಟಿ	
೫.	ಹಾಸನ	೧. ಅರಸೀಕುಂಟೆ	ಬೆಳೇನಹಳ್ಳಿ, ಜಾದಗಟ್ಟಿ, ವನಹಳ್ಳಿ, ಕೊನೆಹಳ್ಳಿ, ಅಣ್ಣೆಕನಹಳ್ಳಿ, ಸಸಿವಾಳ, ರಾಮಾಪೂರ.	ಈ ಪ್ರದೇಶದ ಬಳಪದ ಕಲ್ಲನ್ನು ಭದ್ರಾವತಿ ಕಾಗದದ ಕರ್ಖಾನೆಗೆ ಉಪಯೋಗಿಸುತ್ತಿದ್ದಾರೆ.
		೨. ಬೇಲೂರ	ಬೇಲೂರ, ರಾಮದೇವರಹಳ್ಳಿ, ಕಲ್ಯಾಣಪೂರ, ಗಿರಿಕಲ್ಲಹಳ್ಳಿ, ಕಟ್ಟೆಸೋಮನಹಳ್ಳಿ	ಈ ಪ್ರದೇಶದ ಬಳಪದ ಕಲ್ಲನ್ನು ಬೇಲೂರು ಹಾಗೂ ಹಳೇಬೀಡು, ದೇವಾಲಯಗಳಿಗೆ ಉಪಯೋಗಿಸಿದ್ದಾರೆ.

೬.	ಮಂಡ್ಯ	೧.ಕೃಷ್ಣರಾಜಪೇಟೆ	ಬಸರಾಳು, ಬೀಚನಹಳ್ಳಿ, ಹಂಪಾಪೂರ, ಬೆಟ್ಟದನಲ್ಲನಹಳ್ಳಿ	ಈ ಪ್ರದೇಶದ ಬಳಪದ ಕಲ್ಲನ್ನು ದೇವಸ್ಥಾನದ ಮೂರ್ತಿಗಳನ್ನು ಕೆತ್ತಲು ಮತ್ತು ಗೃಹಉಪಯೋಗಿ ವಸ್ತುಗಳಿಗೆ ಉಪಯೋಗಿಸುತ್ತಿದ್ದಾರೆ.
		೨.ನಾಗಮಂಗಲ	ಶಂಕರನ ಹಳ್ಳಿ	
೭.	ಉತ್ತರ ಕನ್ನಡ	೧. ಯಲ್ಲಾಪುರ,	ಕಾಡೂರು ಸಮೀಪ, ಬಾಚುಗುಪ್ಪ.	
		೨. ಕುಮಟಾ	ಧಾರೇಶ್ವರ.	
೮.	ಮೈಸೂರು	೧.ಮೈಸೂರು	ಕಡಕೋಳ, ಚೆನ್ನಳ್ಳಿ,	ಈ ಪ್ರದೇಶದ ಬಳಪದ ಕಲ್ಲನ್ನು ದೇವಸ್ಥಾನದ ಮೂರ್ತಿಗಳನ್ನು ಕೆತ್ತಲು ಮತ್ತು ಗೃಹಉಪಯೋಗಿ ವಸ್ತುಗಳಿಗೆ ಬಳಸುತ್ತಿದ್ದಾರೆ.
		೨. ಹೆಗ್ಗಡದೇವನ ಕೋಟೆ	ಮನಹಳ್ಳಿ, ಸರಗೂರು.	
		೩. ಟೀ ನರಸೀಪುರ	ವರುಣ	
೯.	ಶಿವಮೊಗ್ಗಾ	೧. ಹೊನ್ನಾಳಿ	ಸವಲಂಗ, ಕುದ್ದಿಕೊಪ್ಪ.	
		೨. ತೀರ್ಥಹಳ್ಳಿ	ಕವಲೇದುರ್ಗ.	
		೩. ಭದ್ರಾವತಿ	ಭದ್ರಾವತಿ, ಬಾಡಿಗುಂಡ.	
೧೦.	ತುಮಕೂರ	೧. ತುಮಕೂರ	ಕಡೆಹಳ್ಳಿ, ವನ್ನೇನಹಳ್ಳಿ, ಭೀರಸಂದ್ರ.	ಈ ಪ್ರದೇಶದಲ್ಲಿ ಸಿಗುವ ಬಳಪದ ಕಲ್ಲು ಗಟ್ಟಿಯಾಗಿರುವದರಿಂದ ಹಾಗೂ ಕಪ್ಪು ಪಾಲಿಷ್ ಚೆನ್ನಾಗಿ ತೆಗೆದುಕೊಳ್ಳುವದರಿಂದ ಮೈಸೂರಿನ ಅರಮನೆಗೆ ಮತ್ತು ಶ್ರೀರಂಗಪಟ್ಟಣದ ಟಿಪ್ಪುಸುಲ್ತಾನನ ಸಮಾಧಿ ಕಟ್ಟಿದಕ್ಕೆ ಉಪಯೋಗಿಸಿದ್ದಾರೆ.
		೨. ತಿಪಟೂರು	ಸಂಗನಹಳ್ಳಿ, ಬಿದರಮ್ಮನ ಗುಡಿ ಕಾವಲು.	
		೩. ಚಿಕ್ಕನಾಯಕನ ಹಳ್ಳಿ	ಹೊನ್ನೇಬಾವಿ.	
೧೧.	ರಾಯಚೂರು	೧. ಲಿಂಗಸೂರು	ಗುರುಗುಂಟ.	
೧೨	ಸೇಡಂ	೧. ಸೇಡಂ	ಕೊಳಕುಂದ.	

ನಾನಾ ಬಗೆಯ ಕಾಲ್ಪನಿಕ ಸುಂದರ ಕಲಾಕೃತಿಗಳನ್ನು ಗೃಹ ಬಳಕೆ ವಸ್ತುಗಳಿಗೆ ತಯಾರಿಸುತ್ತಿರುವ ಶಿಲ್ಪಿಗಳು ತಮ್ಮ ಶ್ರಮಕ್ಕೆ ತಕ್ಕ ಬೆಲೆ ಸಿಕ್ಕಬಹುದೆಂಬ ಮಹದಾಸೆಯಿಂದ ನಿತ್ಯವೂ ಹೊಸ ಹೊಸ ಕಲಾಕೃತಿಗಳನ್ನು ಸೃಷ್ಟಿಸುತ್ತಿದ್ದಾರೆ.

ನಮ್ಮ ರಾಜ್ಯದಲ್ಲಿರುವ ಬಳಪದ ಕಲ್ಲಿನ ನಿಕ್ಷೇಪಗಳ ಪ್ರಮಾಣವನ್ನು ಬೇರೆ ರಾಜ್ಯಕ್ಕೆ ಹೋಲಿಸಿದರೆ ಇಲ್ಲಿ ದೊರೆಯುವ ಸಂಪತ್ತು ಕಡಿಮೆ ಎಂದು ಹೇಳಬಹುದು, ಆದರೆ ಈ ಬಳಪದ ಕಲ್ಲಿಗೆ ವಿವಿಧ ಕೈಗಾರಿಕಾ ಉದ್ದಿಮೆಗಳಲ್ಲಿ ಅಪಾರ ಬೇಡಿಕೆ ಇರುವುದರಿಂದ ಆರ್ಥಿಕವಾಗಿ ಇದೊಂದು ಲಾಭಾದಾಯಕ ಗಣಿ ಉದ್ದಿಮೆ. ಆದ್ದರಿಂದ ಇದರ ಬಗ್ಗೆ ಇನ್ನೂ ಹೆಚ್ಚಿನ ಶೋಧನೆ ನಡೆಸಿದರೆ ರಾಜ್ಯದಲ್ಲಿ ಇನ್ನೂ ಹಲವು ಹೊಸ ನಿಕ್ಷೇಪಗಳು ಸಿಗುವುದರಲ್ಲಿ ಸಂಶಯವಿಲ್ಲ. ಆದ್ದರಿಂದ ರಾಜ್ಯದ ಆರ್ಥಿಕ ಸಂಪನ್ಮೂಲವು ಕೂಡಾ ಅಧಿಕವಾಗುತ್ತದೆ.



ಬಿಜ್ಜಾವರದ ಮುಮ್ಮಡಿ ಚಿಕ್ಕಪ್ಪ ದೊರೆಗಳ ಸೂತಕಾದಿಗಳಿಗೆ ಒಳಗಾದ ಜನರು

● ಬಿ. ಆರ್. ಹಿರೇಮಠ

ನಮ್ಮ ಸೂತಕಾದಿಗಳಿಗೆ ಒಳಗಾಗಿ ಇರುವ ಜನರು ಗೌಡುಗಳು-ಗುಂಡುಗಲ್ಲು ಬೆಳೆನೂರು ಒಕ್ಕಲಿಗರು, ಆರಿವೆಗೌಡ ತುಂಗೋಟಿ ವಕಿತದ ಒಕ್ಕಲಿಗರು, ದಾಸೇಗೌಡ ಹರಿವೆಗೌಡ, ಬಿಜ್ಜಾವರ ಕಲ್ಲೀಕೆರೆ ಹುರುಳಿ ಒಕ್ಕಲಿಗರು ಮುದೇಗೌಡ ತೋವಿನಕೆರೆ ಗೌಡಸಾನಿ ದ್ಯಾವಮ್ಮ, ಹಳ್ಳಿಗರು ಸೂರೇನಹಳ್ಳಿ ಮೂಡಲಗಿರೇಗೌಡ ಸೂರೆ ಕುಂಚಟಿಗರು.

ನಮ್ಮ ಊಳಿಗದವರು- ಚೆಂಜಿನ ಶೀಲಿದ್ವಮದೂಡಿ ಬಣಜಿಗರು, ಕೆರೆಹಳ್ಳಿಕಾರು, ಜೋಗಿಹಳ್ಳಿಕಾರು, ತೆಲುಗರು, ಪಾವಡದವರು, ಉಗ್ರ ಎಂಟು ಪಾವಡದವರು, ತುಂಗೋಟಿಯೂರ ತಿಮ್ಮ, ಚಿಕ್ಕತಿಮ್ಮ, ಕಾಳಮುದ್ದ, ಕೊಲ್ಲಾರಿ ಅಗಸರ ಗೊರವಮಲ್ಲ ಇವರು ಎಲ್ಲರೂ ನಮ್ಮ ಸೂತಕಾದಿಗಳಿಗೆ ಒಳಗಾದ ಊಳಿಗದವರು.*

---

*ಶಂಘೋನಹಳ್ಳಿಯ ಕಾಗದ ಪ್ರತಿಯೊಂದರ ಅಂತ್ಯದಲ್ಲಿ `` ಮುಂಮಡಿ ಬಿಜವರದ ಚಿಕ್ಕಪ್ಪ ದೊರೆಗಳ ಸೂತಕಾದಿಗಳಿಗೆ ಒಳಗಾದ ಜನರು. ೧೬.೩.೧೯೦೯ ಅಸಲಿಗೆ ಸರಿಯಾದ ನಕಲ್. ಕೀಲಕ ಸಂವತ್ಸರದ ಫಾಲ್ಗುಣ ಬಹುಳ ೮'' ಎಂದಿದೆ.

ನಾಲ್ಕು ಕವನ ಸಂಕಲನಗಳು

● ಡಿ. ಬಿ. ಢಂಗ

- **ಏಕಾಂತದ ಮನುಷ್ಯ : ಸರಜೂ ಕಾಟಕರ**
  (ವೈಶಾಖ ಪ್ರಕಾಶನ, ಬೆಂಗಳೂರು : ೧೯೯೩)
- **ವಿಧಾನ ಸೌಧ : ಆರ್. ಮೋಹನ ನಾಗಮ್ಮನವರ**
  (ಮಹಾಮನೆ ಪ್ರಕಾಶನ, ಧಾರವಾಡ:೧೯೯೩)
- **ಸಂಗಾತಿ : ಮಹೇಶ ನಾವಳ್ಳಿ**
  (ಸಿಂಚನ ಪ್ರಕಾಶನ, ಅಮ್ಮಿನಭಾವಿ ಧಾರವಾಡ: ೧೯೯೩)
- **ಕತ್ತಲೆ ದಾರಿ : ರಾಜೇಂದ್ರ ಅಣ್ಣಾನವರ**
  (ದಾಂಗುಡಿ ಪ್ರಕಾಶನ, ರಾಮದುರ್ಗ:೧೯೯೨)

ಈಗಾಗಲೇ ಕನ್ನಡ ಕಾವ್ಯಕ್ಷೇತ್ರಕ್ಕೆ ಸುಪರಿಚಿತರಾದ ಶ್ರೀ ಸರಜೂ ಕಾಟಕರ ಅವರು ಮೊದಲಿನಿಂದಲೂ ನವ್ಯ, ಬಂಡಾಯ, ದಲಿತ ಧೋರಣೆಗಳನ್ನು ತಮ್ಮ ಕಾವ್ಯದ ಬಂಡವಾಳ ವಾಗಿಟ್ಟುಕೊಂಡು ಬಂದವರು. ಈಗ ತಮ್ಮ ಹೊಸ ಕವನ ಸಂಕಲನ `ಏಕಾಂತದ ಮನುಷ್ಯ'ದಲ್ಲೂ ಕೂಡ ಅವೆಲ್ಲವುಗಳೂ ಮೈಗೂಡಿಸಿಕೊಂಡು ಬಂದದ್ದು ತುಂಬಾ ಗಮನಾರ್ಹ.

ಪ್ರಾರಂಭದ ಕೆಲವು ಕವಿತೆಗಳು `ಗಜಲ್' ಮಾದರಿಯಲ್ಲಿ ಮೂಡಿ ಬಂದರೆ `ನತ್ತು', `ಗೆ' ಇಂಥ ಕವಿತೆಗಳು ನವ್ಯದ ಧಾಟಿಯಲ್ಲಿ ಸುಳಿದು ಹೋಗುತ್ತವೆ. ಅದು ಅಲ್ಲದೆ ಕೆಲವು ಕವಿತೆಗಳು ರಾಜಕೀಯ ಸ್ಥಿತಿಯನ್ನು ಧ್ವನಿಸುತ್ತವೆ.

ಪರವಿರೋಧಗಳ ಸಂಬಂಧವನ್ನು `ತಿರಸ್ಕಾರ' ದಲ್ಲಿ ಕಂಡರೆ `ಪ್ರೀತಿ' ಯಲ್ಲಿ ಪರ ವಿರೋಧವಿಲ್ಲದ್ದನ್ನು ಕಾಣುತ್ತೇವೆ. ಇದು ಅಲ್ಲದೆ `ನತ್ತು' ಕವಿತೆಯಲ್ಲಿ ಕವಿ ಪ್ರಕೃತಿ ಅಂದರೆ ಅವಳನ್ನು ಪ್ರೀತಿಸಿದ್ದು, ಚಂದ್ರ, ನಕ್ಷತ್ರ, ಆಕಾಶ, ಕಲ್ಪನೆಗಳ ಮುಖಾಂತರ ಕವಿತೆಯನ್ನು ಸೊಗಸಾಗಿ ಚಿತ್ರಿಸಿದ್ದಾರೆ.

ಇಂದಿನ ಪರಿಸ್ಥಿತಿಯ ಬದುಕಿನಲ್ಲಿ ಎಷ್ಟೇ ಸುಖದ ತೃಪ್ತಿ ಕಂಡರೂ ಕಡಿಮೆ. ಆದ್ದರಿಂದ ಕವಿಯು ತನ್ನ ಬದುಕಿನಲ್ಲಿ ಯಾವುದೇ ಖುಷಿಗೊಳ್ಳುವ ಪ್ರಸಂಗ ಬಂದರೂ ಖುಷಿ ಪಡಲಾರೆ ಎಂದು `ನಿರ್ಧಾರ' ಕೈಗೊಳ್ಳುತ್ತಾನೆ. ಇದು ಮೆಚ್ಚುವಂಥದ್ದು. ಇತ್ತಿತ್ತಲಾಗಿ

ಸಮಾಜದಲ್ಲಿ ರಾಜಕೀಯ `ನಾಯಿಗಳು' ತುಣುಕು ಎಲುಬಿಗಾಗಿ ಕಚ್ಚಾಡುವುದನ್ನು ಹೇಳುತ್ತ ಕಟುವಾಗಿ ಟೀಕಿಸಿದ್ದಾರೆ. `ಅವರು ' ಕವಿತೆಯಲ್ಲಿ ನಮ್ಮದು ನಾವೇ ಮಾಡಿಕೊಂಡ ದುರಂತದ ನೋವುಗಳನ್ನು ಕವಿಯು ತೋಡಿಕೊಳ್ಳಲು ಯತ್ನಿಸಿದ್ದಾರೆ. ಇವೆಲ್ಲದರ ನಡುವೆ ಕವಿತೆಗಳನ್ನು ಬರೆಯುವ `ಹಸಿವು' ಇನ್ನು ಹೆಚ್ಚಾಗಲಿ ಎಂದು ಕವಿ ಆಶಿಸುತ್ತಾನೆ. ಅದೇ ರೀತಿ :

ಪಲ್ಲಕ್ಕಿಯಲ್ಲಿ ಕುಳಿತು
ತೇರಿನ ಜೊತೆ
ಓಣಿ ಓಣಿ ತಿರುಗುವ
ಸ್ವತಃ ದೇವರಿಗೂ
ಸಂಡಾಸು ಬಂದರೆ
ಆತನೂ ಪಾಯಖಾನೆ
ಇದ್ದಲ್ಲಿಗೆ ಓಡಬೇಕಾಗುತ್ತದೆ. (ದೇವರು ಮತ್ತು ಪಾಯಖಾನೆ)

ಎಂಬುದು ಸತ್ಯವಾಗಿದೆ. ಇಂಥ ವೈಚಾರಿಕ ಮನೋಭಾವವುಳ್ಳ, ಶ್ರೀ ಸರಜೂ ಕಾಟಕರ ಅವರು ಅದನ್ನು ಮೊದಲಿನಿಂದಲೂ ಉಳಿಸಿಕೊಂಡು ಬಂದಿದ್ದಾರೆ.

ಇತ್ತೀಚಿಗೆ ಅನೇಕ ಕವಿಗಳು `ಪಾರ್ಟ ಟೈಂ' ಕವಿಗಳಾಗಿ ಹುಟ್ಟುತ್ತಿದ್ದಾರೆ. ಎಂಬುದನ್ನು ಕವಿ ಸರಜೂ ಅವರು ಅರಿತುಕೊಂಡಿದ್ದಾರೆ. ಕವಿಯು ಭಾಷೆಯ ದೃಷ್ಟಿಯಿಂದ ಸಾಕಷ್ಟು ಯಶಸ್ವಿಯಾಗಿದ್ದಾರೆ. ಅದರಂತೆ ಇನ್ನೂ ಹೆಚ್ಚಾಗಿ ಸಂಕೀರ್ಣವಾದ ಕವಿತೆಗಳು ಅವರಿಂದ ಹೊರಬರುವದರಲ್ಲಿ ಯಾವುದೇ ರೀತಿಯ ಸಂದೇಹವಿಲ್ಲ.

***

ಶ್ರೀ ಮೋಹನ ನಾಗಮ್ಮನವರ ಅವರು ತಮ್ಮ ಪ್ರಥಮ ಕವನ ಸಂಕಲನದ ಮೂಲಕ ಇತ್ತೀಚಿನ ತರುಣ ಪೀಳಿಗೆಯ ಅತ್ಯುತ್ತಮ ಬರಹಗಾರರೆಂದು ಹೆಸರು ಮಾಡಿ ಕಾವ್ಯಕ್ಷೇತ್ರಕ್ಕೆ ತನ್ನದೇ ಆದ ಸ್ಥಾನವನ್ನು ಉಳಿಸಿಕೊಂಡಿದ್ದಾರೆ.

ಶೀರ್ಷಿಕೆಯ ಕವನ `ವಿಧಾನ ಸೌಧವು` ಕವಿ ಹೇಳಿದಂತೆ -

ಜಡ ಗೋಡೆಗಳ ಉಡಿಯಡಿಗೆ ಅಡಗಿ ಹೋದ
'ವಿಧಿ ವಿಧಾನಗಳ ಈ ಸೌಧ
ಅರಮನೆ, ಗುರು ಮನೆಗಳ ಹೋಳಿ' `ನೆಟ್ಟ ಗೋರಿಗಲ್ಲು'

ಆಗಿ ನಿಂತಿರುವದೆಂದು ಇಡೀ ಕವನದುದ್ದಕ್ಕೂ ಸ್ಪಷ್ಟತೆಯನ್ನು ತೋರಿಸುತ್ತದೆ.

ಕವಿಯು ತನ್ನ ಬದುಕಿನಲ್ಲಿ ಕಂಡುಂಡ ಅನೇಕ ದುರಂತಗಳನ್ನು ಕಾವ್ಯದಲ್ಲಿ ಚಿತ್ರಿಸಲು `ಬಂಡಾಯ ಪ್ರಜ್ಞೆ' ಯನ್ನು ತಮ್ಮ ನಿಲುವನ್ನಾಗಿಸಿ ಕೊಂಡಂತಿದೆ. ಅದರಂತೆ `ಇತ್ತೀಚಿನ

ಇಂಡಿಯಾ' `ಕೃಷ್ಣ, ಕನಕರ ನಂತರ' `ಕರ್ಫ್ಯೂ' ಇಂಥ ಕವಿತೆಗಳಲ್ಲಿ ಬಂಡಾಯದ ಜೊತೆ ವೈಚಾರಿಕ ಮನೋಭಾವವನ್ನು ಗುರುತಿಸಬಹುದು. ಕವಿಯು ತನಗೆ ಬೇಡಾದದ್ದನ್ನು `ಮಾತೆಲ್ಲ ಸತ್ತು' ಕವಿತೆಯ ಮೂಲಕ ತಿರಸ್ಕರಿಸಿದ್ದಾರೆ. ಅಲ್ಲದೆ ನೀರಸದ ಘಳಿಗೆಗಳು `ನೀನಿರದ ಹೊತ್ತು' `ವಿಷಾದ ಗೀತೆ' ಯಾಗಿ ನಿಲ್ಲುತ್ತದೆ.

ಕೈ ಬಿಟ್ಟು ಹೋದವಳು ಮತ್ತೆ ವ್ಯರ್ಥವಾಗಿ `ನೆನಪಾಗ ಬ್ಯಾಡನೀ' ಎಂದು ಸೂಚಿಸುತ್ತಾನೆ. ಇಂಥ ಜಾನಪದ ಧಾಟಿಯಲ್ಲಿ ಹೆಣೆದ ಕವನಗಳನ್ನು ಈ ಸಂಕಲನದುದ್ದಕ್ಕೂ ಕಾಣಬಹುದು.

ಈ ಸಂಕಲನದ ಅನೇಕ ಕವಿತೆಗಳು ಅಲ್ಲಲ್ಲಿ ವಾಚ್ಯವೆನಿಸುವದರ ಜೊತೆ ಬರವಣಿಗೆಯ ಶೈಲಿ ಏಕತಾನತೆಯಿಂದ ಹೊರ ಹೊಮ್ಮಿದೆ. ಅಲ್ಲದೆ ಕೃತಿಯುದ್ದಕ್ಕೂ ನೋಡಿದಾಗ ಕವಿ ಹೃದಯದಿಂದ ಅನೇಕ ರೀತಿಯ ನೋವುಗಳು ಹೊರಬಂದ ಚಿತ್ರಗಳೇ ಜಾಸ್ತಿ. `ಇದು ಯಾಕೆ ಹೀಗೆ' ಎಂದು ಕವಿಯೇ ಸ್ವತಃ ಪ್ರಶ್ನಿಸಿಕೊಂಡು ಕುತೂಹಲಗೊಂಡಿದ್ದಾರೆ. ಈ ನಿಟ್ಟಿನಲ್ಲಿ ಸಾಗಿದ ಶ್ರೀಮೋಹನ ನಾಗಮ್ಮನವರು ತಮ್ಮ ಮುಂದಿನ ರಚನೆಗಳಲ್ಲಿ ಸಂಕೀರ್ಣವಾದ ಪದ್ಯಗಳನ್ನು ನೀಡುತ್ತಾರೆಂದು ವಿಶ್ವಾಸದಿಂದ ಹೇಳಬಹುದು.

***

ಧಾರವಾಡದ ಅನೇಕ ತರುಣ ಪೀಳಿಗೆಯ ಅತ್ಯಂತ ಚಿಂತನಶೀಲ ಕವಿಗಳಾದ ಶ್ರೀಯುತ ಮಹೇಶ ನಾವಳ್ಳಿಯವರ ಪ್ರಥಮ ಕವನ ಸಂಕಲನ `ಸಂಗಾತಿ'.

ಆಗಲೇ ಪ್ರೀತಿ ಪ್ರೇಮದ ಬಗ್ಗೆ ಇಂಥ ಅನೇಕ ಕವನ ಸಂಕಲನಗಳನ್ನು ಅನೇಕ ಕವಿಗಳು ಬರೆದಿದ್ದರೂ ಶ್ರೀ ನಾವಳ್ಳಿಯವರು ಗಂಡುಹೆಣ್ಣಿನ ನಡುವೆ ಇರತಕ್ಕಂಥ `ಸ್ಥಾನ ಮಾನ' ದ ಸಂದರ್ಭಗಳನ್ನು ಇಲ್ಲಿ ಹಿಡಿದಿಡಲು ಹೆಚ್ಚು ಪ್ರಯತ್ನಿಸಿದ್ದಾರೆಂದೆನಿಸುತ್ತದೆ.

ಕವಿಯು ತನ್ನ ಕವಿತೆ ಬಗ್ಗೆ ತಾನೇ ಹೇಳಿಕೊಳ್ಳುವಂತೆ -

ನಾನು ಬರೆದ ಕವಿತೆ
ಥೇಟ ನಿನ್ನಂತೆ ಇತ್ತು
ಅದರ ಪಲ್ಲವಿಯೋ
ನಿನ್ನ ಮುದ್ದು ಮುಖದ ಹಾಗೆ
ಅದರ ಅರ್ಥದ ಮಿನುಗು

ನಿನ್ನ ಕಣ್ಣು ದೀಪದ ಹಾಗೆ
ಹೀಗಾಗಿ ನೀನೇ ಕವಿತೆಯಾಗಿದ್ದೆ
ಕವಿತೆ ನಿನ್ನದಾಗಿತ್ತು

ಇಡೀ ಅವಳ ಜೊತೆಗಿನ ಅನುಭವದಿಂದ ಮೂಡಿ ಬಂದ ಕವಿತೆ ಅವಳಾಗಿದ್ದಳು. ಅವಳೇ `ಸಂಗಾತಿ' ಯಾಗಿ ಅರ್ಥಾತ್ ಈ ಸಂಕಲನವೇ ಕೃತಿಯಾಗಿ ನಿಂತಿದೆ ಎಂದು ಕವಿಯು ಸಂಕೀರ್ಣವಾದ ರೀತಿಯಲ್ಲಿ ಹೇಳುವುದರ ಜೊತೆಗೆ ತನ್ನ `ಸಂಗಾತಿ' ಕೃತಿಗೆ ಅರ್ಥಪೂರ್ಣತೆಯನ್ನು ತಂದುಕೊಳ್ಳುತ್ತಾನೆ. ಆದರೆ ಕೆಲವೊಂದು ಸಲ ಕವಿಯು ತನ್ನ ಕವಿತೆಯಲ್ಲಿ

`ಹೀಗಾಗಿ ನೀನೇ ಕವಿತೆಯಾಗಿದ್ದೆ' ಎಂದು ಹೇಳಿದ ನಂತರ `ಕವಿತೆ ನಿನ್ನದಾಗಿತ್ತು' ಎಂದು ಹೇಳುವ ಅವಶ್ಯಕತೆ ಇರಲಿಕ್ಕಿಲ್ಲವೆಂದೆನಿಸುತ್ತದೆ. ಅವಳೇ ಕವಿತೆಯಾದಾಗ, ಕವಿತೆ ಅವಳದು ಹೇಗೆ ಆಗುತ್ತದೆ? ಈ ರೀತಿ ಆಗಲು ಕವಿಯು ತನ್ನ ಭಾವ ಲಹರಿಯ ಸ್ಫೂರ್ತಿಯಿಂದ ಗೊಂದಲಕ್ಕೀಡಾಗಿದ್ದಾನೆಂದು ಅನಿಸುತ್ತದೆ. ಆದರೂ ಕವಿ ಮಹೇಶ ನಾವಳ್ಳಿಯವರು ತಮ್ಮ ಸಂಕಲನದುದ್ದಕ್ಕೂ ಅನೇಕ ಹೊಸ ಬಗೆಯ ಪ್ರೀತಿಯ ಸಂಕೇತಗಳ ಮೂಲಕ ಕಾವ್ಯದ ಸೊಗಸನ್ನು ಹೆಚ್ಚಿಸುವಲ್ಲಿ ಯಶಸ್ವಿಯಾಗಿದ್ದಾರೆ. ಇದರ ಜೊತೆ ಭಾಷೆಗೆ ಇರಬೇಕಾದ `ಲಯ' ಇನ್ನಷ್ಟು ಮೈಗೂಡಿಸಿಕೊಂಡರೆ, ಮುಂದೆ ಪ್ರತಿಭಾವಂತ ಕವಿಯಾಗುವರೆಂದು ಸ್ಪಷ್ಟವಾಗಿ ಹೇಳಬಹುದು.

ಪ್ರೀತಿ-ಪ್ರೇಮದ ವಸ್ತುವಿಗೆ ಸಂಬಂಧಿಸಿದ ಈ ಕವನ ಸಂಕಲನವಿದ್ದರೂ ಸಹ ಅದರಲ್ಲಿಯೇ ಕವಿ ತನ್ನ ಬದುಕಿನ ಅನೇಕ ಚಿಂತನಶೀಲ ವಿಚಾರಗಳಾದ, ಆದರ್ಶ, ವ್ಯಕ್ತಿತ್ವಗಳ, ಜೊತೆಗೆ ಸಾಮಾಜಿಕ ಸಂಬಂಧಗಳು ಕಾವ್ಯದಲ್ಲಿ ಬೆಸೆದುಕೊಂಡಿರುವದು ವಿಶೇಷವಾಗಿದೆ.

***

ಈಗಾಗಲೇ `ನೋವಿನ ಎಳೆಗಳು' ತಮ್ಮ ಪ್ರಥಮ ಕವನ ಸಂಕಲನದಿಂದ ಅನೇಕ ಸಾಹಿತ್ಯಾಸಕ್ತರಿಗೆ ಚಿರಪರಿಚಿತರಾದ ಪ್ರೊ. ರಾಜೇಂದ್ರ ಅಣ್ಣಾನವರ ಅವರು ತಮ್ಮ ದ್ವಿತೀಯ ಕವನ ಸಂಕಲನ `ಕತ್ತಲೆ ದಾರಿ' ಯನ್ನು ಪ್ರಕಟಿಸುವುದರ ಮೂಲಕ ಕನ್ನಡಿಗರಿಗೆ ಮತ್ತೊಂದು ಕಾಣಿಕೆ ಕೊಟ್ಟಂತಾಗಿದೆ. ಈ ಸಂಕಲನವು ಸಾಮಾಜಿಕ, ವೈಯಕ್ತಿಕ, ಇಂಥ ಅನೇಕ ವಸ್ತುವಿನ ಚಿತ್ರಗಳನ್ನು ಒಳಗೊಂಡಿದೆ.

`ಮಳೆ', `ಕಪ್ಪುರೋರೊ', `ಯಂತ್ರ' ಇಂಥ ಕವಿತೆಗಳು ಅಮೂರ್ತವಿದ್ದದ್ದನ್ನು ಮಾತ್ರ ರೂಪಗೊಳಿಸುವಲ್ಲಿ ಅನೇಕ ರೂಪಕಗಳೊಂದಿಗೆ ಸಫಲಗೊಂಡಿವೆ. ಅಲ್ಲದೆ ನಿಸರ್ಗದ 'ದುಂಬಿ', `ಗೂಗೆ' ಇಂಥ ಪ್ರತಿಮೆಗಳು ಕೂಡ ಇವರ ಕಾವ್ಯದಲ್ಲಿ ಕಾಣಬಹುದು.

ಒಂದು ಕವಿತೆ ರೂಪಗೊಳ್ಳಬೇಕಾದರೆ, ಕವಿಯು ತಾನು ಅನುಭವಿಸಿದ ವಸ್ತು ಅಷ್ಟೇ ಅಲ್ಲ ಅದಕ್ಕೆ ಬಳಸಬೇಕಾದ ಸಮರ್ಥ ಭಾಷೆಯು ಕೂಡ ಅಷ್ಟೇ ಮುಖ್ಯ. ಇಲ್ಲಿ ಪ್ರೊ. ರಾಜೇಂದ್ರ ಅಣ್ಣಾನವರು ಕೆಲವು ಸಲ ವಾಚ್ಯವಾಗಿ ಹೇಳುವುದರಿಂದ `ಬಂಧ' ಸಡಿಲಗೊಳ್ಳುವದು ಸಹಜವಾಗಿದೆ. ಇದ್ದ ವಸ್ತು ಸಹ ಅಷ್ಟೊಂದು ಓದುಗನಲ್ಲಿ ಪರಿಣಾಮಕಾರಿಯಾಗಿ ಮೂಡದೆ ಹೋಗುವದು ಸಹಜವಾಗಿದೆ. ಪ್ರೊ. ರಾಜೇಂದ್ರ ಅಣ್ಣಾನವರ ಅವರು ತಮ್ಮ ಕಾವ್ಯಕ್ಕೆ ಇನ್ನಷ್ಟು ಲಯ, ವಿಶಿಷ್ಟವಾದ ಕಲ್ಪನೆಗಳೊಂದಿಗೆ ಭಾಷೆಯ ಸೊಗಡನ್ನು ಹೆಚ್ಚಿಸಿದ್ದರೆ ಒಳ್ಳೆಯ ಕವಿಯಾಗಬಲ್ಲರು.

ಲೇಖಕರ ಪರಿಚಯ

೧ ಶ್ರೀ ಕೆಳದಿ ಗುಂಡಾ ಜೋಯಿಸ್
ಕೆಳದಿ ವಸ್ತು ಸಂಗ್ರಹಾಲಯ ಕೆಳದಿ
ಸಾಗರ ತಾಲೂಕು, ಶಿವಮೊಗ್ಗ ಜಿಲ್ಲೆ

೨ ಪ್ರೊ. ಮಹೇಶ ತಿಪ್ಪಶೆಟ್ಟಿ
ವಿದ್ಯಾನಗರ
ಹುನಗುಂದ - ೫೮೭ ೧೧೮

೩ ಡಾ. ಸರಸ್ವತಿ
ಕನ್ನಡ ಅಧ್ಯಾಪಕಿ
ಪ್ರಾಯೋಗಿಕ ವಿದ್ಯಾಸಂಸ್ಥೆ, ಮೈಸೂರು.

೪ ಡಾ. ಬಿ.ಪಿ. ಪಾಟೀಲ
ಪ್ರವಾಚಕರು, ಕನ್ನಡ ಅಧ್ಯಯನ ಪೀಠ
ಕ.ವಿ.ವಿ. ಧಾರವಾಡ

೫ ಶ್ರೀಮತಿ ಹನುಮಾಕ್ಷಿ ಗೋಗಿ
ಸಹಕಾರ ಸಂಘಗಳ ಸಹಾಯಕ ನಿಬಂಧಕರು
ನವನಗರ, ಹುಬ್ಬಳ್ಳಿ

೬ ಡಾ. ರಾಮಕೃಷ್ಣ ಮರಾಠೆ
ಬಿ. ಕೆ. ಮಹಾವಿದ್ಯಾಲಯ
ಕ್ಲಬ್ ರಸ್ತೆ, ಬೆಳಗಾಂವಿ - ೫೯೦ ೦೦೧

೭ ಶ್ರೀಮತಿ. ಸರೋಜ ಇಟ್ಟಣ್ಣವರ
ತಾ. ಬೀಳಗಿ
ಜಿ. ಬಿಜಾಪುರ

೮ ಡಾ. ವೀರಣ್ಣ ರಾಜೂರ
ಪ್ರಾಧ್ಯಾಪಕರು
ಕನ್ನಡ ಅಧ್ಯಯನ ಪೀಠ, ಕ.ವಿ.ವಿ. ಧಾರವಾಡ

೯ ಡಾ. ರು. ಮ. ಷಡಕ್ಷರಯ್ಯ
ಕಾರ್ಯನಿರ್ವಾಹಕ ನಿರ್ದೇಶಕರು
ಕನ್ನಡ ಸಂಶೋಧನ ಸಂಸ್ಥೆ, ಕ.ವಿ.ವಿ. ಧಾರವಾಡ

೧೦. ಶ್ರೀ ಎಂ. ಮುನಿಸ್ವಾಮಯ್ಯ
ಭೂ ವಿಜ್ಞಾನಿಯವರ ಕಚೇರಿ
ಅಂತರ್ಜಲ ವಿಭಾಗ, ಜಿಲ್ಲಾ ಪಂಚಾಯತ್
ಗಣಿ ಮತ್ತು ಭೂವಿಜ್ಞಾನ ಇಲಾಖೆ
ಧಾರವಾಡ

೧೧. ಡಾ. ಬಿ. ಆರ್. ಹಿರೇಮಠ
ಪ್ರಾಧ್ಯಾಪಕರು, ಕನ್ನಡ ಅಧ್ಯಯನ ಪೀಠ
ಕ.ವಿ.ವಿ. ಧಾರವಾಡ

೧೨. ಶ್ರೀ ಡಿ. ಬಿ. ಢಂಗ
ಶಾನಭಾಗ ಕಂಪೌಂಡ, ಸಪ್ತಾಪೂರ ೩ನೇ ಕ್ರಾಸ್
ಧಾರವಾಡ - ೫೮೦ ೦೦೧
